ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ


# Swabhimani Sahakari
# ಸ್ವಾಭಿಮಾನಿ ಸಹಕಾರಿ

Pages : 40 / 12₹

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 17
Issue - 07
July - 2020











ಸೌಹಾರ್ದ ಸಹಕಾರಿಗಳ
ಸಂಖ್ಯೆ : 5060

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1337





ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

> ಕೊರೋನಾ ಸೋಂಕಿತರ ಜೀವ ರಕ್ಷಣೆಯಲ್ಲಿ ರಾಜ್ಯದ ಆರೋಗ್ಯ ಇಲಾಖೆ ವಿಶೇಷವಾಗಿ ಆಶಾ ಕಾರ್ಯಕರ್ತೆಯರ ಕಾರ್ಯನಿರ್ವಹಣೆ ನಿಜವಾಗಿಯೂ ಶ್ಲಾಘನೀಯ ಹಾಗು ಅಭಿನಂದನಾರ್ಹ. ತಮ್ಮ ಜೀವನವನ್ನೇ ಮುಡುಪಾಗಿಟ್ಟು ಹಗಲಿರುಳು ಈ ಕೊರೋನಾ ರೋಗಿಗಳನ್ನು ಶುಶ್ರೂಷೆ ಮಾಡುವಲ್ಲಿ ತೊಡಗಿರುವುದು ಸಂತೋಷಕರ. ಇವರ ಕಾರ್ಯದಲ್ಲಿ ಶ್ರದ್ಧೆ ಮಾನವೀಯ ದೃಷ್ಟಿಯಿಂದ ನೀಡುತ್ತಿರುವ ಸೇವೆಯಿಂದಾಗಿಯೇ ಕೊರೋನಾ ರೋಗಿಗಳಿಗೆ ಮಾನಸಿಕ ಸ್ಥೈರ್ಯ ಬಂದು ಅವರುಗಳು ಗುಣಮುಖರಾಗುತ್ತಿರುವುದನ್ನು ಗಮನಿಸಬಹುದಾಗಿದೆ.

# ಜೀವ ರಕ್ಷಣೆ ಮೊದಲು, ನಂತರ ಜೀವನ ನಿರ್ವಹಣೆ ಆಶಾಕಾರ್ಯಕರ್ತೆಯರಿಗೆ ಪ್ರೋತ್ಸಾಹಧನ ವಿತರಣೆ : ಸೌಹಾರ್ದ ಸಹಕಾರಿಗಳ ಆಸಕ್ತಿ ಶ್ಲಾಘನೀಯ : ಅಭಿನಂದನೀಯ

**ಆತ್ಮೀಯ ಸಹಕಾರಿ ಬಂಧುಗಳೆ,**

ರಾಜ್ಯದ ಎಲ್ಲ ಸಹಕಾರಿಗಳಿಗೆ ಭೀಮನ ಅಮಾವಾಸ್ಯೆ ಹಾಗೂ ವರಲಕ್ಷ್ಮೀ ಹಬ್ಬದ ಶುಭಾಶಯಗಳು. ಮಾತೆ ಶ್ರೀ ವರಲಕ್ಷ್ಮೀದೇವಿ ನಮ್ಮೆಲ್ಲ ಕಷ್ಟಗಳನ್ನು ನಿವಾರಣೆ ಮಾಡುವಂತೆ ವಿಶೇಷವಾಗಿ ಕೊರೋನಾ ಮಹಾಮಾರಿಯನ್ನು ನಮ್ಮ ದೇಶದಿಂದ ಇಡೀ ವಿಶ್ವದಿಂದ ಓಡಿಸುವಂತೆ ಪ್ರಾರ್ಥಿಸೋಣ. ಮುಂಬರುವ ದಿನಗಳಲ್ಲಿ ಎಲ್ಲರಿಗೂ ಒಳ್ಳೆಯ ಆರೋಗ್ಯ ಹಾಗೂ ಈ ತೊಂದರೆಗಳನ್ನು ನಿವಾರಣೆ ಮಾಡಲಿ. ನಮಗೆಲ್ಲ ಈಗ ಬಂದಿರುವ ಹಣಕಾಸಿನ ಸವಾಲನ್ನು ಧೈರ್ಯವಾಗಿ ಎದುರಿಸಿ ಎಲ್ಲರೂ ಒಟ್ಟಾಗಿ ಮುಂದುವರೆಯೋಣ ಎಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

ಆತ್ಮೀಯರೆ ತಮಗೆಲ್ಲ ತಿಳಿದಂತೆ ವಿಶ್ವದಾದ್ಯಂತ ಕೊರೋನಾ ಸೋಂಕಿತರ ಸಂಖ್ಯೆ 1 ಕೋಟಿಗೂ ಹೆಚ್ಚಿದೆ. 5,46,964 ಕ್ಕಿಂತಲೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ. ನಮ್ಮ ದೇಶದಲ್ಲಿಯೇ ಕೊರೋನಾ ಸೋಂಕಿತರ ಸಂಖ್ಯೆ 7,44,006 ಇದ್ದು ಇದರಲ್ಲಿ 20,653 ಜನರು ಸಾವನ್ನಪ್ಪಿದ್ದಾರೆ. ಕರ್ನಾಟಕದಲ್ಲಿ ಕೊರೋನಾ ಸೋಂಕಿತರ ಸಂಖ್ಯೆ 26,815 ಇದ್ದು 416 ಜನರು ಸಾವನ್ನಪ್ಪಿದ್ದಾರೆ. ವಿಶ್ವದ ಯಾವ ದೇಶಗಳನ್ನೂ ಈ ಕೊರೋನಾ ಬಾಧಿಸದೇ ಇರುವುದಿಲ್ಲ ಹೀಗಾಗಿ ಇಂತಹ ಪರಿಸ್ಥಿತಿಯಲ್ಲಿ ಸಮಾಜದ ಎಲ್ಲ ವರ್ಗದ ಜನರು ಈ ಕೊರೋನಾ ಮಹಾಮಾರಿಯ ನಿವಾರಣೆ ಹಾಗೂ ಹರಡುವಿಕೆ ವಿರುದ್ಧ ಹೋರಾಟ ಮಾಡುವುದು ಅನಿವಾರ್ಯ. ಮೊದಲು ಜೀವ ರಕ್ಷಣೆಗೆ ಹೋರಾಟ ನಂತರ ಜೀವನ ನಿರ್ವಹಣೆಯ ಹೋರಾಟ ಇದು ಇಂದಿನ ಅಗತ್ಯತೆ.

ಕೊರೋನಾ ಸೋಂಕಿತರ ಜೀವ ರಕ್ಷಣೆಯಲ್ಲಿ ರಾಜ್ಯದ ಆರೋಗ್ಯ ಇಲಾಖೆ ವಿಶೇಷವಾಗಿ ಆಶಾ ಕಾರ್ಯಕರ್ತೆಯರ ಕಾರ್ಯನಿರ್ವಹಣೆ ನಿಜವಾಗಿಯೂ ಶ್ಲಾಘನೀಯ ಹಾಗು ಅಭಿನಂದನಾರ್ಹ. ತಮ್ಮ ಜೀವನವನ್ನೇ ಮುಡುಪಾಗಿಟ್ಟು ಹಗಲಿರುಳು ಈ ಕೊರೊನಾ ರೋಗಿಗಳನ್ನು ಶುಶ್ರೂಷೆ ಮಾಡುವಲ್ಲಿ ತೊಡಗಿರುವುದು ಸಂತೋಷಕರ. ಇವರ ಕಾರ್ಯದಲ್ಲಿ ಶ್ರದ್ಧೆ ಮಾನವೀಯ ದೃಷ್ಟಿಯಿಂದ ನೀಡುತ್ತಿರುವ ಸೇವೆಯಿಂದಾಗಿಯೇ ಕೊರೊನಾ ರೋಗಿಗಳಿಗೆ ಮಾನಸಿಕ ಸ್ಥೈರ್ಯ ಬಂದು ಅವರುಗಳು ಗುಣಮುಖರಾಗುತ್ತಿರುವುದನ್ನು ಗಮನಿಸಬಹುದಾಗಿದೆ.

ರಾಜ್ಯದ ಸೌಹಾರ್ದ ಸಹಕಾರಿಗಳು ಅವರವರ ವ್ಯಾಪ್ತಿಯಲ್ಲಿ ಬರುವ ಈ ಆಶಾಕಾರ್ಯಕರ್ತೆಯರ ಮನೋಬಲವನ್ನು ಹೆಚ್ಚಿಸುವಂತೆ ಅವರನ್ನು ಈ ಕಾರ್ಯದಲ್ಲಿ ಇನ್ನೂ ಹೆಚ್ಚು ಶ್ರದ್ಧೆಯಿಂದ ತೊಡಗಿಸಿಕೊಳ್ಳುವಂತೆ ಅವರನ್ನು ಗೌರವಿಸಿ ಅವರಿಗೆ ಪ್ರೋತ್ಸಾಹ ಧನವನ್ನು ನೀಡುವುದರ ಮೂಲಕ ಈ ಕೊರೋನಾ ಮಹಾಮಾರಿ ನಿವಾರಣೆ ಮಾಡುವಲ್ಲಿ ಪರೋಕ್ಷವಾಗಿ ಸಹಕರಿಸುತ್ತಿರುವುದು ಶ್ಲಾಘನೀಯ. ಇದುವರೆಗೂ ಕೋವೀಡ್–19 ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ 1 ಕೋಟಿಗೋ ಹೆಚ್ಚು ವಂತಿಗೆಯನ್ನು ನೀಡುವುದರ ಜೊತೆಗೆ, ರಾಜ್ಯದ ಹಲವು ಸೌಹಾರ್ದ ಸಹಕಾರಿಗಳು 1889 ಆಶಾ ಕಾರ್ಯಕರ್ತೆಯರಿಗೆ ಗೌರವಿಸಿ ರೂ. 54,01,000/– ಪ್ರೋತ್ಸಾಹಧನವನ್ನು ನೀಡಿರುವುದು ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಸಂದ ಗೌರವವೆಂದು ಭಾವಿಸುತ್ತೇನೆ. ಎಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಇದೇ ರೀತಿಯಲ್ಲಿ ಇನ್ನೂ ಹೆಚ್ಚಿನ ಸೌಹಾರ್ದ ಸಹಕಾರಿಗಳು ಮುಂಬರುವ ದಿನಗಳಲ್ಲೂ ಈ ಮಹಾಮಾರಿ ತೊಲಗುವವರೆವಿಗೂ ಮುಂದುವರೆಸಿ ಸಹಕರಿಸುತ್ತೀರೆಂದು ಭಾವಿಸುತ್ತೇನೆ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ...................................... 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ...................................... 5, 6, 8–13
ಕರ್ನಾಟಕ ಸೌಹಾರ್ದ ಸಹಕಾರಿ ಸಂಘಗಳ ವಾರ್ಷಿಕ ಸಾಮಾನ್ಯ ಸಭೆಯ ಅವಧಿ ವಿಸ್ತರಣೆಯ ಸುತ್ತೋಲೆ ....................... 7
ಸೌಹಾರ್ದ ಸಹಕಾರಿಗಳ ಸಮಾಚಾರಗಳು ... ........................................................ 14–33
ಲೇಖನ........................................ 34–40

# ಸಂಪಾದಕೀಯ

## ಬ್ಯಾಂಕಿಂಗ್ ರೆಗ್ಯುಲೇಶನ್ ಕಾಯ್ದೆ ತಿದ್ದುಪಡಿ : ರಿಸರ್ವ್ ಬ್ಯಾಂಕಿಗೆ ಹೆಚ್ಚಿನ ಅಧಿಕಾರ

ದೇಶದ ಸಹಕಾರ ಕ್ಷೇತ್ರದಲ್ಲಿ ವಿಶೇಷವಾಗಿ ಪಟ್ಟಣ ಸಹಕಾರ ಬ್ಯಾಂಕುಗಳ ಇತಿಹಾಸದಲ್ಲಿ ಕೇಂದ್ರ ಸರಕಾರ ದಿನಾಂಕ 26 ಜೂನ್ 2020 ರಂದು ಘನತೆವೆತ್ತ ರಾಷ್ಟ್ರಪತಿಗಳು ಅಂಗೀಕಾರ ಮಾಡಿರುವ ಸುಗ್ರೀವಾಜ್ಞೆ ಕೆಲವು ಸಹಕಾರಿಗಳಲ್ಲಿ ಒಂದು ರೀತಿಯ ಅಸಮಾಧಾನವಾಗಿದ್ದರೇ ಠೇವಣಿದಾರರು ಸಂತೋಷಪಡುವಂತಾಗಿದೆ. ಕೆಲವು ಪಟ್ಟಣ ಸಹಕಾರ ಬ್ಯಾಂಕುಗಳ ರಿಸರ್ವ್ ಬ್ಯಾಂಕಿನವರ ಮಾರ್ಗದರ್ಶನವಿದ್ದಾಗ್ಯೂ ತೃಪ್ತಿಕರವಾಗಿ ಕಾರ್ಯನಿರ್ವಹಿಸದೆ ಠೇವಣಿದಾರರ ಹಿತಾಸಕ್ತಿಯನ್ನು ಕಾಪಾಡುವಲ್ಲಿ ವಿಫಲರಾಗಿರುವುದು ಹಾಗೂ ವಂಚನೆ ಮಾಡಿರುವುದನ್ನು ಗಮನಿಸಿದ ಕೇಂದ್ರ ಸರಕಾರ ಈ ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಕಾರಣವೆಂದು ಹೇಳಲಾಗಿದೆ.

ಈ ತಿದ್ದುಪಡಿ 3 ವರ್ಗದ ಬ್ಯಾಂಕುಗಳಿಗೆ ಅನ್ವಯಿಸುತ್ತದೆ. ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕುಗಳು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಹಾಗು ಪಟ್ಟಣ ಸಹಕಾರ ಬ್ಯಾಂಕುಗಳು. ದ್ವಿನಿಯಂತ್ರಣ ವ್ಯವಸ್ಥೆಯಿಂದ ಹಲವಾರು ಬಾರಿ ರಿಸರ್ವ್ ಬ್ಯಾಂಕಿನವರ ನಿರ್ದೇಶನಗಳನ್ನು ಸಲಹೆಗಳನ್ನು ಸರಕಾರಗಳು ಒಪ್ಪದೇ ಬ್ಯಾಂಕುಗಳ ಉತ್ತಮ ಕಾರ್ಯಾಚರಣೆಗೆ ತೊಂದರೆಯಾಗುತ್ತಿರುವುದನ್ನು ಗಮನಿಸಿದ ಕೇಂದ್ರ ಸರಕಾರ ತಿದ್ದುಪಡಿಗಳನ್ನು ಜಾರಿಗೆ ತಂದಿದೆ. ಪಟ್ಟಣ ಸಹಕಾರ ಬ್ಯಾಂಕುಗಳ ವಿಷಯದಲ್ಲೂ ರಿಸರ್ವ್ ಬ್ಯಾಂಕ್ ಸ್ಥಾಪನೆಯಾದ ದಿನದಿಂದಲೂ ದೇಶದ ಎಲ್ಲಾ ಸಹಕಾರ ಬ್ಯಾಂಕುಗಳ ಕಾರ್ಯನಿರ್ವಹಣೆಗೆ ಅಗತ್ಯವಾದ ನಿರ್ದೆಶನಗಳನ್ನು ಮಾರ್ಗದರ್ಶನಗಳನ್ನು ತರಬೇತಿಯನ್ನೂ ಸಹ ನೀಡುತ್ತ ಬಂದಿದೆ. ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಸರಿಯಾಗಿ ಪಾಲಿಸುತ್ತ ಬಂದಿರುವ ಸಹಕಾರ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತೀವೆ. ನಿರ್ದೆಶನಗಳನ್ನು ಪಾಲಿಸದಿರುವ ಕೆಲವು ಸಹಕಾರ ಬ್ಯಾಂಕುಗಳಿಗೆ ದಂಡ ವಿಧಿಸಿ ಅವುಗಳಿಗೆ ಶಿಕ್ಷಿಸುವುದರ ಮೂಲಕ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವಂತೆ ಆರ್.ಬಿ.ಐ ಕಾರ್ಯನಿರ್ವಹಿಸುತ್ತ ಬಂದಿದೆ. ಪರೋಕ್ಷವಾಗಿ ನಿಯಂತ್ರಣ ಸಾಧಿಸುವಂತಹ ಅನೇಕ ನಿರ್ದೇಶನಗಳನ್ನು ನೀಡುತ್ತ ಬಂದಿದೆಯಾದರೂ ಅನೇಕ ಸಂದರ್ಭಗಳಲ್ಲಿ ಈ ಸಹಕಾರ ಬ್ಯಾಂಕುಗಳ ಆಡಳಿತದಲ್ಲಿ ಹಿಡಿತ ಸಾಧಿಸಲು ರಿಸರ್ವ್ ಬ್ಯಾಂಕ್‌ಗೆ ಅವಕಾಶವಿರಲಿಲ್ಲ. ಇವೆಲ್ಲವುಗಳನ್ನು ಗಮನಿಸುತ್ತ ಬಂದ ಕೇಂದ್ರ ಸರಕಾರ ಠೇವಣಿದಾರರ ಹಿತದೃಷ್ಟಿಯಿಂದ ಮತ್ತು ಸಹಕಾರ ಬ್ಯಾಂಕುಗಳಲ್ಲಿ ಹಣಕಾಸಿನ ಶಿಸ್ತು ಅಗತ್ಯ ಎಂಬುವ ದೃಷ್ಟಿಯಿಂದ ಬ್ಯಾಂಕಿಂಗ್ ರೆಗ್ಯೊಲೇಶನ್ ಕಾಯ್ದೆಗೆ ತಿದ್ದುಪಡಿ ಅವಶ್ಯ ಎಂದು ಭಾವಿಸಿ ತಿದ್ದುಪಡಿಯನ್ನು ಸುಗ್ರೀವಾಜ್ಞೆಯ ಮೂಲಕ ಜಾರಿಗೆ ತಂದಿರುವುದು ಆರ್ಥಿಕ ತಜ್ಞರು, ಬ್ಯಾಂಕರ್‌ಗಳು ಸ್ವಾಗತಿಸಿದರೆ ಸಹಕಾರಿಗಳು ಸಹಕಾರ ಕ್ಷೇತ್ರ ಪ್ರಜಾಸತ್ತಾತ್ಮಕ ಪದ್ಧತಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಇದು ಸಹಕಾರಿಗಳ ಸ್ವಾಯತ್ತತೆಗೆ ವ್ಯವಹಾರಿಕ ಸ್ವಾತಂತ್ರಕ್ಕೆ ಹಿನ್ನಡೆಯಾಗುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬ್ಯಾಂಕಿಂಗ್ ರೆಗ್ಯುಲೇಶನ್ ಕಾಯ್ದೆ ತಿದ್ದುಪಡಿ 1949 ಯ ಕಲಂ 45(4) ಸಹಕಾರ ಬ್ಯಾಂಕುಗಳ ವಿಲೀನ ಹಾಗೂ ಬ್ಯಾಂಕುಗಳ ಪುನಶ್ಚೇತನಕ್ಕೆ ಆರ್.ಬಿ.ಐ ಗೆ ಅಧಿಕಾರ. ಕಲಂ 56 12(1) ಪ್ರಕಾರ ಹೆಚ್ಚುವರಿಯಾಗಿ ಸದಸ್ಯರಿಂದ ಅಥವಾ ವ್ಯಾಪ್ತಿಯಲ್ಲಿ ವಾಸವಾಗಿರುವ ಜನಸಾಮಾನ್ಯರಿಂದ ಶೇರುಗಳ ಸಂಗ್ರಹಿಕೆಗೆ ಕ್ರಮವಿಡುವ ಅಧಿಕಾರ ಕಲಂ 12(1)(1) ಪ್ರಕಾರ ಅನ್ ಸೆಕ್ಯುರ್ಡ್ ಬಾಂಡುಗಳ ಹಾಗೂ ಡಿಬೆಂಚರ್‌ಗಳನ್ನು ಹೊರಡಿಸುವುದು, ಕಲಂ12(2)(11) ಪ್ರಕಾರ ಷೇರುದಾರರು ತಮ್ಮ ಶೇರುಗಳನ್ನು ಹಿಂತೆಗೆದುಕೊಳ್ಳಲು ನಿರ್ಬಂಧ ಕಲಂ12(2)(1) ಬ್ಯಾಂಕಿನ ಶೇರು ಬಂಡವಾಳ ಕಡಿಮೆಯಾಗದಂತೆ ಕ್ರಮವಿಡುವ ನಿರ್ಬಂಧ ಕಂ 36 ಎಎಎ ಪ್ರಕಾರ ಆಡಳಿತ ಮಂಡಳಿಯನ್ನು (ಬೋರ್ಡ ಆಫ್ ಡೈರೆಕ್ಟರ್) ಸೂಪರ್‌ಸೀಡ್ ಮಾಡುವುದು (ತೆಗೆದು ಹಾಕುವುದು) ಇವೆಲ್ಲವುಗಳು ಸಹಕಾರ ಬ್ಯಾಂಕುಗಳಲ್ಲಿ ಆರ್ಥಿಕ ಶಿಸ್ತು ಪಾಲಿಸುವುದಕ್ಕೆ ಹಾಗೂ ಠೇವಣಿದಾರರ ಹಿತರಕ್ಷಣೆ ಸಾಧ್ಯವಾಗುತ್ತದೆ ಎಂದು ಭಾವಿಸಲಾಗಿದೆ. ಈ ನಿಟ್ಟಿನಲ್ಲಿ ಆರ್.ಬಿ.ಐ ಮುಂದಿನ ದಿನಗಳಲ್ಲಿ ಹೊರಡಿಸಬಹುದಾದ ಮಾರ್ಗಸೂಚಿ ನಿಯಮಗಳು ಜಾರಿಯಾದ ನಂತರ ಪಟ್ಟಣ ಸಹಕಾರ ಬ್ಯಾಂಕ್‌ಗಳಲ್ಲಿ ವೃತ್ತಿಪರತೆ ಹೆಚ್ಚಿಸಿ ವಿಶ್ವಾಸಾರ್ಹತೆ ಹೆಚ್ಚಿಸುವಂತಹ ಮಹತ್ವದ ಹೆಜ್ಜೆಯಾಗಿದೆ.

ಶ್ರೇಣಿ 51



# ಜ್ಞಾನ ಜ್ಯೋತಿ

ಎಂ .ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

## "ಮನದ ತೃಪ್ತಿಗೆ ಭಗವಂತನ ಪೂಜೆ ಪ್ರಸಾದ ಅತ್ಯವಶ್ಯಕ ?"

ಪ್ರತಿಯೊಬ್ಬರೂ ಆರೋಗ್ಯ, ನೆಮ್ಮದಿ, ಸುಖ ಶಾಂತಿಗಳಿಂದ ಬಾಳಬೇಕೆಂದು ಇಚ್ಚಿಸುವುದು ಸಹಜ. ಆದರೆ ಯಾವುದೋ ಕಾರಣದಿಂದಾಗಿ ಆರೋಗ್ಯ ತಪ್ಪಿ ರೋಗಿಯಾದ ಓರ್ವ ವ್ಯಕ್ತಿಯು ತಕ್ಷಣವೇ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ ಪಡೆದು ಪಥ್ಯಗಳನ್ನು ಅನುಸರಿಸಿದಲ್ಲಿ ತಾನು ಮರಳಿ ಆರೋಗ್ಯವಂತನಾಗುತ್ತಾನೆಂಬುದು ನಿರೀಕ್ಷೆ.

ಅಂತೆಯೇ ಜಂಜಾಟ, ಕಿರುಕುಳ ಮತ್ತು ತಾಪತ್ರಯಗಳಿಂದ ಕೂಡಿದ ಈ ಬದುಕಿನಲ್ಲಿ ಅವುಗಳಿಂದ ಬಿಡುಗಡೆ ಹೊಂದಿ ಸುಖಮಯ ಜೀವನವನ್ನು ಹೊಂದಲು ದೈವಾರಾಧನೆ ಪೂಜೆ, ಭಜನೆ, ಪ್ರಸಾದ ಸ್ವೀಕೃತಿ ಇತ್ಯಾದಿಗಳನ್ನು ಶ್ರದ್ಧೆಯಿಂದ ಅನುಷ್ಠಾನಗೊಳಿಸುವ ಮೂಲಕ ಸುಸ್ಥಿರ ಶಾಂತಿಯನ್ನು ಪಡೆದುಬಹುದೆಂಬುದೇ ಚಿಂತನ ಶೀಲದ ಅನಿಸಿಕೆ ಹಾಗೂ ವಿವಿಧ ಧರ್ಮಗ್ರಂಥಗಳ ನಿರ್ದೇಶನ ಈ ಅಂಶವನ್ನೇ ಒತ್ತಿ ಹೇಳಲು ಬಯಸುವ ಡಿ.ವಿ.ಜಿಯವರ ದೇವರ ಒಲುಮೆಗೆ ಇಂಥಹದೇ ನಿರ್ದಿಷ್ಟವಾದ ಮಾರ್ಗವೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳದೇ ಪೂಜೆ, ಭಜನೆ, ಮತ್ತು ಪ್ರಸಾದ ಸ್ವೀಕೃತಿ ಇವುಗಳಲ್ಲಿ ಯಾವುದನ್ನಾದರೂ ಆಯ್ಕೆ ಮಾಡಿಕೊಂಡು ಮನಶ್ಯಾಂತಿಯನ್ನು ಪಡೆಯರೆಂಬ ನಿರ್ದೇಶನದ ಗೀತೆ ಈ ಕೆಳಗಿನಂತಿದೆ.

ದೇವಮಂದಿರ ಭಜನೆ ಪೂಜೆಪ್ರಸಾದಗಳು
ಜೀವನದಲಂಕಾರ ಮನಸಿನುದ್ಧಾರ
ಭಾವವಂ ಕ್ಷುಲ್ಲಜಗದಿಂ ಬಿಡಿಸಿ ಮೇಲೊಯ್ದು
ದಾವುದಾದೊಡ ಮೊಳತು – ಮಂಕುತಿಮ್ಮ.

ಅನಾರೋಗ್ಯ ಪೀಡಿತನಿಗೆ ವೈದ್ಯ ಚಿಕಿತ್ಸೆ ಹೇಗೆ ಫಲಕಾರಿಯೇ ಹಾಗೆಯೇ ಭೋಗ ಲಾಲಸೆಗಳಿಗೊಳಗಾಗಿ ತನ್ನ ಜೀವನವನ್ನು ದಾರುಣ ಸ್ಥಿತಿಗೆ ತಂದುಕೊಂಡಿರುವ ಓರ್ವ ವ್ಯಕ್ತಿಯೂ ಕೂಡ ಮೇಲೆ ಸೂಚಿತವಾದ ಮಾರ್ಗಗಳನ್ನು ಅನುಸರಿಸಿದ್ದು ಸರ್ವಶಕ್ತ ಪರಮಾತ್ಮನಿಗೆ ಅಂಥಹವನ ಮೊರೆ ತಲುಪಿ ಮಾನಸಿಕ ಶಾಂತಿ ದೊರೆಯುವುದರಲ್ಲಿ ಸಂದೇಹ ವಿಲ್ಲವೆಂದಿರುತ್ತಾರೆ.

ಕೆಳಗೆ ಬಿದ್ದವನು ಮೇಲೇಳಬಲ್ಲ ತನ್ನ ಸ್ಥಿತಿಯನ್ನು ಊರ್ಧ್ವಮುಖಿಯಾಗಿ ಬೆಳೆಸಬಲ್ಲ ಎಂಬರ್ಥದ ಆಂಗ್ಲವಾಣಿಯೊಂದು "Each saint had a past and every sinner has a future" ಪ್ರತಿ ಸಂತನೂ ತನ್ನದೇ ಆದ ಪೂರ್ವ ಇತಿಹಾಸವನ್ನು ಹೊಂದಿರುತ್ತಾನೆ ಹಾಗೂ ಪ್ರತಿ ಪಾಪಿಯೂ ತನ್ನ ಬದುಕನ್ನು ಪುಣ್ಯಮಯವನ್ನಾಗಿಸಿಕೊಳ್ಳಬಲ್ಲ ಭವಿಷ್ಯವನ್ನು ಹೊಂದಿರುತ್ತಾನೆ ಎನ್ನುತ್ತದೆ.

ಇಂದಿನ ಬದುಕು ನಿಜಕ್ಕೂ ಸಂಘರ್ಷ ನಿರಾಸೆ, ಕಾತರ, ದ್ವೇಷ, ಭಯ ಹಾಗೂ ಖಿನ್ನತೆಗಳಿಂದ ಕೂಡಿದ್ದಾಗಿರುವುದರಿಂದ ಅದನ್ನು ಸರಿಪಡಿಸಲು ಸರ್ವರನ್ನೂ ಭಗವಂತನ ಸಂತಾನರೆಂದು ಭಾವಿಸುತ್ತ ಪ್ರೇಮಮಯ ಬದುಕನ್ನು ಸಾಗಿಸೋಣವೆಂಬುದೇ ಈ ಕಗ್ಗದ ಸಾರವಾಗಿದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 13,982 ಆಗಿರುತ್ತದೆ. ಇವುಗಳ ಪೈಕಿ 6,233 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 7,249.

**ಜೂನ್ ತಿಂಗಳ ಪ್ರಕರಣಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳು ಸಂಖ್ಯೆ 526, ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು ಸಂಖ್ಯೆ 11 ಹಾಗೂ ಮಧ್ಯಸ್ಥದಾರರಿಗೆ ವಹಿಸಿದ ಪ್ರಕರಣಗಳು ಸಂಖ್ಯೆ 36.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 2,446 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 226 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 146 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 2,074 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 998 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 91 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 80 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 827 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಜೂನ್ ತಿಂಗಳಿನಲ್ಲಿ 06 ಪ್ರಕರಣಗಳು ದಾಖಲಾಗಿರುತ್ತವೆ.

# ಕೋವಿಡ್ ಪರಿಹಾರ ನಿಧಿಗೆ ಸಂಯುಕ್ತ ಸಹಕಾರಿಯಿಂದ ಮಾನ್ಯ ಸಹಕಾರ ಸಚಿವರಿಗೆ ಧೇಣಿಗೆ



**ಬೆಂಗಳೂರು :** ರಾಜ್ಯದ ಸೌಹಾರ್ದ ಸಹಕಾರಿಗಳಿಂದ ಹಾಗೂ ಸಂಯುಕ್ತ ಸಹಕಾರಿಯಿಂದ ಕೋವಿಡ್ ಪರಿಹಾರ ನಿಧಿ ದೇಣಿಗೆ ಮೊತ್ತವನ್ನು ದಿನಾಂಕ 10.06.2020 ರಂದು ಮಾನ್ಯ ಸಹಕಾರ ಸಚಿವರಿಗೆ ಸಲ್ಲಿಸಲಾಯಿತು. ಹಾಗೂ ರಾಜ್ಯಾದ್ಯಂತ ಸೌಹಾರ್ದ ಸಹಕಾರ ಕ್ಷೇತ್ರದಿಂದ ಕೋವಿಡ್ ಪರಿಹಾರ ನಿಧಿಗೆ ದೇಣಿಗೆ ನೀಡಿದ ವಿವರಗಳನ್ನು ಸಹಕಾರ ಸಚಿವರಿಗೆ ನೀಡಲಾಗಿದೆ.

ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿ, ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ, ಹೆಚ್. ವಿ ರಾಜೀವ್ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ಉಪಸ್ಥಿತರಿದ್ದರು.

ಸೌಹಾರ್ದ ಸಹಕಾರ ಕ್ಷೇತ್ರದಿಂದ ಇಲ್ಲಿಯವರೆಗೆ ಸಂಗ್ರಹವಾದ / ನೇರವಾಗಿ ಪಾವತಿಸಲಾದ ಒಟ್ಟು ಮೊತ್ತ ಒಂದು ಕೋಟಿ ರೂಪಾಯಿಗಳನ್ನು ಕೋವಿಡ್ ಪರಿಹಾರ ನಿಧಿಗೆ ದೇಣಿಗೆ ನೀಡಲಾಗಿದೆ. ಆಶಾ ಕಾರ್ಯಕರ್ತೆಯರಿಗೆ ಗೌರವ ಧನ ನೀಡುವ ಕಾರ್ಯ ಪ್ರಗತಿಯಲ್ಲಿದೆವೆಂದು ಹೇಳಿದರು.

## ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ ಶ್ರೀ ತುಷಾರ್ ಗಿರಿನಾಥ್



**ಬೆಂಗಳೂರು : ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ ಹಿರಿಯ ಐಎಎಸ್ ಅಧಿಕಾರಿ ಶ್ರೀ ತುಷಾರ್ ಗಿರಿನಾಥ್ ಅವರನ್ನು ಸರ್ಕಾರ ನೇಮಕ ಮಾಡಿದೆ.**

## ಸಹಕಾರಿಗಳ ನಿಬಂಧಕರಾಗಿ ಶ್ರೀ ಜಿಯಾ ಉಲ್ಲಾ ಎಸ್.



**ಬೆಂಗಳೂರು : ಸಹಕಾರಿ ಇಲಾಖೆಯ ಸಹಕಾರಿಗಳ ನಿಬಂಧಕರಾಗಿ ಶ್ರೀ ಜಿಯಾ ಉಲ್ಲಾ ಎಸ್ ಇವರನ್ನು ಸರ್ಕಾರ ನೇಮಕ ಮಾಡಿದೆ**



## ಅಭಿನಂದನೆ

**ಬೆಂಗಳೂರು : ಸಹಕಾರಿಗಳ ನಿಬಂಧಕರಾದ ಶ್ರೀ ಜಿಯಾ ಉಲ್ಲಾ ಎಸ್ ಇವರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು.**

## ಸಹಕಾರ ಸಂಸ್ಥೆಗಳ ಆದಾಯ ತೆರಿಗೆ ಸಮಸ್ಯೆಗಳ ಪರಿಹಾರ ಕೋರಿ ಸಂಯುಕ್ತ ಸಹಕಾರಿ ಅಧ್ಯಕ್ಷರು ಹಾಗೂ ನಿರ್ದೇಶಕರು ಸಲ್ಲಿಸಿರುವ ಮನವಿಗಳಿಗೆ ಸ್ಪಂದಿಸುವಂತೆ ಪ್ರಧಾನ ಮಂತ್ರಿಗಳ ಕಛೇರಿಯಿಂದ ಸೂಚನೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ, ನಿರ್ದೇಶಕರುಗಳಾದ ಶ್ರೀ ಗುರುನಾಥ ಜಾಂತಿಕರ, ಶ್ರೀ ಹೆಚ್.ವಿ.ರಾಜೀವ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ರಾಜ್ಯದ ಸಂಸದರು ಹಾಗೂ ಶಾಸಕರುಗಳೊಂದಿಗೆ ಹಲವಾರು ಬಾರಿ ಕೇಂದ್ರದ ಹಣಕಾಸ ಮಂತ್ರಿಗಳನ್ನು, ಕೇಂದ್ರದ ನೇರ ತೆರಿಗೆ ಸಲಹಾ ಮಂಡಳಿಯ ಅಧ್ಯಕ್ಷರನ್ನು ಭೇಟಿ ಮಾಡಿ ಸಹಕಾರ ಸಂಸ್ಥೆಗಳಿಗೆ ಆದಾಯ ತೆರಿಗೆಯಿಂದ ಹಲವು ವಿಧವಾದ ಸಮಸ್ಯೆಗಳಿವೆ. ಅವೆಲ್ಲವುಗಳಿಗೆ ಪರಿಹಾರ ಸಾಧ್ಯ. ದಯವಿಟ್ಟು ಅವುಗಳನ್ನು ಪರಿಹಾರ ಮಾಡಿಕೊಡಬೇಕೆಂದು ಕಳೆದ 3 ವರ್ಷಗಳಿಂದ ಹಲವು ಮನವಿಗಳನ್ನು ಸಲ್ಲಿಸಿರುವುದು ಅವುಗಳ ಪ್ರತಿಯನ್ನು ಅವಗಾಹನೆಗಾಗಿ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮವಿಡುವ ಸೂಚನೆಗಳನ್ನು ನೀಡುವ ವಿನಂತಿಯೊಂದಿಗೆ ಕಳುಹಿಸಲಾಗಿತ್ತು. ಮಾನ್ಯ ಪ್ರಧಾನಮಂತ್ರಿಗಳಿಗೂ ಸಲ್ಲಿಸಲಾಗಿತ್ತು.

ಸಂಯುಕ್ತ ಸಹಕಾರಿಯ ಪದಾಧಿಕಾರಿಗಳು ಸಲ್ಲಿಸಿರುವ ಮನವಿಗಳ ಪ್ರಮುಖ ವಿಷಯಗಳಲ್ಲಿ ಮೂಲದಲ್ಲಿ ತೆರಿಗೆ ಕಡಿತ, ಸೌಹಾರ್ದ ಸಹಕಾರಿಗಳು ಸಹಕಾರ ಸಂಘಗಳೆಂದು ಪರಿಗಣಿಸಿ ಕರ್ನಾಟಕ ಶ್ರೇಷ್ಠನ್ಯಾಯಾಲಯವು ನೀಡಿದ ಆದೇಶವನ್ನು ಪರಿಗಣಿಸಿ ಸೌಹಾರ್ದ ಸಹಕಾರಿಗಳಿಗೆ ತೆರಿಗೆ ವಿಧಿಸುವುದನ್ನು ನಿಲ್ಲಿಸುವುದು, ಡಿಮಾನಿಟೈಜೇಶನ್ ಅವಧಿಯಲ್ಲಿ ಸಹಕಾರಿ ಸಂಸ್ಥೆಗಳು ಸಂಗ್ರಹ ಮಾಡಿರುವ ಠೇವಣಿ ಹಣಕ್ಕೆ ದಂಡ ವಿಧಿಸದಿರುವುದು

ಈ ಬಗ್ಗೆ ಪ್ರಧಾನ ಮಂತ್ರಿಯವರ ಕಛೇರಿಯಿಂದ ಆದಾಯ ತೆರಿಗೆ ಇಲಾಖೆಯ ಹಿರಿಯ ಅಧಿಕಾರಿ (ಜಂಟಿ ಕಮಿಶನರ್) ಒಬ್ಬರು ಸಂಯುಕ್ತ ಸಹಕಾರಿಯ ಅಧ್ಯಕ್ಷರನ್ನು ಸಂಪರ್ಕಿಸಿ ಮಾನ್ಯ ಪ್ರಧಾನ ಮಂತ್ರಿಗಳಿಗೆ ತಾವು ಸಲ್ಲಿಸಿರುವ ಮನವಿಗಳಿಗೆ ತಮ್ಮನ್ನು ಭೇಟಿ ಮಾಡಿ ವರದಿ ಸಲ್ಲಿಸುವಂತೆ ಸೂಚಿತನಾಗಿದ್ದೇನೆ ತಾವು ಖುದ್ದಾಗಿ ಭೇಟಿ ಮಾಡಿ ವಿವರಗಳನ್ನು ನೀಡಿ ಎಂದು ತಿಳಿಸಿದ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಸದರಿ ಅಧಿಕಾರಿಯವರನ್ನು ಭೇಟಿ ಮಾಡಿ ಸಹಕಾರಿ ಸಂಸ್ಥೆಗಳಿಗೆ ಆದಾಯ ತೆರಿಗೆ ಕಾಯ್ದೆ ಆದರಿಸಿ ಇಲಾಖೆಯಿಂದ ಆಗುತ್ತಿರುವ ತೊಂದರೆಗಳನ್ನು ಮತ್ತು ಇದರಿಂದಾಗಿ ಸಹಕಾರ ಕ್ಷೇತ್ರದ ಮೇಲೆ ಅಗುತ್ತಿರುವ ಪರಿಣಾಮಗಳ ಚರ್ಚೆ ಮಾಡಿ ಒದಗಿಸಬಹುದಾದ ಪರಿಹಾರಗಳ ವಿವರ ನೀಡಿದರು.

## ಡಿ.ಸಿ.ಬಿ.ಎಂ ಪರೀಕ್ಷಾ ದಿನಾಂಕ ಮುಂದೂಡಿಕೆ

ದಿನಾಂಕ 10. 11 ಹಾಗೂ 12ನೇ ಜುಲೈ 2020 ರಂದು ನಿಗದಿಯಾಗಿದ್ದ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ ಪರೀಕ್ಷೆಗಳನ್ನು ದಿನಾಂಕ 11, 12, ಹಾಗೂ 13ನೇ ಸೆಪ್ಟೆಂಬರ್ 2020 ರಂದು ನಿಗದಿಪಡಿಸಲಾಗಿದೆ. ಪರೀಕ್ಷಾ ವೇಳಾಪಟ್ಟಿಯನ್ನು ಕಳುಹಿಸಲಾಗುವುದು.

## ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ 6 ತಿಂಗಳ ಕೋರ್ಸ್ ಮೂರನೇ ಸಂಪರ್ಕ ವರ್ಗ ಆನ್‌ಲೈನ್ ತರಗತಿ

ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ., ನಡೆಸುತ್ತಿರುವ ಎರಡನೇ ತಂಡದ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ ಮೂರನೇ ಸಂಪರ್ಕ ವರ್ಗವನ್ನು, ಕೋವಿಡ್–19 ಮಹಾಮಾರಿಯ ಕಾರಣದಿಂದಾಗಿ ಲಾಕ್‌ಡೌನ್ ಜಾರಿಯಾದ ಹಿನ್ನೆಲೆಯಲ್ಲಿ Go to Meeting ಆಪ್ ಮೂಲಕ "ಆನ್ ಲೈನ್"ನಲ್ಲಿ ಯಶಸ್ವಿಯಾಗಿ ನಡೆಸಲಾಯಿತು. ಬೆಳಗಾವಿ, ಮುಧೋಳ, ಕೇಂದ್ರದ ಅಭ್ಯರ್ಥಿಗಳಿಗಾಗಿ ದಿನಾಂಕ 13, 14 ಹಾಗೂ 15ನೇ ಜೂನ್ 2020 ಹಾಗೂ ರಾಯಚೂರು, ಶಿವಮೊಗ್ಗ ಹಾಗೂ ಬೆಂಗಳೂರು ಕೇಂದ್ರಗಳಲ್ಲಿ ದಿನಾಂಕ 27, 28 ಹಾಗೂ 29ನೇ ಜೂನ್ 2020ರಂದು ಮೂರನೇ ಸಂಪರ್ಕ ವರ್ಗ ತರಗತಿಯನ್ನು ಆನ್‌ಲೈನ್ ಮೂಲಕ ಆಯೋಜಿಸಲಾಗಿತ್ತು. ಬೆಳಗಾವಿ ಹಾಗೂ ಮುಧೋಳ ಕೇಂದ್ರದಿಂದ ಒಟ್ಟು 100 ಅಭ್ಯರ್ಥಿಗಳು ಹಾಗೂ ಬೆಂಗಳೂರು, ಶಿವಮೊಗ್ಗ ಹಾಗೂ ರಾಯಚೂರು ಕೇಂದ್ರದಿಂದ ಒಟ್ಟು 115 ಅಭ್ಯರ್ಥಿಗಳು ಮೂರನೇ ಸಂಪರ್ಕ ವರ್ಗ ತರಗತಿಯಲ್ಲಿ ಭಾಗವಹಿಸಿದ್ದರು.

## ಸ್ವಾಭಿಮಾನಿ ಸಹಕಾರಿ ಚಂದಾದಾರರು ಹಾಗೂ ಓದುಗರಲ್ಲಿ ವಿನಂತಿ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಕೆಯನ್ನು ಪ್ರಕಟಿಸುತ್ತಿರುವುದು ತಮಗೆಲ್ಲಾ ತಿಳಿದ ವಿಷಯ. ಕೋವೀಡ್–19 ಕೊರೋನಾ ಮಹಾಮಾರಿಯ ಕಾರಣದಿಂದಾಗಿ ಕಳೆದ ಏಪ್ರಿಲ್, ಮೇ, ಜೂನ್ ಹಾಗೂ ಜುಲೈ ಮಾಹೆಯ ಸಂಚಿಕೆಗಳನ್ನು ಮುದ್ರಿಸಲು ಸಾಧ್ಯವಾಗಿರುವುದಿಲ್ಲ. ಈ ಪತ್ರಿಕೆಯನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್‌ನಲ್ಲಿ ಹಾಗೂ whats app ಗ್ರೂಪ್‌ಗಳ ಮೂಲಕ ತಲುಪಿಸುವ ವ್ಯವಸ್ಥೆ ಮಾಡಲಾಗಿದೆ. ಆಗಸ್ಟ್ ಮಾಹೆಯ ಪತ್ರಿಕೆಯನ್ನು ವಾತಾವರಣ ಕೊರೋನ ಮುಕ್ತವಾಗಿ ಸಾಮಾನ್ಯ ಸ್ಥಿತಿಗೆ ಬಂದಿದೆ ಎಂಬುದನ್ನು ಧೃಢೀಕರಿಸಿಕೊಂಡು ಪತ್ರಿಕೆಯನ್ನು ಮುದ್ರಿಸಿ ಕಳುಹಿಸಲಾಗುವುದು. ಚಂದಾದಾರರು ಹಾಗೂ ಓದುಗರು ಸಹಕರಿಸಲು ಕೋರಿದೆ.

# ಕರ್ನಾಟಕ ಸೌಹಾರ್ದ ಸಹಕಾರ ಸಂಘಗಳ ವಾರ್ಷಿಕ ಸಾಮಾನ್ಯ ಸಭೆಯ ಅವಧಿ ದಿನಾಂಕ 25ನೇ ಡಿಸೆಂಬರ್ 2020 ರವರೆಗೆ ವಿಸ್ತರಣೆ - ಸರ್ಕಾರದ ಆದೇಶ

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:-** ರಾಜ್ಯದಲ್ಲಿ ಕೋವಿಡ್-19 ರೋಗವು ಸಾಂಕ್ರಾಮಿಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ 2020-21ನೇ ಸಾಲಿಗೆ ಕರ್ನಾಟಕ ಸೌಹಾರ್ದ ಸಹಕಾರ ಸಂಘಗಳ ವಾರ್ಷಿಕ ಸಾಮಾನ್ಯ ಸಭೆಯ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ:- 1. ಸರ್ಕಾರದ ಆದೇಶ ಸಂಖ್ಯೆ: ಸಿಒ 34 ಸಿಎಲ್ಎಂ 2020, ದಿನಾಂಕ: 17.04.2020.

2. ಸಹಕಾರ ಸಂಘಗಳ ನಿಬಂಧಕರು ಕರ್ನಾಟಕ ರಾಜ್ಯ ಬೆಂಗಳೂರು, ಇವರ ಪತ್ರ ಸಂಖ್ಯೆ: ಆರ್ ಸಿಎಸ್/ಸೌಹಾರ್ದ/ಅ.ನಿ.ತಿ/160/2017-18, ದಿನಾಂಕ:20.06.2020.

*****

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ಸೌಹಾರ್ದ ಸಹಕಾರ ಸಂಘಗಳ ಆರ್ಥಿಕ ತಃಖ್ತೆಗಳನ್ನು ಸಿದ್ಧಪಡಿಸಿ ಆರ್ಥಿಕ ವರ್ಷ ಮುಗಿದ 30 ದಿನಗಳೊಳಗಾಗಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಬೇಕಾದ ಅವಧಿಯನ್ನು ಜೂನ್ 30ರವರೆಗೆ ಹಾಗೂ ಲೆಕ್ಕಪರಿಶೋಧನೆ ಮಾಡಿಸಿಕೊಳ್ಳುವ ಅವಧಿಯನ್ನು 1ನೇ ಸೆಪ್ಟೆಂಬರ್ ರಿಂದ 1ನೇ ನವೆಂಬರ್ ರವರೆಗೆ 2020ನೇ ಸಾಲಿಗೆ ವಿಸ್ತರಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ (2)ರ ಪ್ರಸ್ತಾವನೆಯಲ್ಲಿ ರಾಜ್ಯದಲ್ಲಿ ಕೋವಿಡ್-19 ರೋಗವು ಸಾಂಕ್ರಾಮಿಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಪ್ರಕರಣ 27(ಹೆಚ್-3) , 30(1) ಹಾಗೂ 60(1)ರಡಿ ಸೆಪ್ಟೆಂಬರ್ ಇಪ್ಪತ್ತೈದರೊಳಗಾಗಿ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸತಕ್ಕದ್ದು ಎಂದು ನಿಗಧಿಪಡಿಸಿರುವ ಅವಧಿಯನ್ನು ಡಿಸೆಂಬರ್ ಇಪ್ಪತ್ತೈದರೊಳಗಾಗಿ ನಡೆಸಲು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 70ರಡಿ ಅವಧಿಯನ್ನು ವಿಸ್ತರಿಸುವಂತೆ ಸಹಕಾರ ಸಂಘಗಳ ನಿಬಂಧಕರು ಸರ್ಕಾರವನ್ನು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಸಇ 44 ಸಿಎಲ್ಎಮ್ 2020 (ಇ), ಬೆಂಗಳೂರು, ದಿನಾಂಕ: 08.07.2020</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ ಕೋವಿಡ್-19 ರೋಗವು ವ್ಯಾಪಕವಾಗಿ ಹರಡುತ್ತಿರುವುದರಿಂದ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಪ್ರಕರಣ 70ರಡಿ ಸರ್ಕಾರಕ್ಕೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಪ್ರಕರಣ 27(ಹೆಚ್-3), 30(1) ಹಾಗೂ 60(1)ರಡಿ ವಾರ್ಷಿಕ ಸಾಮಾನ್ಯ ಸಭೆಯನ್ನು ಸೆಪ್ಟೆಂಬರ್ ಇಪ್ಪತ್ತೈದರೊಳಗಾಗಿ ನಡೆಸತಕ್ಕದ್ದು ಎಂಬುದನ್ನು ಸಡಿಲಿಸಿ, 25ನೇ ಡಿಸೆಂಬರ್ 2020ರೊಳಗಾಗಿ ನಡೆಸಲು ಅನುಮತಿ ನೀಡಿದೆ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 34 ಮತ್ತು 64ಎ ರೀತ್ಯಾ ವಿದ್ಯುಕ್ತ ವರದಿಗಳನ್ನು ಸಲ್ಲಿಸಲು 31ನೇ ಡಿಸೆಂಬರ್ 2020ರವರೆಗೆ ಅವಧಿಯನ್ನು ವಿಸ್ತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ.ಎಂ. ಆಶಾ)**
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

## 4ನೇ ಜುಲೈ ಅಂತರರಾಷ್ಟ್ರೀಯ ಸಹಕಾರ ದಿನ

ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯವರು ವಿಶ್ವದ ಸಹಕಾರಿ ಸಂಸ್ಥೆಗಳಲ್ಲಿ ಪ್ರತಿ ವರ್ಷ ಜುಲೈ ಮೊದಲನೇ ಶನಿವಾರದಂದು ಅಂತರರಾಷ್ಟ್ರೀಯ ಸಹಕಾರ ದಿನವಾಗಿ ಆಚರಿಸಲು ಕರೆ ನೀಡಿದ್ದಾರೆ. ಅದರಂತೆ ವಿಶ್ವದಾದ್ಯಂತ ಈ ದಿನದಂದು ಸಹಕಾರಿ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಈ ದಿನದಂದು ವಿಶ್ವದ ಸಹಕಾರಿಗಳಲ್ಲಿ ಅವರವರ ಸಂಸ್ಥೆಗಳಲ್ಲಿ ಸಹಕಾರಿ ಕ್ಷೇತ್ರದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಸಾರ್ವಜನಿಕರಲ್ಲಿ ಸಹಕಾರ ಕ್ಷೇತ್ರದ ಬಗ್ಗೆ ಜಾಗೃತಿ ಮೂಡಿಸುವಂತಹ ಪ್ರಯತ್ನ ನಡೆದಿದೆ. ಐಸಿಎ ನವರು "ಸಹಕಾರಿ ಸಂಸ್ಥೆಗಳು ಉತ್ತಮ ರಾಷ್ಟ್ರವನ್ನು ನಿರ್ಮಾಣ ಮಾಡುವಲ್ಲಿ ಸಹಕಾರಿವಾಗುತ್ತವೆ" ಎಂಬುದನ್ನು ದೃಢೀಕರಿಸಲು ಪ್ರತಿ ವರ್ಷ ಸಹಕಾರಿ ದಿನವನ್ನು ಆಚರಣೆ ಮಾಡುವುದರ ಮೂಲಕ ಸಹಕಾರ ಕ್ಷೇತ್ರದ ಬಗ್ಗೆ ಜಾಗೃತಿಯನ್ನು ಮೂಡಿಸುವುದರ ಮೂಲಕ ಮತ್ತು ಸಹಕಾರ ಸಂಸ್ಥೆಗಳನ್ನು ಬಲಪಡಿಸುವುದರ ಮೂಲಕ ಸಹಕಾರಿ ಕ್ಷೇತ್ರಕ್ಕೆ ಯಶಸ್ಸನ್ನು ಕೋರಿದ್ದಾರೆ.

## International Day of Cooperatives 2020 theme : Cooperatives for Climate Action

The theme of the International Day of Cooperatives 2020 is COOPERATIVES FOR CLIMATE ACTION. We are inviting the global cooperative community to continue pushing for actions that will address climate change. This critical situation is putting lives and livelihoods at risk, disrupting vital ecosystems for people and the planet.

"Our common home is in danger. There are methods of production and consumption that are constantly attacking the environment. We don't have much time to reverse this situation. We must act now, with our values and principles, to demonstrate on a global scale that it is possible to develop an economy with social inclusion and protection of natural resources," said Ariel Guarco, President of the International Cooperative Alliance.

On 4 July 2020, join us as we raise awareness on the importance of addressing climate change. No country is immune from it, greenhouse gas emissions are more than 50 percent higher than it was in 1990, and global warming is causing long-lasting changes to our climate system which threatens irreversible consequences if we do not act.

Cooperatives worldwide can take this opportunity to show leadership and share their cooperative values in combating this global issue. A Cooperatives Communications Guide will soon be available to help cooperatives use this day to illustrate the importance of taking action to battle climate change.

The 2020 International Cooperatives Day theme was chosen to support Sustainable Development Goal (SDG) 13 on Climate Action. This event will focus on the contribution of cooperatives to combating climate change, one of the most severe challenges facing our planet during the 21st century. Climate change severely impacts people's livelihoods around the world, especially the most disadvantaged groups such as small-scale farmers, women, youth, indigenous peoples and ethnic minorities, who have to cope with extreme natural disasters and degradation of natural resources.

The cooperative movement can use this important opportunity to take a stand as a global actor of change and collaborate with its partners within the international community. This collective effort can significantly impact the climate agenda and achieve a fair, green and just transition for all communities, leaving no one behind.

# Co-op Development Forum

The idea mooted by IFFCO MD Dr U S Awasthi for making a 'Cooperative Development Forum' in the leadership of former Union Minister and Rajya Sabha member Suresh Prabhu is taking the final shape.

This forum will be chaired by Suresh Prabhu. IFFCO MD Dr U S Awasthi, NCUI Chairman Dr Chandra Pal Singh Yadav, Nafscob Chairman Dileep Sanghani, National Cooperative Dairy Federation of India Limited Chairman Mangal Jit Rai, RBI Central Board Director Satish Marathe and Nafcub Chairman Jyotindra Mehta will be its members and Sahakar Bharati National General Secretary Uday Joshi will be its member secretary.

Sharing the objective of making this forum Uday Joshi said,

"We want the government to identify the role of cooperatives in the national economy and nobody could be a better person than Suresh Prabhu to fit the fourm.

problem a veteran co-operator, had been the Chairman of Saraswat Cooperative Bank in the past; he understands both the cooperative spirit and its structure very well", he added.

It is being said that the forum will also help in fulfilling the dream of Prime Minister Narendra Modi to make India a USD 5 trillion dollar economy and make India a self-reliant country.

Readers would recall that the idea was mooted by IFFCO MD Dr U S Awasthi during the Sahakar Bharati webinar organized last month in which Suresh Prabhu had delivered the keynote address.

"The role of cooperatives is barely recognized so there is a need to raise the voice of the cooperative sector before the government", said Awasthi while mooting the idea of making a Cooperative Development forum.

Chandra Pal Singh Yadav, the incumbent President of national apex co-op body NCUI is also supportive of the idea. Ensuring his participation in the said Forum, Chandra Pal said "I am ready to play my role if such a Forum takes final shape".

## 7 ದಿನಗಳ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್ ಆನ್‌ಲೈನ್‌ನಲ್ಲಿ

## 7 days Basic Banking Certificate Course for Employees of Souharda Urban Cooperative Banks

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಪ್ರತಿ ವರ್ಷ ನಡೆಸುತ್ತಿದ್ದ ಏಳು ದಿನಗಳ ಬೇಸಿಕ್ ಆಫ್ ಬ್ಯಾಂಕಿಂಗ್ ಕೋರ್ಸ್ (ಬ್ಯಾಂಕಿಂಗ್ ಮೂಲ ಮಾಹಿತಿ ತರಬೇತಿ) ಈ ಬಾರಿ "ಏಳು ದಿನಗಳ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್"ನ್ನಾಗಿ ಮಾರ್ಪಾಟು ಮಾಡಿ ಆಗಸ್ಟ್ 03 ರಿಂದ 09 ರವರೆಗೆ ಆನ್‌ಲೈನ್ ಮೂಲಕ ಪ್ರತಿದಿನ ಮಧ್ಯಾಹ್ನ 02.30 ರಿಂದ 05.30ರ ವರೆಗೆ 1 ಘಂಟೆಯ ಮೂರು ಅವಧಿಯ ತರಗತಿಗಳನ್ನು ನಡೆಸಲಾಗುವುದು. ಈ ಅವಧಿಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ನುರಿತ ಉಪನ್ಯಾಸಕರಿಂದ ವಿಷಯಗಳ ಬಗ್ಗೆ ಆನ್‌ಲೈನ್ ಮೂಲಕ ಉಪನ್ಯಾಸ ವ್ಯವಸ್ಥೆ ಮಾಡಲಾಗುವುದು. ಈ ಕೋರ್ಸ್‌ಗೆ 60 ಜನ ಶಿಬಿರಾರ್ಥಿಗಳನ್ನು ಮಾತ್ರ ಪ್ರವೇಶ ನೀಡಲಾಗುವುದು. ಪ್ರವೇಶ ಶುಲ್ಕ ರೂ. 2,000/– ಸೌಹಾರ್ದ ಸಹಕಾರಿ ವ್ಯಾಪ್ತಿಯಲ್ಲಿ ಬರುವ ಪಟ್ಟಣ ಸಹಕಾರ ಬ್ಯಾಂಕುಗಳು ತಮ್ಮ ಬ್ಯಾಂಕಿನಲ್ಲಿ ನೂತನವಾಗಿ ನೇಮಕಾತಿ ಮಾಡಿಕೊಂಡ ಸಿಬ್ಬಂದಿಯನ್ನು ಅಥವಾ ಬ್ಯಾಂಕಿನ ಕಿರಿಯ ಸಿಬ್ಬಂದಿಯವರನ್ನು ಒಂದು ಬ್ಯಾಂಕಿನಿಂದ 5 ಸಂಖ್ಯೆ ಮೀರದಂತೆ ಪ್ರತಿನಿಧಿಗಳನ್ನು ಕಳುಹಿಸಿಕೊಡಲು ಕೋರಿದೆ. ಪ್ರತಿನಿಧಿಗಳು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಕೊನೆಯ ದಿನಾಂಕ 25.07.2020. ಹೆಚ್ಚಿನ ಮಾಹಿತಿಗಾಗಿ ಸಂಯುಕ್ತ ಸಹಕಾರಿ ಕೇಂದ್ರ ಕಛೇರಿಯ ತರಬೇತಿ ವಿಭಾಗದ ಅಧಿಕಾರಿಯನ್ನು ಸಂಪರ್ಕಿಸುವುದು.

# ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ (ಪರೀಕ್ಷಾರ್ಥ ಸೇವೆಯಲ್ಲಿರುವ) ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯಿಂದ ತರಬೇತಿ ಕಾರ್ಯಕ್ರಮ

**ಬೆಂಗಳೂರು :** ಕರ್ನಾಟಕ ಲೋಕಸೇವಾ ಆಯೋಗದಿಂದ 2015ನೇ ಸಾಲಿನಲ್ಲಿ ಆಯ್ಕೆಯಾಗಿರುವ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ (ಪರೀಕ್ಷಾರ್ಥ ಸೇವೆಯಲ್ಲಿರುವ) ದಿನಾಂಕ 22.06.2020ರಿಂದ 25.06.2020ರ ವರೆಗೆ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ ತರಬೇತಿ ಕಾರ್ಯಕ್ರಮ ಹಾಗೂ ಅಧ್ಯಯನ ಪ್ರವಾಸವನ್ನು ಹಮ್ಮಿಕೊಳ್ಳಲಾಗಿತ್ತು.









**ದಿನಾಂಕ 22ನೇ ಜೂನ್ 2020 ರಂದು** ಶ್ರೀ ಶಮಶೀದ್ದಿನ್ ಖೈರುಲ್ಲಾ, ಶ್ರೀಮತಿ ಶೀಲಾ ಬಿ.ಎನ್, ಶ್ರೀ ಮಲ್ಲಯ್ಯ, ಶ್ರೀ ದಾನಯ್ಯ ಹಿರೇಮಠ್, ಶ್ರೀ ಚೇತನ್ ಭಾವಿಕಟ್ಟಿ ಇವರು ಸಂಯುಕ್ತ ಸಹಕಾರಿಗೆ ಭೇಟಿ ನೀಡಿದ್ದರು. ತರಬೇತಿ ಅಧಿಕಾರಿಯಾದ ಶ್ರೀ ವಿ.ಜೆ. ಕಾರಕೂನ ಇವರು ಸ್ವಾಗತ ನೇರವೇರಿಸಿದರು.

ನಂತರ ಮಧ್ಯಾಹ್ನದ ಅವಧಿಯಲ್ಲಿ ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ಲಿ., ಬೆಂಗಳೂರು, ಇಲ್ಲಿಗೆ ಭೇಟಿ ಮಾಡಲಾಯಿತು. ಸೌಹಾರ್ದ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಸಹಕಾರಿಯ ನಿರ್ದೇಶಕರಾದ ಶ್ರೀ ದಯಾಕರ ರೆಡ್ಡಿ ಇವರು ಆಡಳಿತ ಮಂಡಲಿಯ ಸದಸ್ಯರು ಹಾಗೂ ಮುಖ್ಯಕಾರ್ಯನಿರ್ವಾಹಕರು ಉಪಸ್ಥಿತರಿದ್ದು ಮಾಹಿತಿ ನೀಡಿದರು.

**ದಿನಾಂಕ 23ನೇ ಜೂನ್ 2020 ರಂದು** ಶ್ರೀ ಗಂಗಾಧರ್ ಬಿ.ವಿ, ಶ್ರೀಮತಿ ಎಸ್.ಕೆ. ಭಾಗ್ಯಶ್ರೀ, ಶ್ರೀ ರವೀಂದ್ರ ಪರಸನಗೌಡ ಪಾಟೀಲ, ಶ್ರೀ ಟಿ. ಮಧುಶ್ರೀನಿವಾಸ್, ಶ್ರೀಮತಿ ಮಾನಸಾ ಕೃಷ್ಣಪ್ಪ ಇವರು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ ನೀಡಿದರು. ತರಬೇತಿ ಅಧಿಕಾರಿಯಾದ ಶ್ರೀ ವಿ.ಜೆ. ಕಾರಕೂನ ಇವರು ಸ್ವಾಗತ ಭಾಷಣ ನೆರವೇರಿಸಿದರು.

ನಂತರ ಮಧ್ಯಾಹ್ನದ ಅವಧಿಯಲ್ಲಿ ಉದಯ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು ಇಲ್ಲಿಗೆ ಭೇಟಿ ಮಾಡಲಾಯಿತು. ಸೌಹಾರ್ದ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಎಸ್. ಗುಂಡೂರಾವ್, ಆಡಳಿತ ಮಂಡಲಿಯ ಸದಸ್ಯರು ಹಾಗೂ ಮುಖ್ಯಕಾರ್ಯನಿರ್ವಾಹಕರು ಉಪಸ್ಥಿತರಿದ್ದು ಮಾಹಿತಿ ನೀಡಿದರು.

**ದಿನಾಂಕ 24ನೇ ಜೂನ್ 2020 ರಂದು** ಶ್ರೀ ನಿಂಗರಾಜು ಎಸ್., ಶ್ರೀಮತಿ ಮಂಜುಳಾ ಎಸ್, ಶ್ರೀ ಬೀರೇಂದ್ರ, ಶ್ರೀ ಗ್ಯಾನಪ್ಪ, ತೇಜಸ್ವಿನಿ ಡಿ. ಎಸ್, ಇವರು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ ನೀಡಿದರು. ಜಿಲ್ಲಾ ಸಂಯೋಜಕರಾದ ಶ್ರೀ ಅನಿಲ್ ಕುಮಾರ್ ಇವರು ಸ್ವಾಗತ ಭಾಷಣ ನೆರವೇರಿಸಿದರು.

ನಂತರ ಮಧ್ಯಾಹ್ನದ ಅವಧಿಯಲ್ಲಿ ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು ಇಲ್ಲಿಗೆ ಭೇಟಿ ಮಾಡಲಾಯಿತು. ಸೌಹಾರ್ದ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ. ಮುನಿರೆಡ್ಡಿ, ಆಡಳಿತ ಮಂಡಲಿಯ ಸದಸ್ಯರು ಹಾಗೂ ಮುಖ್ಯಕಾರ್ಯನಿರ್ವಾಹಕರು ಉಪಸ್ಥಿತರಿದ್ದು ಮಾಹಿತಿ ನೀಡಿದರು.

**ದಿನಾಂಕ 25ನೇ ಜೂನ್ 2020 ರಂದು** ಶ್ರೀಮತಿ ಶಾಹಿನ್ ಅಖ್ತರ್, ಶ್ರೀಮತಿ ಲಾವಣ್ಯ ಕೆ. ಆರ್, ಶ್ರೀ ದಿಲೀಪಕುಮಾರ ಆರ್.ಎಸ್., ಶ್ರೀಮತಿ ಕವಿತಾ ಎಸ್. ಕೆ, ಶ್ರೀಮತಿ ಸೀಮಾ ಫಾರೂಖಿ ಇವರು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ ನೀಡಿದರು. ಕಿರಿಯ ವ್ಯವಸ್ಥಾಪಕಿಯಾದ ಶ್ರೀಮತಿ ಕವಿತ ಆರ್ ಇವರು ಸ್ವಾಗತ ಭಾಷಣ ನೆರವೇರಿಸಿದರು.

ನಂತರ ಮಧ್ಯಾಹ್ನದ ಅವಧಿಯಲ್ಲಿ ಯಶಸ್ವಿನಿ ಮಹಿಳಾ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಂಗಳೂರು ಇಲ್ಲಿಗೆ ಭೇಟಿ ಮಾಡಲಾಯಿತು. ಸೌಹಾರ್ದ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ನಾಗಮಣಿ, ಆಡಳಿತ ಮಂಡಲಿಯ ಸದಸ್ಯರು ಹಾಗೂ ಮುಖ್ಯಕಾರ್ಯನಿರ್ವಾಹಕರು ಉಪಸ್ಥಿತರಿದ್ದು ಮಾಹಿತಿ ನೀಡಿದರು.

ಈ 4 ದಿನಗಳಲ್ಲೂ ಸೌಹಾರ್ದ ಸಹಕಾರ ಕ್ಷೇತ್ರದ ಬಗ್ಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ತಿಳಿಸಿಕೊಟ್ಟರು, ಸಂಯುಕ್ತ ಸಹಕಾರಿಯ ಆಂತರಿಕ ಆಡಳಿತ ನಿರ್ವಹಣೆಯ ಬಗ್ಗೆ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ ಕೆ. ಇವರು ತಿಳಿಸಿಕೊಟ್ಟರು. ನಂತರ ಸಂಯುಕ್ತ ಸಹಕಾರಿಯ ದಾವಾ ಪಂಚಾಯತಿ ನ್ಯಾಯಾಲಯಕ್ಕೆ ಭೇಟಿ ನೀಡಿದರು.

# ಸಂಯುಕ್ತ ಸಹಕಾರಿಯ ಆನ್ ಲೈನ್ ತರಬೇತಿ ಕಾರ್ಯಕ್ರಮಗಳು

## ಬೆಳಗಾವಿ ವಿಭಾಗ

## ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ. ತರಬೇತಿ ಕಾರ್ಯಕ್ರಮ

**ಗದಗ :** ದಿನಾಂಕ 17 ಜೂನ್ 2020 ರಂದು ಗದಗ ಜಿಲ್ಲಾ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ. ವಿಷಯದ ಕುರಿತು ಆನ್ ಲೈನ್ ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಶ್ರೀ ಆರ್. ಎನ್. ದೇಶಪಾಂಡೆ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ, ಮುಖ್ಯ ಅತಿಥಿ ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಮಧುಕರ ಹೆಗಡೆ ಹಾಗೂ ಗದಗ ಜಿಲ್ಲಾ ಸಂಯೋಜಕರಾದ ಶ್ರೀ ಬಸವರಾಜ ಎಸ್ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 26 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ. ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಮಧುಕರ ಹೆಗಡೆ ಇವರು ಉಪನ್ಯಾಸ ನೀಡಿದರು.

**ಬಾಗಲಕೋಟ :** ದಿನಾಂಕ 20 ಜೂನ್ 2020 ರಂದು ಬಾಗಲಕೋಟ ಜಿಲ್ಲಾ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ. ವಿಷಯದ ಕುರಿತು ಆನ್ ಲೈನ್ ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ, ಮುಖ್ಯ ಅತಿಥಿ ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಮಧುಕರ ಹೆಗಡೆ ಹಾಗೂ ಬಾಗಲಕೋಟ ಜಿಲ್ಲಾ ಸಂಯೋಜಕರಾದ ಶ್ರೀ ನಾಗರಾಜ ಜಿ.ಎಚ್. ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 90 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ. ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಮಧುಕರ ಹೆಗಡೆ ಇವರು ಉಪನ್ಯಾಸ ನೀಡಿದರು.

**ಬೆಳಗಾವಿ :** ದಿನಾಂಕ 23 ಜೂನ್ 2020 ರಂದು **ಬೆಳಗಾವಿ ಜಿಲ್ಲೆಯ ಬೈಲಹೊಂಗಲ, ರಾಮದುರ್ಗ, ಸವದತ್ತಿ, ಗೋಕಾಕ ಮತ್ತು ಮೂಡಲಗಿ ತಾಲ್ಲೂಕಿನ** ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ. ವಿಷಯದ ಕುರಿತು ಆನ್ ಲೈನ್ ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ಕಾರ್ಯಕ್ರಮದಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ, ಮುಖ್ಯ ಅತಿಥಿ ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಬಿ.ವಿ.ರವೀಂದ್ರನಾಥ, ವ್ಯವಸ್ಥಾಪಕ/ಜಿಲ್ಲಾ ಸಂಯೋಜಕರಾದ ಶ್ರೀ ಬಸವರಾಜ ಹೊಂಗಲ ಹಾಗೂ ಶ್ರೀ ಜಿಲ್ಲಾ ಸಂಯೋಜಕರಾದ ಶ್ರೀ ಸುಜಯ ಡಿ. ಬೆಳವಿ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 146 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ. ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಬಿ.ವಿ.ರವೀಂದ್ರನಾಥ ಇವರು ಉಪನ್ಯಾಸ ನೀಡಿದರು.

ದಿನಾಂಕ 23 ಜೂನ್ 2020 ರಂದು **ಬೆಳಗಾವಿ ಜಿಲ್ಲೆಯ ಹುಕ್ಕೇರಿ ಹಾಗೂ ಖಾನಾಪೂರ ತಾಲ್ಲೂಕಿನ** ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ. ವಿಷಯದ ಕುರಿತು ಆನ್ ಲೈನ್ ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ, ಮುಖ್ಯ ಅತಿಥಿ ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಬಿ.ವಿ.ರವೀಂದ್ರನಾಥ, ವ್ಯವಸ್ಥಾಪಕರು/ಜಿಲ್ಲಾ ಸಂಯೋಜಕರಾದ ಶ್ರೀ ಬಸವರಾಜ ಹೊಂಗಲ, ಜಿಲ್ಲಾ ಸಂಯೋಜಕರಾದ ಶ್ರೀ ವೃಷಭನಾಥ ಪರಪ್ಪನವರ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 116 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ. ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಬಿ.ವಿ.ರವೀಂದ್ರನಾಥ ಇವರು ಉಪನ್ಯಾಸ ನೀಡಿದರು.

ದಿನಾಂಕ 24 ಜೂನ್ 2020 ರಂದು **ಬೆಳಗಾವಿ ಜಿಲ್ಲೆಯ ಅಥಣಿ, ರಾಯಬಾಗ, ಚಿಕ್ಕೋಡಿ, ನಿಪ್ಪಾಣಿ ಹಾಗೂ ಬೆಳಗಾವಿ ತಾಲ್ಲೂಕಿನ** ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ. ವಿಷಯದ ಕುರಿತು ಆನ್ ಲೈನ್ ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ಕಾರ್ಯಕ್ರಮದಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ, ಮುಖ್ಯ ಅತಿಥಿ ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಬಿ.ವಿ. ರವೀಂದ್ರನಾಥ, ವ್ಯವಸ್ಥಾಪಕರು/ಜಿಲ್ಲಾ ಸಂಯೋಜಕರಾದ ಶ್ರೀ ಬಸವರಾಜ ಹೊಂಗಲ, ಜಿಲ್ಲಾ ಸಂಯೋಜಕರಾದ ಶ್ರೀ ಜವಾಹರ ಮುಗ್ಗನವರ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 105 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ. ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಬಿ.ವಿ.ರವೀಂದ್ರನಾಥ ಇವರು ಉಪನ್ಯಾಸ ನೀಡಿದರು.

**ಉತ್ತರ ಕನ್ನಡ :** ದಿನಾಂಕ 24 ಜೂನ್ 2020 ರಂದು ಉತ್ತರ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ. ವಿಷಯದ ಕುರಿತು ಆನ್ ಲೈನ್ ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎನ್. ರವಿ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ, ಮುಖ್ಯ ಅತಿಥಿ ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಮಧುಕರ ಹೆಗಡೆ ಉತ್ತರ ಕನ್ನಡ ಜಿಲ್ಲೆಯ ವ್ಯವಸ್ಥಾಪಕರು/ ಜಿಲ್ಲಾ ಸಂಯೋಜಕರಾದ ಶ್ರೀ ಗಂಗಾರಾಮ ಕೋಳಾಪ್ಟೆ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 75 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ. ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಮಧುಕರ ಹೆಗಡೆ ಇವರು ಉಪನ್ಯಾಸ ನೀಡಿದರು.

**ಹಾವೇರಿ ಜಿಲ್ಲೆ :** ದಿನಾಂಕ 25 ಜೂನ್ 2020 ರಂದು ಹಾವೇರಿ ಜಿಲ್ಲಾ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ. ವಿಷಯದ ಕುರಿತು ಆನ್ ಲೈನ್ ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಶ್ರೀ ಎಂ.ಬಿ. ಕಲಾಲ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ, ಮುಖ್ಯ ಅತಿಥಿ ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಬಿ.ವಿ.ರವೀಂದ್ರನಾಥ, ಹಾವೇರಿ ಜಿಲ್ಲಾ ಸಂಯೋಜಕರಾದ ಶ್ರೀ ಕಲ್ಮೇಶ ಮುಡೆಕ್ಕನವರ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 94 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ. ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಬಿ.ವಿ.ರವೀಂದ್ರನಾಥ ಇವರು ಉಪನ್ಯಾಸ ನೀಡಿದರು.

**ವಿಜಯಪುರ ಜಿಲ್ಲೆ :** ದಿನಾಂಕ 27 ಜೂನ್ 2020 ರಂದು ವಿಜಯಪುರ ಜಿಲ್ಲಾ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ. ವಿಷಯದ ಕುರಿತು ಆನ್ ಲೈನ್ ಮೂಲಕ ತರಬೇತಿ ಕಾರ್ಯಕ್ರಮವನ್ನು

ಆಯೋಜಿಸಲಾಗಿರುತ್ತದೆ. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪ ಚ. ಉಪ್ಪಿನ್, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ, ಮುಖ್ಯ ಅತಿಥಿ ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಎಸ್.ಜಿ.ಹೆಗಡೆ ವಿಜಯಪುರ ಜಿಲ್ಲಾ ಸಂಯೋಜಕರಾದ ಶ್ರೀ ಶಿವಕಾಂತ್ ಎನ್. ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 80 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ. ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಸ್.ಜಿ.ಹೆಗಡೆ ಇವರು ಉಪನ್ಯಾಸ ನೀಡಿದರು.

### ಮೈಸೂರು ವಿಭಾಗ

## ಪ್ರವೇಶ ತರಬೇತಿ ಕಾರ್ಯಕ್ರಮ

**ಚಾಮರಾಜನಗರ ಮತ್ತು ಮಂಡ್ಯ :** ದಿನಾಂಕ: 24.06.2020ರಂದು ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಗಳಲ್ಲಿ 2019-20ನೇ ಸಾಲಿನಲ್ಲಿ ನೂತನವಾಗಿ ನೋಂದಣಿ ಆಗಿರುವ ಸೌಹಾರ್ದ ಸಹಕಾರಿಗಳಿಗೆ 'ಪ್ರವೇಶ ತರಬೇತಿ' ಭಾಗವಾಗಿ "ಲೆಕ್ಕಪರಿಶೋಧನೆ ವರದಿ ಸಿದ್ದತೆ" ವಿಷಯದ ಬಗ್ಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ತರಬೇತಿ ಏರ್ಪಡಿಸಲಾಗಿತ್ತು. ಈ ತರಬೇತಿಯಲ್ಲಿ 15 ಸೌಹಾರ್ದ ಸಹಕಾರಿಗಳಿಂದ 21 ಪ್ರತಿನಿಧಿಗಳು ಭಾಗವಹಿಸಿದ್ದರು.

ಸದರಿ ತರಬೇತಿ ಕಾರ್ಯಕ್ರಮದ ಸ್ವಾಗತ ಮತ್ತು ಪರಿಚಯವನ್ನು ಶ್ರೀ ಚಂದ್ರಶೇಖರಯ್ಯ ಎಂ, ಸೌಹಾರ್ದ ಜಿಲ್ಲಾ ಸಂಯೋಜಕರು ನೇರವೇರಿಸಿದರು. ಪ್ರಾಸ್ತಾವಿಕವನ್ನು ಶ್ರೀ ಶಿವಕುಮಾರ ಬಿರಾದರ್, ಮೈಸೂರು ಪ್ರಾಂತೀಯ ವ್ಯವಸ್ಥಾಪಕರು ನೇರವೇರಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀಮತಿ ಶೋಭಾ ಆರ್, ಸಹ ಪ್ರಧಾನ ವ್ಯವಸ್ಥಾಪಕರು, ಕೇಂದ್ರ ಕಛೇರಿ, ಬೆಂಗಳೂರು ಇವರು ಭಾಗವಹಿಸಿದರು ಹಾಗೂ ತರಬೇತಿ ವಿಭಾಗದಿಂದ ಶ್ರೀಮತಿ ರೇಣುಕಾ ಉಪಸ್ಥಿತರಿದ್ದರು.

**ದಕ್ಷಿಣ ಕನ್ನಡ ಮತ್ತು ಉಡುಪಿ :** ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ 2018-19 ಹಾಗೂ 2019-20 ರಲ್ಲಿ ನೋಂದಣಿಯಾದ ಸೌಹಾರ್ದ ಸಹಕಾರಿಗಳಿಗೆ ಪ್ರವೇಶ ತರಬೇತಿಯನ್ನು ದಿನಾಂಕ 25.06.2020 ಗುರುವಾರದಂದು ವಿಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಪ್ರಾಸ್ತಾವಿಕ ನುಡಿಯನ್ನು ಶ್ರೀ ಮಂಜುನಾಥ್ ಎಸ್.ಕೆ ಮಾನ್ಯ ನಿರ್ದೇಶಕರು, ಕನಾಟಕ ರಾಜ್ಯ ಸೌಹಾರ್ದ ಸಂಯುಕ್ಯ ಸಹಕಾರಿ ನಿ., ಬೆಂಗಳೂರು ಇವರು ಮಾತನಾಡಿ ಸೌಹಾರ್ದ ಸಹಕಾರಿಗಳು ಇಡೀ ದೇಶಕ್ಕೆ ಮಾದರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಅದೇ ರೀತಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳು ಮಾದರಿ ಸೌಹಾರ್ದ ಸಹಕಾರಿಗಳು ಆಗಬೇಕೆಂದು ತಿಳಿಸಿದರು. ಸದರಿ ತರಬೇತಿಗೆ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಶ್ರೀಧರ್ ಸೋಮಯಾಜಿ ಪ್ರಧಾನ ವ್ಯವಸ್ಥಾಪಕರು, ಶ್ರೀ ಗುರುನರಸಿಂಹ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಸಾಲಿಗ್ರಾಮ ಇವರು ಸೌಹಾರ್ದ ಸಹಕಾರಿಗಳ ದೈನಂದಿನ ವ್ಯವಹಾರದಲ್ಲಿ ಇರಬೇಕಾದ ದಾಖಲೆಗಳ ಕುರಿತು ಮತ್ತು ಮುಖ್ಯಕಾರ್ಯನಿರ್ವಾಹಕರ ಕರ್ತವ್ಯಗಳು ಹಾಗೂ ಜವಾಬ್ದಾರಿಗಳ ಕುರಿತು ಮಾಹಿತಿ ನೀಡಿದರು. ಸದರಿ ತರಬೇತಿಗೆ 44 ಸೌಹಾರ್ದ ಸಹಕಾರಿಗಳಿಂದ 51 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ಸದರಿ ತರಬೇತಿಯಲ್ಲಿ ಪ್ರಾಂತದ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದಾರ, ಹಿರಿಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್ ರವರು ಉಪಸ್ಥಿತರಿದ್ದರು.

**ಮೈಸೂರು ಮತ್ತು ಕೊಡಗು :** ಮೈಸೂರು ಮತ್ತು ಕೊಡಗು ಜಿಲ್ಲೆಯಲ್ಲಿ 2018-19 ಹಾಗೂ 2019-20 ರಲ್ಲಿ ನೋಂದಣಿಯಾದ ಸೌಹಾರ್ದ ಸಹಕಾರಿಗಳಿಗೆ ಪ್ರವೇಶ ತರಬೇತಿಯನ್ನು ದಿನಾಂಕ 26.06.2020 ಶುಕ್ರವಾರದಂದು ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನುಡಿದರು. ಸದರಿ ತರಬೇತಿಗೆ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀಮತಿ ಶೋಭಾ, ಸಹಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರು ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನಾ ಸಿದ್ಧತೆಯ ಕುರಿತು ಉಪನ್ಯಾಸ ನೀಡಿದರು. ಹಾಗೂ ಶ್ರೀ ಜಗದೀಶ್ ಹೆಬ್ಬಾರ್ ರವರು ಗುಣಾತ್ಮಕ ಸಾಲಗಳು-ದಾಖಲಾತಿಗಳ ನಿರ್ವಹಣೆ ಕುರಿತು ವಿವರವಾಗಿ ಉಪನ್ಯಾಸ ನೀಡಿದರು. ಮೈಸೂರು ಮತ್ತು ಕೊಡಗು ಜಿಲ್ಲೆಯ ಸಂಯೋಜಕರಾದ ಶ್ರೀ ಸುರೇಶ ಆರ್.ಎಸ್ ರವರು ಉಪಸ್ಥಿತರಿದ್ದರು.

ಸದರಿ ತರಬೇತಿಗೆ ಹೊಸದಾಗಿ ನೋಂದಣಿಯಾದ 18 ಸೌಹಾರ್ದ ಸಹಕಾರಿಗಳಿಂದ 31 ಜನ ಪ್ರತಿನಿಧಿಗಳು ಹಾಗೂ ನೋಂದಣಿಯಾಗಬೇಕಾದಂತಹ ಸೌಹಾರ್ದ ಸಹಕಾರಿಯಿಂದ 5 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

## ಸೇವಾ ಸಿಂಧು ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವ ಕುರಿತು ತರಬೇತಿ ಕಾರ್ಯಕ್ರಮ

**ಮೈಸೂರು :** ಮೈಸೂರು ಪ್ರಾಂತದ ಇ-ಸ್ಟಾಂಪಿಂಗ್ ಸೇವಾ ವಿಭಾಗದಲ್ಲಿರುವ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ಸೇವಾ ಸಿಂಧು ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವ ಮಾಹಿತಿ ತರಬೇತಿಯನ್ನು ದಿನಾಂಕ 18.06.2020 ರಂದು ವೀಡಿಯೋ ಕಾನ್ಫರೆನ್ಸ್ ಮೂಲಕ ಮಧ್ಯಾಹ್ನ 2.30ಗಂಟೆಗೆ ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರು ಭಾಗವಹಿಸಿದ್ದರು. ಶ್ರೀಯುತ ನಾಗೇಂದ್ರರವರು ಸೇವಾ ಸಿಂಧು ಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು. ಹಾಗೂ ಕು. ಸರೋಜರವರು EC,RTC,CC ಕುರಿತು ವಿವರವಾಗಿ ತಿಳಿಸಿಕೊಟ್ಟರು. ಸದರಿ ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳು ಅತ್ಯುತ್ತಮವಾಗಿ ಪ್ರತಿಕ್ರಿಯೆ ನೀಡಿದರು. ಸದರಿ ಸಭೆಯಲ್ಲಿ 184 ಸೌಹಾರ್ದ ಸಹಕಾರಿಗಳಿಂದ 212 ಪ್ರತಿನಿಧಿಗಳು ಭಾಗವಹಿಸಿದ್ದರು.

ಸದರಿ ಸಭೆಯಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರ, ಹಿರಿಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರ ಹಾಗೂ ಪ್ರಾಂತದ ಎಲ್ಲಾ ಜಿಲ್ಲಾ ಸಂಯೋಜಕರು ಉಪಸ್ಥಿತರಿದ್ದರು.

## ಸಮಾಲೋಚನಾ ಸಭೆ

**ದಕ್ಷಿಣ ಕನ್ನಡ ಮತ್ತು ಉಡುಪಿ :** ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಆಯ್ದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರು ಹಾಗೂ ನಿರ್ದೇಶಕರುಗಳಿಗಾಗಿ ಸಾಲ ವಸೂಲಾತಿಯ ಪ್ರಸ್ತುತ ಸ್ಥಿತಿ ಗತಿಯ ಕುರಿತು ಸಮಾಲೋಚನಾ ಸಭೆಯನ್ನು ದಿನಾಂಕ 18.06.2020ರ ಗುರುವಾರದಂದು ಮಧ್ಯಾಹ್ನ 12.30ಗಂಟೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರು ಭಾಗವಹಿಸಿದ್ದರು. ಸದರಿ ಕಾರ್ಯಕ್ರಮದ ವಿಷಯಕ್ಕೆ ಸಂಬಂಧಿಸಿದಂತೆ ಹಲವು ಸೌಹಾರ್ದ ಸಹಕಾರಿಗಳು ಪ್ರಸ್ತುತ ಸಾಲ ವಸೂಲಾತಿಯಲ್ಲಿ ಸಮಸ್ಯೆಯನ್ನು ಎದುರಿಸಿರುವುದಾಗಿ ಹಾಗೂ ಕೆಲವು ಸೌಹಾರ್ದ ಸಹಕಾರಿಗಳು ಲಾಕ್‌ಡೌನ್ ಸಮಯದಲ್ಲಿ ಅತಿ ಹೆಚ್ಚು ಠೇವಣಿಗಳನ್ನು ಸ್ವೀಕೃತವಾಗಿದೆ ಎಂದು ತಿಳಿಸಿದರು. ಸದರಿ ಸಭೆಯಲ್ಲಿ ಎಸ್.ಡಿ.ಸಿ.ಸಿ ಬ್ಯಾಂಕ್ ನ ನಿರ್ದೇಶಕರು ಹಾಗೂ ಶ್ರೀರಾಮ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ರಾಜು ಪೂಜಾರಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಒಕ್ಕೂಟದ ಅಧ್ಯಕ್ಷರಾದ ಶ್ರೀ ಸುರೇಶ್ ರೈರವರು ಉಪಸ್ಥಿತರಿದ್ದರು. ಸಭೆಯಲ್ಲಿ 30 ಸೌಹಾರ್ದ ಸಹಕಾರಿಗಳಿಂದ 48 ಪ್ರತಿನಿಧಿಗಳು ಭಾಗವಹಿಸಿದ್ದರು. ಸದರಿ ಸಭೆಯಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರ, ಹಿರಿಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರ ಹಾಗೂ ಉಡುಪಿ ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್ ಉಪಸ್ಥಿತರಿದ್ದರು.

## ಡಿಜಿಟಲ್ ಸರ್ವೀಸ್-ಸೇವಾ ಸಿಂಧು' ಚಟುವಟಿಕೆ ಅಳವಡಿಸಿಕೊಳ್ಳುವ ಹಾಗೂ ಇ-ಸ್ಟಾಂಪಿಂಗ್ ಸರ್ವೀಸ್ ಕುರಿತು ತರಬೇತಿ ಕಾರ್ಯಕ್ರಮ

**ಚಿಕ್ಕಮಗಳೂರು ಮತ್ತು ಹಾಸನ :** ಚಿಕ್ಕಮಗಳೂರು ಮತ್ತು ಹಾಸನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಮತ್ತು ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮವನ್ನು ದಿನಾಂಕ 27 ಜೂನ್ 2020 ಶನಿವಾರದಂದು ಬೆಳಿಗ್ಗೆ 11.00 ಗಂಟೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಸ್ವಾಗತ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರ ರವರು ನೇರವೇರಿಸಿದರು. ಕಾರ್ಯಕ್ರಮದ ಪ್ರಾಸ್ತಾವಿಕವನ್ನು ಪ್ರಾಂತದ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ ರವರು ನೇರವೇರಿಸಿದರು. ಸಂಪನ್ಮೂಲ ವ್ಯಕ್ತಿಗಳಾದ ಎಸ್. ಸರೋಜ ಉಡುಪಿ ಜಿಲ್ಲಾ ಒಕ್ಕೂಟದ ಸಿಬ್ಬಂದಿ ಇವರು EC,RTC ಸೇವೆಗಳನ್ನು ಹೇಗೆ ನೀಡುವುದು ಎಂದು ವಿವರವಾಗಿ ತಿಳಿಸಿದರು. ಈ ರೀತಿ ನೀಡುವುದರಿಂದ ಸಹಕಾರಿಯ ಆರ್ಥಿಕ ಅಭಿವೃದ್ಧಿ ಪಡೆಯುವುದರಲ್ಲಿ ಸಫಲತೆ ಹೊಂದಬಹುದು ಎಂದು ತಿಳಿಸಿದರು. ಸಂಯುಕ್ತ ಸಹಕಾರಿಯ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಶೋಭ ಆರ್ ರವರು ಇ-ಸ್ಟಾಂಪಿಂಗ್ ಸೌಲಭ್ಯ ಪಡೆಯುವುದರ ಮತ್ತು ಅದರ ಉಪಯುಕ್ತತೆ ಬಗ್ಗೆ ಉಪನ್ಯಾಸ ನೀಡಿದರು. ಸದರಿ ಸಭೆಯಲ್ಲಿ 78 ಸೌಹಾರ್ದ ಸಹಕಾರಿಗಳಿಂದ 42 ಪ್ರತಿನಿಧಿಗಳು ಭಾಗವಹಿಸಿದ್ದರು.

**ಚಾಮರಾಜನಗರ ಮತ್ತು ಮಂಡ್ಯ :** ದಿನಾಂಕ 01.07.2020ರಂದು ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು\ ಮುಖ್ಯಕಾರ್ಯನಿರ್ವಾಹಕರುಗಳಿಗೆ "ಡಿಜಿಟಲ್ ಸರ್ವಿಸ್-ಬಡ್ಡಿಯೇತರ ಆದಾಯ" ಮತ್ತು ಇ-ಸ್ಟಾಂಪಿಂಗ್ ವ್ಯವಹಾರ" ವಿಷಯದ ಕುರಿತು "ವೀಡಿಯೋ ಕಾನ್ಫರೆನ್ಸ್" ಮೂಲಕ ತರಬೇತಿಯನ್ನು ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ 26 ಸೌಹಾರ್ದ ಸಹಕಾರಿಗಳಿಂದ 33 ಪ್ರತಿನಿಧಿಗಳು ಒಟ್ಟು 38 ಜನರು ಭಾಗವಹಿಸಿದ್ದರು.

ಸದರಿ ತರಬೇತಿಯ ಸ್ವಾಗತ ಮತ್ತು ಪರಿಚಯವನ್ನು ಶ್ರೀ ಎಂ. ಚಂದ್ರಶೇಖರಯ್ಯ, ಸೌಹಾರ್ದ ಜಿಲ್ಲಾ ಸಂಯೋಜಕರು ನೇರವೇರಿಸಿದರು. ಪ್ರಾಸ್ತಾವಿಕವನ್ನು ಶ್ರೀ ಶಿವಕುಮಾರ ಬಿರಾದರ್, ಮೈಸೂರು ಪ್ರಾಂತೀಯ ವ್ಯವಸ್ಥಾಪಕರು ನಡೆಸಿಕೊಟ್ಟರು. ಶ್ರೀ ಎಸ್.ಕೆ ಮಂಜುನಾಥ, ಮಾನ್ಯ ಮೈಸೂರು ಪ್ರಾಂತೀಯ ನಿರ್ದೇಶಕರು ಇವರು ಡಿಜಿಟಲ್ ಸರ್ವಿಸ್ ಮಹತ್ವವನ್ನು ಹಾಗೂ ಸಹಕಾರಿಗಳು ತಮ್ಮ ಆದಾಯದ ಮೂಲವನ್ನು ಹೆಚ್ಚಿಸಿಕೊಳ್ಳಲು ಅಗತ್ಯ ಕ್ರಮವಿಡುವ ಬಗ್ಗೆ ತಿಳಿಸಿದರು. "ಡಿಜಿಟಲ್ ಸರ್ವಿಸ್-ಬಡ್ಡಿಯೇತರ ಆದಾಯ" ವಿಷಯದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಸಂಕೀರ್ತನ್ .ಬಿ.ಜಿ ಇವರು ಮಾದರಿಗಳ\ನಮೂನೆಗಳ (ಸ್ಲೈಡ್ ಷೋ) ಮೂಲಕ ತಿಳಿಸಿ ಪ್ರತಿನಿಧಿಗಳ ಪ್ರಶ್ನೆಗಳಿಗೆ ಉತ್ತರವನ್ನು ನೀಡಿದರು.

ಇ-ಸ್ಟಾಂಪಿಂಗ್ ವ್ಯವಹಾರ" ವಿಷಯದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಎಂ. ಚಂದ್ರಶೇಖರಯ್ಯ, ಸೌಹಾರ್ದ ಜಿಲ್ಲಾ ಸಂಯೋಜಕರು ಇವರು ಮಾಹಿತಿಯನ್ನು ವಿವರಿಸಿ ನಂತರದಲ್ಲಿ ಭಾಗವಹಿಸಿದ ಪ್ರತಿನಿಧಿಗಳ ಪ್ರಶ್ನೆಗಳಿಗೆ ಉತ್ತರವನ್ನು ನೀಡಿದರು. ತರಬೇತಿ ವಿಭಾಗದ ಶ್ರೀಮತಿ ರೇಣುಕಾ "ವೀಡಿಯೋ ಕಾನ್ಫರೆನ್ಸ್" ತರಬೇತಿಯನ್ನು ನಿರ್ವಹಿಸಿ ಕೊನೆಯಲ್ಲಿ ವಂದನಾರ್ಪಣೆ ಮಾಡಿದರು.

## ಪ್ರವರ್ತಕರ ಸಭೆ

**ಚಾಮರಾಜನಗರ :** ಉದ್ದೇಶಿತ ಕೊಳ್ಳೇಗಾಲ ಸೌಹಾರ್ದ ಸಹಕಾರಿ ನಿ.,' ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ ಇದರ ಪ್ರವರ್ತಕರ ಸಭೆಯನ್ನು 'ವೀಡಿಯೋ ಕಾನ್ಫರೆನ್ಸ್' ಮೂಲಕ ಯಶಸ್ವಿಯಾಗಿ ನಡೆಸಲಾಯಿತು. ಒಟ್ಟು 08 ಜನರು ಭಾಗವಹಿಸಿದ್ದರು. ಸ್ವಾಗತ ಮತ್ತು ಪರಿಚಯವನ್ನು ತರಬೇತಿ ವಿಭಾಗದ ಶ್ರೀಮತಿ ರೇಣುಕಾ ನಡೆಸಿಕೊಟ್ಟರು. ಶ್ರೀ ಚಂದ್ರಶೇಖರಯ್ಯ ಎಂ, ಸೌಹಾರ್ದ ಜಿಲ್ಲಾ ಸಂಯೋಜಕರು ಇವರು ಸಹಕಾರಿಯ ಷೇರು ಸಂಗ್ರಹ, ಪ್ರವರ್ತಕರ ಕಾರ್ಯಚಟುವಟಿಕೆ ಮತ್ತು ನೋಂದಣಿ ಕುರಿತು ಸಭೆಯಲ್ಲಿ ಮಾಹಿತಿ ನೀಡಿದರು. ಶ್ರೀ ಸುಹಾಸ್, ಮುಖ್ಯ ಪ್ರವರ್ತಕರು ವಂದಿಸಿದರು.

# ಕೋರೊನಾ ವೈರಸ್ (ಕೋವೀಡ್-19) ವಿರುದ್ಧ ಹೋರಾಡಲು ರಾಜ್ಯದ ಸೌಹಾರ್ದ ಸಹಕಾರಿಗಳ ಸಾಮಾಜಿಕ ಕಾರ್ಯಚಟುವಟಿಕೆಗಳು ಹಾಗೂ ಪ್ರಧಾನ ಮಂತ್ರಿ ಹಾಗೂ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ನೀಡಿರುವ ದೇಣಿಗೆ ಮತ್ತು ಆಶಾ ಕಾರ್ಯಕರ್ತೆಯರಿಗೆ ನೀಡಿದ ಗೌರವ ಧನ



**ಮೈಸೂರು:** ದಿನಾಂಕ 08.06.2020ರಂದು ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರಿಗೆ ಮಾನ್ಯ ಸಹಕಾರ ಸಚಿವರಾದ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಸ್.ಟಿ.ಸೋಮಶೇಖರ್ ಇವರು ಸಹಕಾರಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಕೋವೀಡ್–19 ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಸಹಕಾರಿಯ ಅಧ್ಯಕ್ಷರಾದ ಶ್ರೀ ಟಿ.ಎಸ್ ಶೇಷಾದ್ರಿ ಯವರು 1,70,000/–ರೂಗಳ ಚೆಕ್‌ನ್ನು ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀ ಹೆಚ್. ವಿ. ರಾಜೀವ್, ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರು, ಸಹಕಾರಿಯ ಸದಸ್ಯರು, ಪ್ರಭಾರ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯಾದ ಶ್ರೀ ಹೆಚ್.ವಿ. ಪುರುಷೋತ್ತಮ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

**ಬೆಂಗಳೂರು:** ಜನವಿಕಾಸ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಸಹಕಾರಿ ವತಿಯಿಂದ ಕೋವೀಡ್–19 ಲಾಕ್ ಡೌನ್ ಸಮಯದಲ್ಲಿ ಕಾರ್ಮಿಕರಿಗೆ, ಆಟೋ ಚಾಲಕರಿಗೆ, ಹೋಟೆಲ್ ಕಾರ್ಮಿಕರಿಗೆ, ಬಿ.ಬಿ.ಎಂ.ಪಿ. ಕಾರ್ಮಿಕರಿಗೆ, ಪಂಚಾಯತ್ ದಿನಗೂಲಿ ಕಾರ್ಮಿಕರಿಗೆ, ಬಡರೈತರಿಗೆ ಆಹಾರ ಸಾಮಾಗ್ರಿಗಳ 300 ದಿನಸಿ ಕಿಟ್‌ಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಬಿ. ದಯಾನಂದ, ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

**ಕಲಬುರಗಿ:** ದಿನಾಂಕ 09.06.2020ರಂದು ಕಲಬುರಗಿ ಪ್ರಾಂತೀಯ ಕಛೇರಿಯಲ್ಲಿ ಶ್ರೀ ಧನಲಕ್ಷ್ಮೀ ಸೌಹಾರ್ದ ಪತ್ತಿನ ಸಹಕಾರಿ ನಿ., ಸರಸಂಬಾ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಾಹಂತಪ್ಪಾ ಆಲೂರೆವರು ಹಾಗೂ ಸಹಕಾರಿಯ ನಿರ್ದೇಶಕರ ಉಪಸ್ಥಿತಿಯಲ್ಲಿ ಕೋವಿಡ–19 ಪರಿಹಾರ ನಿಧಿ ಸಲುವಾಗಿ ರೂ 11000/– ಚೆಕ್‌ನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ರವರಿಗೆ ಸಲ್ಲಿಸಲಾಯಿತು.



**ಬೆಳಗಾವಿ:** ಶ್ರೀ ಬಸವಜ್ಯೋತಿ ಸೌಹಾರ್ದ ಸಹಕಾರಿ ನಿಯಮಿತ ಹತ್ತರವಾಟ ಸಹಕಾರಿಯ ಸದಸ್ಯರು, ಆಡಳಿತ ಮಂಡಳಿ ಹಾಗೂ ಸಿಬ್ಬಂದಿಗಳವತಿಯಿಂದ ಆಶಾ ಕಾರ್ಯಕರ್ತೆಯರಿಗೆ 3000/– ರೂಪಾಯಿ ಮೊತ್ತದ ಪ್ರೋತ್ಸಾಹ ಧನದ ಚೆಕ್ ನೀಡಿ ಗೌರವಿಸಲಾಯಿತು.



**ಕೊಪ್ಪಳ:** ದಿನಾಂಕ: 25.06.2020 ರಂದು ಗಂಗಾವತಿ ಸಿಟಿ ಪತ್ತಿನ ಸೌಹಾರ್ದ ಸಹಕಾರಿ ನಿ., ಗಂಗಾವತಿ ಸಹಕಾರಿಯಿಂದ ಆಶಾ ಕಾರ್ಯಕರ್ತೆಯರನ್ನು ಸನ್ಮಾನಿಸಲಾಯಿತು.

**ಶಿವಮೊಗ್ಗ:** ಹೊಯ್ಸಳ ಕರ್ನಾಟಕ ಪತ್ತಿನ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಸದರಿ ಸಹಕಾರಿ ವತಿಯಿಂದ ಕೋವೀಡ್–19 ಏಪ್ರಿಲ್, ಮೇ ಹಾಗೂ ಜೂನ್ ತಿಂಗಳ ಅವಧಿಯಲ್ಲಿ ಸಾಲ ವಿತರಣೆ ರೂ. 1 ಕೋಟಿ 17 ಲಕ್ಷ, ಠೇವಣಿ ಸಂಗ್ರಹ ರೂ. 2 ಕೋಟಿ 15 ಲಕ್ಷ ಹಾಗೂ ಠೇವಣಿ ವಾಪಸಾತಿ ರೂ. 1 ಕೋಟಿ 81 ಲಕ್ಷಗಳಾಗಿರುತ್ತದೆ. ಈ ರೀತಿ ಸಹಕಾರಿಯ ಯಾವುದೇ ಸದಸ್ಯರಿಗೆ ತೊಂದರೆಯುಂಟಾಗದಂತೆ ಕಾರ್ಯನಿರ್ವಹಿಸಲಾಗಿದೆ.

ಸದರಿ ಸಹಕಾರಿಯು ಹೊಯ್ಸಳ ಹೆಲ್ತ್–ಕೇರ್ ಡಯಾಲಿಸಿಸ್ ಆಸ್ಪತ್ರೆ ಮತ್ತು ಎಂ ಆನಂದವಾರ್ ಸೇವಾಟ್ರಸ್ಟ್ ನ ಸಹಯೋಗದೊಂದಿಗೆ 1200 ಉಚಿತ ಡಯಾಲಿಸಿಸ್ ಚಿಕಿತ್ಸೆ, 250 ರಿಯಾಯ್ತಿ ಡಯಾಲಿಸಿಸ್ ಚಿಕಿತ್ಸೆ, 1000 ಮಾಸ್ಕ್ ವಿತರಣೆ, 100 ಬಾಟಲ್ ಸ್ಯಾನಿಟೈಸರ್ ವಿತರಣೆ, 170 ಕಿಟ್‌ಗಳ ಆಹಾರ ವಿತರಣೆ, 150 ಮನೆಗಳಿಗೆ ವಿವಿಧ ತರಕಾರಿ ಕಿಟ್ ವಿತರಣೆ, 150 ಮನೆಗಳಿಗೆ ಹಾಲು, ಮೊಸರು ಹಾಗೂ ತುಪ್ಪ ವಿತರಣೆ, 1000 ಪೊಟ್ಟಣಗಳ ಸಿದ್ಧ ಆಹಾರ ವಿತರಣೆ, 1000 ಮಜ್ಜಿಗೆ ಪ್ಯಾಕೇಟ್ ವಿತರಣೆ ಮಾಡಲಾಯಿತು.




**ರಾಯಚೂರು:** ನಾಗಲಾಂಬಿಕೆ ಪತ್ತಿನ ಸೌಹಾರ್ದ ಸಹಕಾರಿ ನಿ., ಮಾನವಿ ಸದರಿ ಸಹಕಾರಿ ವತಿಯಿಂದ ಹತ್ತು ಜನ ಆಶಾ ಕಾರ್ಯಕರ್ತೆಯರನ್ನು ತಲಾ ರೂ. 3000 ರಂತೆ 30.000/– ಗೌರವಧನ ಚೆಕ್ ನೀಡಿ ಸನ್ಮಾನಿಸಲಾಯಿತು.



**ಬೆಳಗಾವಿ:** ಸುಣಧೋಳಿ ಮಹಿಳಾ ಸೌಹಾರ್ದ ಸಹಕಾರಿ ನಿ., ಸುಣಧೋಳಿ ವತಿಯಿಂದ 5 ಜನ ಆಶಾ ಕಾರ್ಯಕರ್ತೆಯರಿಗೆ ತಾಲಾ 3000–/ ರೂ ದಂತೆ ಒಟ್ಟು 15000/– ರೂ ಪ್ರೋತ್ಸಾಹ ಧನ ನೀಡಿ ಗೌರವಿಸಲಾಯಿತು.



**ರಾಯಚೂರು:** ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ನಿ., ಕಾರ್ಯಾಲಯದಲ್ಲಿ ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನವಾಗಿ ತಲಾ 3000/– ರೂಗಳ ಚೆಕ್ ಅನ್ನು ವಿತರಿಸಲಾಯಿತು. ನಂತರ ಸಹಕಾರಿಯ ಅಧ್ಯಕ್ಷ ಡಾ॥ ಶಿವಶರಣಪ್ಪ ಇತ್ಲಿ ಮಾತನಾಡಿ ಸಹಕಾರಿಯ ಆಡಳಿತ ಮಂಡಳಿಯು 65 ಜನ ಆಶಾ ಕಾರ್ಯಕರ್ತೆಯರಿಗೆ ತಲಾ 3000 ರೂಗಳಂತೆ ಒಟ್ಟು 1,95,000 ರೂಗಳ ಪ್ರೋತ್ಸಾಹ ಧನವನ್ನು ವಿತರಿಸಲಾಗಿದೆ.

ಕಾರ್ಯಕ್ರಮದಲ್ಲಿ ಸಹಕಾರ ಸಂಘಗಳ ಜಂಟಿ ನಿಬಂಧಕ ಕಲಬುರಗಿ ಪ್ರಾಂತಿಯ ವಿಭಾಗ ರಾಯಚೂರಿನ ಚವ್ಹಾಣ್ ಗೋಪಾಲ, ಸಿ.ಪಿ.ಐ ದೀಪಕ್ ಭೂಸರೆಡ್ಡಿ, ಡಾ॥ ನಾಗರಾಜ ಚೌಶೆಟ್ಟಿ, ತಾಲ್ಲೂಕಾ ಆರೋಗ್ಯಾಧಿಕಾರಿ ಡಾ॥ ನಂದಕುಮಾರ, ನಿಯಮಿತದ ಉಪಾಧ್ಯಕ್ಷ ಪಂಪಣ್ಣ ಗುಂಡಳ್ಳಿ, ಪ್ರಧಾನ ವ್ಯವಸ್ಥಾಪಕ ವಿರೇಶ್ ಹಿರೇಮಠ, ಸಿ.ಡಿ.ಒ ಶೇಖ ಉಸೇನ್, ಹಾಗೂ ನಿಯಮಿತದ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಬೆಳಗಾವಿ:** ಕೌಜಲಗಿ ಗ್ರಾಮದಲ್ಲಿ ನಡೆದ ಕೌಜಲಗಿ ಗ್ರಾಮದ ಸಹಕಾರಿ ಸಂಸ್ಥೆಗಳು ಹಾಗೂ ಗ್ರಾಮ ಪಂಚಾಯಿತಿ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೌಜಲಗಿ ಸೌಹಾರ್ದ ಸಹಕಾರಿ ನಿ., ಹಾಗೂ ಪ್ರತಿಭಾ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ವತಿಯಿಂದ ತಲಾ 2 ಜನ ಆಶಾ ಕಾರ್ಯಕರ್ತೆಯರಿಗೆ 3000–/ ರೂ ನಂತೆ ಒಟ್ಟು ತಲಾ 6000/–ರೂ ಪ್ರೋತ್ಸಾಹ ಧನ ನೀಡಿ ಗೌರವಿಸಲಾಯಿತು.



**ಬೆಳಗಾವಿ:** ಶ್ರೀ ಜಿನ್ನಪ್ಪಣ್ಣಾ ಚೌಗಲೆ ಕ್ರೆಡಿಟ್ ಸೌಹಾರ್ದ ಸಹಕಾರಿ ಶಿರಗುಪ್ಪಿ, ಶ್ರೀ ಶಾಂತಿಸಾಗರ ಕ್ರೆಡಿಟ್ ಸೌಹಾರ್ದ ಸಹಕಾರಿ ಶಿರಗುಪ್ಪಿ ಕರ್ಮವೀರ ಅಲ್ಪಸಂಖ್ಯಾತರ ಮತ್ತು ಹಿಂದುಳಿದ ವರ್ಗಗಳ ಪತ್ತಿನ ಸೌಹಾರ್ದ ಸಹಕಾರಿ ಶಿರಗುಪ್ಪಿ ಸಹಕಾರಿಗಳು ಆಶಾ ಕಾರ್ಯಕರ್ತೆಯರಿಗೆ ಪ್ರತಿಯೊಂದು ಸಹಕಾರಿಯಿಂದ ಒಬ್ಬರಿಗೆ ತಲಾ 3000 ಮೊತ್ತದ ಪ್ರೋತ್ಸಾಹ ಧನದ ಚೆಕ್ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ವೈದ್ಯಾಧಿಕಾರಿಯನ್ನು ಸನ್ಮಾನಿಸಲಾಯಿತು.



**ಬೆಳಗಾವಿ:** ಶ್ರೀ ಮಹಾಲಿಂಗೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ದಿಗ್ಗೆವಾಡಿ ಇದರ ಅಧ್ಯಕ್ಷರಾದ ಶ್ರೀ ಡಿ ಎಲ್ ಮಿರ್ಜೆ ಹಾಗೂ ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ವರ್ಗದವರ ಉಪಸ್ಥಿತಿಯಲ್ಲಿ 6 ಜನ ಆಶಾ ಕಾರ್ಯಕರ್ತರಿಗೆ ರೂ. 3000/– ಗಳಂತೆ 18000/–ರೂಪಾಯಿಗಳನ್ನು ಗೌರವ ಧನ ನೀಡಿ ಗೌರವಿಸಲಾಯಿತು.



**ರಾಯಚೂರು :** ದಿನಾಂಕ 12.06.2020 ರಂದು ಅನಿಕೇತನ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು ಸಹಕಾರಿಯಿಂದ 02 ಆಶಾ ಕಾರ್ಯಕರ್ತರಿಗೆ ರೂ. 6000/– ಪ್ರೋತ್ಸಾಹ ಧನ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಮಾನ್ಯ ಉಪ ನಿಬಂಧಕರು, ಸಹಕಾರಿಯ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ರಾಯಚೂರು:** ದಿನಾಂಕ 12.06.2020 ರಂದು ನಿಲಾದ್ರಿ ಪತ್ತಿನ ಸೌಹಾರ್ದ ಸಹಕಾರಿ ನಿ. ಮಾನವಿ, ಸದರಿ ಸಹಕಾರಿಯು 3 ಜನ ಆಶಾ ಕಾರ್ಯಕರ್ತೆಯರಿಗೆ ರೂ. 9000/– ಪ್ರೋತ್ಸಾಹ ಧನ ನೀಡಿ ಗೌರವಿಸಲಾಯಿತು.



**ರಾಯಚೂರು:** ಶ್ರೀ ವಿರೂಪಾಕ್ಷೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ. ಮಾನವಿ ಈ ಸಹಕಾರಿಯು 10 ಜನ ಆಶಾ ಕಾರ್ಯಕರ್ತೆಯರಿಗೆ ರೂ. 30.000/– ಪ್ರೋತ್ಸಾಹ ಧನ ನೀಡಿ ಗೌರವಿಸಲಾಯಿತು.



**ಕೊಪ್ಪಳ:** ದಿನಾಂಕ 20.06.2020 ರಂದು ಚೇತನ ಪತ್ತಿನ ಸೌಹಾರ್ದ ಸಹಕಾರಿ ನಿ., ತಾವರಗೇರ, ಕೊಪ್ಪಳ ಸಹಕಾರಿಯಿಂದ 30 ಜನ ಆಶಾ ಕಾರ್ಯಕರ್ತರಿಗೆ ರೂ. 30.000/– ಪ್ರೋತ್ಸಾಹ ಧನ ವಿತರಿಸಲಾಯಿತು.



**ರಾಯಚೂರು :** ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಸಿಂಧನೂರು ವತಿಯಿಂದ ಶ್ರೀ ಹಂಪನಗೌಡಬಾದರ್ಲಿ ಅಧ್ಯಕ್ಷತೆಯಲ್ಲಿ, ಮುಖ್ಯಕಾರ್ಯನಿರ್ವಾಹಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದುತ್ತಿರುವ ಶ್ರೀ ಹನುಮಂತಯ್ಯ ಎಂ ಇವರನ್ನು ಸನ್ಮಾನಿಸಲಾಯಿತು. ಹಾಗೂ ಕೋವಿಡ್ 19 ಇದರಲ್ಲಿ ಸೇವೆ ಸಲ್ಲಿಸಿರುವ 50 ಜನ ಆಶಾಕಾರ್ಯಕರ್ತರಿಗೆ ರೂ. 3000 ರೂಪಾಯಿಯಂತೆ ರೂ. 1.50.000/– ಗೌರವಧನ ನೀಡಿ ಸನ್ಮಾನಿಸಲಾಯಿತು.



**ಬೆಳಗಾವಿ:** ಶ್ರೀ 1008 ಆದಿನಾಥ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿಯಮಿತ ಜೂಗುಳ ಸಹಕಾರಿಯಿಂದ 02 ಜನ ಆಶಾ ಕಾರ್ಯಕರ್ತೆಯರಿಗೆ ತಲಾ 3,000 ಸಾವಿರದಂತೆ ಒಟ್ಟು 6,000 ಮೊತ್ತದ ಪ್ರೋತ್ಸಾಹ ಧನದ ಚೆಕ್ ನೀಡಿ ಗೌರವಿಸಲಾಯಿತು.



**ಬೆಳಗಾವಿ:** ದಿನಾಂಕ 15.06.2020 ರಂದು ಎಂಜೆಲ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಅಥಣಿ ಇವರು ವತಿಯಿಂದ ಇಬ್ಬರು ಆಶಾ ಕಾರ್ಯಕರ್ತರಿಗೆ ತಲಾ 3000 ದಂತೆ ಒಟ್ಟು 6000 ಮೊತ್ತದ ಎರಡು ಚೆಕ್ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ರವಿ ಎಸ್ ಪೂಜಾರಿ, ಸಹಕಾರಿ ಕಾರ್ಯದರ್ಶಿಯಾದ ಉದಯ ಬಿಳ್ಳೂರ ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.



**ಕೊಪ್ಪಳ :** ದಿನಾಂಕ 18/06/2020 ರಂದು ಸಹಕಾರಿ ಇಲಾಖೆಯ ವತಿಯಿಂದ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಗುರುಭವನದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ್ ರವರ ಅಧ್ಯಕ್ಷತೆಯಲ್ಲಿ ಕೊಪ್ಪಳ ಜಿಲ್ಲೆಯ ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನವನ್ನು ನೀಡುವ ಕುರಿತು ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ.ಪತ್ತಾರ್, ಒಕ್ಕೂಟದ ನಿರ್ದೇಶಕರುಗಳಾದ ಶ್ರೀ ಗಿರೀಶ್ ಮತ್ತು ಶ್ರೀ ಕುಮಾರೆಪ್ಪ ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿ ಶ್ರೀ ಬಸವನಗೌಡ ಪೊಲೀಸ್ ಪಾಟೀಲ್ ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ಪವನ್ ಉಪಸ್ಥಿತರಿದ್ದರು.



**ಮಸ್ಕಿ :** ಪಟ್ಟಣದ ಸಿದ್ದಗಂಗಾ ಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿಯಲ್ಲಿ ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹಧನವಾಗಿ ತಲಾ 3000 ರೂಗಳ ಚೆಕ್ ಅನ್ನು ವಿತರಿಸಲಾಯಿತು. ದೇಶದಲ್ಲಿ ವ್ಯಾಪಕವಾಗಿ ಹರಡುತ್ತಿರುವ ಕೋರೊನಾ ವೈರಸ್‌ನ್ನು ತಡೆಗಟ್ಟಲು ಅವಿರತವಾಗಿ ಸೇವೆಯನ್ನು ಸಲ್ಲಿಸುತ್ತಿದ್ದು ಇವರಿಗೆ ಹೆಚ್ಚಿನ ಆತ್ಮಸ್ಥೈರ್ಯ ತುಂಬಲು 10 ಜನ ಆಶಾ ಕಾರ್ಯಕರ್ತೆಯರಿಗೆ ತಲಾ 3000 ರಂತೆ ಒಟ್ಟು 30000 ರೂಪಾಯಿಯ ಚೆಕ್ ಅನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಲಕ್ಷ್ಮಿ ನಾರಾಯಣ ಶ್ರೇಷ್ಠಿ ಯವರು ವಿತರಿಸಲಾಯಿತು. ಈ ಸಂಧರ್ಭದಲ್ಲಿ ಮಸ್ಕಿ ಪಿ.ಎಸ್.ಆಯ್. ಸಣ್ಣ ವೀರೇಶ, ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಆದಯ್ಯಸ್ವಾಮಿ ಕ್ಯಾತ್ನಟ್ಟಿ, ನಿರ್ದೇಶಕರಾದ ಶ್ರೀ ತಿಪ್ಪಯ್ಯಸ್ವಾಮಿ ಸಾಲಿಮಠ, ಶ್ರೀ ಶಿವಶಂಕರಸ್ವಾಮಿ ಗಚ್ಚಿನಮಠ, ಶ್ರೀ ಶಿವಾಜಿರಾವ್ ಲೋಕ್ರೆ ಹಾಗೂ ಸಲಹಾ ಸಮಿತಿಯವರಾದ ಶ್ರೀ ಉಮಾಪತಿ ಶ್ರೇಷ್ಠಿ, ಶ್ರೀ ಸೋಮಶೇಖರಯ್ಯ ಸಿರವಾರಮಠ, ಶ್ರೀ ಪಾರ್ಶ್ವನಾಥ ಕೋಲ್ಹಾರ, ಸಹಕಾರಿ ಇಲಾಖೆ ಅಧಿಕಾರಿಗಳಾದ ಮೊಹಮ್ಮದ್ ಮುದಾಸೀರ್, ಹೀರೋಜಿ ಹಾಗೂ ಸಹಕಾರಿಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಮುದಗಲ್ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ರಾಯಚೂರು :** ದಿನಾಂಕ 16.06.2020 ರಂದು ರಾಯಚೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟ ಹಾಗೂ ಸಿಂಧನೂರು ತಾಲ್ಲೂಕು ಸೌಹಾರ್ದ ಸಹಕಾರಿಗಳಿಂದ 104 ಆಶಾ ಕಾರ್ಯಕರ್ತೆಯರಿಗೆ ತಲಾ ರೂ 3,000/– ದಂತೆ ರೂ. 3.12.000/– ಗೌರವ ಧನವನ್ನು ವಿವಿಧ ಸೌಹಾರ್ದ ಸಹಕಾರಿಗಳಿಂದ ವಿತರಿಸಲಾಯಿತು. ಈ ಸಂದರ್ಭದಲ್ಲಿ ಮಾಜಿ ಸಂಸದ ಕೆ ವಿರುಪಾಕ್ಷಪ್ಪ, ಸಿಂಧು ಕ್ರೆಡಿಟ್ ಸೌಹಾರ್ದ ಸಹಕಾರಿ ಅಧ್ಯಕ್ಷ ಬಿ ರಾಜಶೇಖರ, ಸಹಕಾರ ಸಂಘಗಳ ಜಂಟಿ ನಿಬಂಧಕ ಗೋಪಾಲ ಚವಾಣ್ ಹಾಗೂ ವಿವಿಧ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.



**ರಾಯಚೂರು:** ಮಾನವಿ ಪತ್ತಿನ ಸೌಹಾರ್ದ ಸಹಕಾರಿ ನಿ. ಮಾನವಿ ಈ ಸಹಕಾರಿಯು 02 ಆಶಾ ಕಾರ್ಯಕರ್ತರಿಗೆ ರೂ. 6000/– ಪ್ರೋತ್ಸಾಹ ಧನ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷರಾದ ಹೆಚ್ ಮೌನೇಶ್ ಹಾಗೂ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಬೆಳಗಾವಿ :** ಜೈ ಹನುಮಾನ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ., ಇಂಗಳಿ ಸಹಕಾರಿಯ ಸದಸ್ಯರು, ಆಡಳಿತ ಮಂಡಳಿ ಹಾಗೂ ಸಿಬ್ಬಂದಿಗಳ ವತಿಯಿಂದ ಆಶಾ ಕಾರ್ಯಕರ್ತೆಯರಿಗೆ 3000 ರೂಪಾಯಿ ಮೊತ್ತದ ಪ್ರೋತ್ಸಾಹ ಧನದ ಚೆಕ್ ನೀಡಿ ಗೌರವಿಸಲಾಯಿತು.



**ಉಡುಪಿ:** ಸವಿತಾ ಸಮಾಜ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ನಿ. ಸಹಕಾರಿಯು ಕೊರೊನಾ ಸಂಕಷ್ಟದ ಸಮಯದಲ್ಲಿ 2 ತಿಂಗಳ ಕಾಲ, ಕ್ಷೌರಿಕ ವೃತ್ತಿ ಮಾಡುವವರ ಸಂಕಷ್ಟವನ್ನು ಅರಿತು ಸಹಕಾರಿಯು ಈ ಕೆಳಗಿನ ಹೊಸ ಯೋಜನೆಗಳನ್ನು ಪ್ರಕಟಿಸಲಾಯಿತು.

- ಸಹಕಾರಿಯಿಂದ ಸದಸ್ಯರಿಗೆ 5000/– ರೂ. ಜಾಮೀನು ರಹಿತ ತುರ್ತುಸಾಲವನ್ನು 12 ವರ್ಷಗಳಿಂದ ನೀಡಿಕೊಂಡು ಬಂದಿದ್ದೇವೆ.
- ವೈಯಕ್ತಿಕ ಸಾಲ, ವಾಹನ ಸಾಲ, ಆಭರಣ ಸಾಲ, ಅಡಮಾನ ಸಾಲ, ಗೃಹ ಸಾಲ, ಇನ್ನಿತರ ಸಾಲಗಳನ್ನು ಸವಿತಾ ಸಮಾಜ ಸಹಕಾರಿಯ ಸದಸ್ಯರಿಗೆ ಕಡಿಮೆ ಬಡ್ಡಿ ದರದಲ್ಲಿ ನೀಡುತ್ತಿದ್ದೇವೆ.
- ಸಹಕಾರಿಯ ಸೆಲೂನ್ ಸಾಮಾಗ್ರಿ ಮಳಿಗೆಯಲ್ಲಿ ನಿರಂತರವಾಗಿ ಖರೀಧಿಸುವವರಿಗೆ (ವರ್ಷಕ್ಕೆ ಕನಿಷ್ಠ 5000/–) ಸದಸ್ಯರ ವೈಯಕ್ತಿಕ ಸಾಲದ 3 ತಿಂಗಳ ಬಡ್ಡಿಯನ್ನು ಮನ್ನಾ ಮಾಡಲಾಗುವುದು.
- ಸಹಕಾರಿಯ ಎಲ್ಲಾ ಸದಸ್ಯರುಗಳ ಎಲ್ಲಾ ರೀತಿಯ ಸಾಲದ ಮರುಪಾವತಿ ಅವಧಿಯನ್ನು 3 ತಿಂಗಳು ವಿಸ್ತರಿಸಲಾಗುವುದು.
- Lockdown ತೆರವಿನ ನಂತರ ಆರ್ಥಿಕತೆಯನ್ನು ಪುನಃಶ್ಚೇತನಗೊಳಿಸಲು ಸದಸ್ಯರಿಗೆ 10000/– ರೂ. ಆರು ತಿಂಗಳ ಬಡ್ಡಿರಹಿತ ಸಾಲ ಜಿಲ್ಲೆಯ ಎಲ್ಲಾ ಕ್ಷೌರಿಕರಿಗೂ ನೀಡಲಾಗುವುದು. ಸಹಕಾರಿಯ ಸೆಲೂನ್ ಸಾಮಾಗ್ರಿ ಮಳಿಗೆಯಲ್ಲಿ ವ್ಯವಹರಿಸುತ್ತಿರುವವರಿಗೆ ಈ ಸಾಲ ಜಾಮೀನು ರಹಿತವಾಗಿರುತ್ತದೆ.
- ಬಡ್ಡಿರಹಿತ ಸಾಲ ಯೋಜನೆಯನ್ನು ಜಿಲ್ಲೆಯಾದ್ಯಂತ ಇರುವ ಬ್ಯೂಟಿ ಪಾರ್ಲರ್‌ಗೂ ಕೂಡಾ ವಿಸ್ತರಿಸಲಾಗುವುದು.
- ಮೇ. 18 ರಂದು ಸೆಲೂನ್‌ಗಳು ಪುನಃರಾರಂಭವಾಗುವ ಸಂದರ್ಭದಲ್ಲಿ ಸವಿತಾ ಸಮಾಜದ ಕ್ಷೌರಿಕರಿಗೆ ಅನುಕೂಲವಾಗುವಂತೆ ಸುಮಾರು 800 ಕ್ಕೂ ಹೆಚ್ಚು ಉಚಿತ ಸೆಲೂನ್ ಕಿಟ್ ಗಳನ್ನು ಸುಮಾರು ನಾಲ್ಕು ಲಕ್ಷ ರುಪಾಯಿ ವೆಚ್ಚದಲ್ಲಿ ಸಹಕಾರಿಯ ಸೆಲೂನ್ ಸಾಮಾಗ್ರಿ ಮಳಿಗೆಯಲ್ಲಿ ಕನಿಷ್ಠ 2,000/–ರೂ. ವ್ಯವಹಾರ ಹೊಂದಿರುವ ಸಹಕಾರಿಯ ಸದಸ್ಯರಿಗೆ ನೀಡಲಾಗುವುದು.



**ಕೊಪ್ಪಳ :** ಸ್ವಾನ್ ಇಂಡಿಯಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸಹಕಾರಿ ವತಿಯಿಂದ ಕೋವಿಡ್ ಮಹಾಮಾರಿ (ಕೋವಿಡ್–19) ಯಿಂದ ಇಡೀ ವಿಶ್ವವು ಆರ್ಥಿಕ ಹಾಗೂ ಸಾಮಾಜಿಕ ಸಂಕಷ್ಟಕ್ಕೆ ಸಿಲುಕಿದೆ. ಕೋವಿಡ್–19 ಮಹಾಮಾರಿಯು ಹರಡದಂತೆ ಮತ್ತು ಅದಕ್ಕೆ ತಡೆಗೋಡೆಯಾಗಿ ಪ್ರಮುಖವಾಗಿ ಹಗಲಿರುಳೆನ್ನದೆ ಕಾರ್ಯನಿರ್ವಹಿಸುತ್ತಿರುವ ಕೊರೋನಾ ವಾರಿಯರ್ಸ್ ಗಳಾದ ವೈದ್ಯಕೀಯ ಸಿಬ್ಬಂದಿ, ಪೋಲಿಸ್, ಪಟ್ಟಣ ಪಂಚಾಯತ ಕಾರ್ಯಕರ್ತರು ಮತ್ತು ಆಶಾ ಕಾರ್ಯಕರ್ತೆಯರ ಪರಿಶ್ರಮ ಮತ್ತು ಸೇವೆಯು ಶ್ಲಾಘನೀಯವಾಗಿದೆ. ಅದರಂತೆ ಜಿಲ್ಲಾಡಳಿತ ಹಾಗೂ ಕೊರೋನಾ ವಾರಿಯರ್ಸ್‌ಗಳಿಂದ ಕೊಪ್ಪಳ ಜಿಲ್ಲೆಯಲ್ಲಿ ಇಲ್ಲಿಯವರೆಗೂ ಕೋವಿಡ್–19 ಕೇಸ್‌ಗಳು ಅತ್ಯಲ್ಪವಾಗಿದ್ದು ಸಂತೋಷಕರ ಸಂಗತಿಯಾಗಿರುವುದು ಹಾಗೂ ಪ್ರಮುಖವಾಗಿ ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 1327 ಆಶಾ ಕಾರ್ಯಕರ್ತೆಯರು ಹಾಗೂ ಗೃಹ ರಕ್ಷಕ ದಳದವರು ಕೋವಿಡ್–19 ಹರಡದಂತೆ ಮತ್ತು ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ನಿಸ್ವಾರ್ಥ ಸೇವೆಯನ್ನು ಸಲ್ಲಿಸುತ್ತಿರುವರು. ಇವರೆಲ್ಲರಿಗೂ ನಮ್ಮ ಸಹಕಾರಿ ಸಂಸ್ಥೆಯಿಂದ ಆಹಾರ ದಿನಸಿ ಕಿಟ್ ಹಾಗೂ ಮಾಸ್ಕ್‌ಗಳನ್ನು ನೀಡಲಾಯಿತು. ನಮ್ಮ ಸಹಕಾರಿ ಸಂಸ್ಥಾಪಕರಾದ ಶ್ರೀ ನವೀನಕುಮಾರ ಗುಳಗಣ್ಣವರ ಇವರು ಆಹಾರ ದಿನಸಿ ಕಿಟ್ ವಿತರಿಸಿದರು ಮತ್ತು ಅಧ್ಯಕ್ಷರಾದ ಶ್ರೀ ಪ್ರವೀಣ ಗುಳಗಣ್ಣವರು ಮಾಸ್ಕ್‌ಗಳನ್ನು ವಿತರಿಸಿದರು. ಈ ಸಂದರ್ಭದಲ್ಲಿ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಶರಣಪ್ಪ ವೀರಾಪುರ, ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಕಾರವಾರ:** ಜೈ ಶ್ರೀ ಅಂಬೆ ದುರ್ಗಾಮಾತಾ ಕ್ರೆಡಿಟ್ ಸೌಹಾರ್ದ ಸಹಕಾರಿ ಅಧ್ಯಕ್ಷೆ ದೀಕ್ಷಾ ದತ್ತಾರಾಮ ಕಲ್ಗುಟಕರ್ ಅವರ ನೇತೃತ್ವದಲ್ಲಿ ದಿನಾಂಕ 22.06.2020ರಂದು 15 ಆಶಾ ಕಾರ್ಯಕರ್ತೆಯರಿಗೆ ತಲಾ 3 ಸಾವಿರ ರೂ. ನಂತೆ 45 ಸಾವಿರ ರೂ. ವಿಶೇಷ ಪ್ರೋತ್ಸಾಹ ಧನ ಮತ್ತು ಮುಖ್ಯಮಂತ್ರಿ ಪರಿಹಾರ ನಿಧಿಗೆ ರೂ. 55 ಸಾವಿರ ಹಾಗೂ ಲಾಕ್ ಡೌನ್‌ನಿಂದ ತೊಂದರೆ ಅನುಭವಿಸಿದ ಕಾರ್ಮಿಕರಿಗೆ ಸಹಕಾರಿ ವತಿಯಿಂದ ಆಹಾರ ಕಿಟ್ ವಿತರಣೆ ಮಾಡಲಾಯಿತು.

## ಸೇಫ್ ಸ್ಟಾರ್ ಸೌಹಾರ್ದದಿಂದ ಪಿಗ್ಮಿ ಸಂಗ್ರಾಹಕರು ಮತ್ತು ಆಶಾ ಕಾರ್ಯಕರ್ತೆಯರಿಗೆ ಧನ ಸಹಾಯ




**ಕಾರವಾರ:** ಸಹಕಾರಿ ಕ್ಷೇತ್ರದಲ್ಲಿ ಕಳೆದ 9 ವರ್ಷಗಳಿಂದ ನಿರಂತರ ಯಶಸ್ವಿನ ದಾಪುಗಾಲು ಹಾಕುತ್ತ ಜಿಲ್ಲೆಯ ಮಾದರಿ ಹಾಗೂ ರಾಜ್ಯಮಟ್ಟದ ಶ್ರೇಷ್ಠ ಸಹಕಾರಿ ಪ್ರಶಸ್ತಿ ಪುರಸ್ಕೃತ ಅಧ್ಯಕ್ಷರಾದ ಶ್ರೀ ಜಿ.ಜಿ. ಶಂಕರ ಅವರ ಸಾರಥ್ಯದಲ್ಲಿ ಮುನ್ನಡೆಯುತ್ತಿರುವ ಜಿಲ್ಲಾದ್ಯಂತ 11 ಶಾಖೆಗಳನ್ನು ಹೊಂದಿರುವ ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ನಿಯಮಿತ ಪ್ರಧಾನ ಕಛೇರಿ ಹೊನ್ನಾವರ ಇದು ಆರಂಭದಿಂದಲೂ ನಿರಂತರ ಒಂದಿಲ್ಲೊಂದು ಸಾಮಾಜಿಕ ಕಳಕಳಿ ಕಾರ್ಯದಲ್ಲಿ ತೊಡಗಿಸಿಕೊಂಡಿರುವದು ಕಂಡುಬಂದಿರುತ್ತದೆ.

ಇದೀಗ ಜಗತ್ತಿನಾದ್ಯಂತ ಭೀತಿ ಹುಟ್ಟಿಸಿರುವ ಕೋವಿಡ್-19 ಮಹಾಮಾರಿ ಸೋಂಕಿನಿಂದ ಭಾರತ ದೇಶವೇ ಲಾಕ್‌ಡೌನ್‌ನಿಂದಾಗಿ ಸಂದರ್ಭದಲ್ಲಿ ತಾನು ಮಾಡುವ ಸಹಾಯ ಇತರರಿಗೂ ಪ್ರೇರಣೆಯಾಗಲಿ ಇದರಿಂದ ನಮ್ಮ ರಾಜ್ಯ ಮತ್ತು ದೇಶಕ್ಕೆ ಇನ್ನೂ ಹೆಚ್ಚಿನ ರೀತಿಯ ಸಹಾಯವಾಗಲಿ ಎಂಬ ದೃಷ್ಟಿಯಿಂದ ಇತ್ತೀಚಿಗೆ ಪ್ರಧಾನ ಮಂತ್ರಿ ಪರಿಹಾರ ನಿಧಿಗೆ ರೂ. 1.50 ಲಕ್ಷ ಮತ್ತು ಮುಖ್ಯಮಂತ್ರಿ ಪರಿಹಾರ ನಿಧಿಗೆ ರೂ. 1.00 ಲಕ್ಷ ಒಟ್ಟೂ ರೂ. 2.50 ಲಕ್ಷ ನೀಡಿರುವದನ್ನು ಜಿಲ್ಲೆ ಸ್ಮರಿಸುತ್ತಿದೆ. ಸಹಕಾರಿಯು ತನ್ನ ಎಲ್ಲಾ ಹನ್ನೊಂದು ಶಾಖೆಯ 66 ಪಿಗ್ಮಿ ಸಂಗ್ರಾಹಕರು ಲಾಕಡೌನ್‌ನಿಂದಾಗಿ ಪಿಗ್ಮಿ ಸಂಗ್ರಹಣೆ ಸಾಧ್ಯವಾಗದೇ ಶೋಚನೀಯ ಪರಿಸ್ಥಿತಿಯಲ್ಲಿರುವ ಸಂದರ್ಭದಲ್ಲಿ ಅವರುಗಳಿಗೆ ಒಟ್ಟೂ ರೂ. 1.00 ಲಕ್ಷದಷ್ಟು ಧನಸಹಾಯ ಮಾಡಿ ಅವರುಗಳಿಗೆ ಪ್ರೋತ್ಸಾಹ ನೀಡುವುದರ ಮೂಲಕ ಮತ್ತೊಮ್ಮೆ ತನ್ನ ಸಾಮಾಜಿಕ ಕಳಕಳಿ ವ್ಯಕ್ತಪಡಿಸಿರುತ್ತದೆ.

ಅವೆಲ್ಲದರ ಹೊರತಾಗಿ ಸಹಕಾರಿ ಸಂಘಗಳ ಉಪನಿಬಂಧಕರ ಮನವಿ ಮೇರೆಗೆ ಕೊರೋನಾ ಮಹಾಮಾರಿ ವಿರುದ್ಧ ನಿರಂತರ ಹೋರಾಟ ನಡೆಸುತ್ತಿರುವ 10 ಆಶಾಕಾರ್ಯಕರ್ತೆಯರಿಗೆ ಆತ್ಮಸ್ಥೈರ್ಯ ತುಂಬಲು ತಲಾ ರೂ. 3,000/- ರಂತೆ ಒಟ್ಟೂ ರೂ30,000/- ಪ್ರೋತ್ಸಾಹ ಧನವನ್ನು ಅವರುಗಳಿಗೆ ವೈಯಕ್ತಿಕವಾಗಿ ಚೆಕ್ ಮೂಲಕ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಅಧ್ಯಕ್ಷ ಜಿ. ಜಿ. ಶಂಕರ, ಉಪಾಧ್ಯಕ್ಷ ವಿ.ಎಸ್. ಕಿಮಾನಿಕರ, ಆಡಳಿತ ಮಂಡಳಿ ನಿರ್ದೇಶಕರುಗಳು, ಜನರಲ್ ಮ್ಯಾನೇಜರ್ ಮಹೇಶ ಶೆಟ್ಟಿ, ಎ.ಜಿ.ಎಂ. ಎಡ್ವಿನ್ ರೆಬೆಲ್ಲೋ, ಚೀಫ್ ಮೆನೇಜರ್ ವಸಂತ ನಾಯ್ಕ, ಐಟಿ ಮೆನೇಜರ್ ವಿಘ್ನೇಶ್ವರ ಹೆಗಡೆ, ಡೆವಲಪ್‌ಮೆಂಟ್ ಆಫೀಸರ್ ಶ್ರೀಪಾದ ಭಟ್ಟ, ಶಾಖಾ ವ್ಯವಸ್ಥಾಪಕ ಕೇಶವ ತಾಂಡೇಲ, ಸಿಬ್ಬಂದಿಗಳು, ಫೀಲ್ಡ್ ಎಕ್ಸಿಕ್ಯೂಟಿವ್ಸ್ ಉಪಸ್ಥಿತರಿದ್ದರು.



**ಕೊಪ್ಪಳ:** ದಿನಾಂಕ 29-06-2020 ರಂದು ಕೊರೋನಾ ಫ್ರಂಟ್‌ಲೈನ್ ವಾರಿಯರ್ಸ್‌ಗಳಾದ ಆಶಾ ಕಾರ್ಯಕರ್ತೆಯರಿಗೆ ಜೈ ಶ್ರೀ ದೇವಿ ಸೌಹಾರ್ದ ಪತ್ತಿನ ಸಹಕಾರಿ ನಿ; ಉಳೆನೂರು, ಕೊಪ್ಪಳ ಸಹಕಾರಿಯು 6 ಆಶಾ ಕಾರ್ಯಕರ್ತೆಯರಿಗೆ ತಲಾ 3000 ಸಾವಿರ ದಂತೆ ರೂ. 18.000 ಸಾವಿರ ಪ್ರೋತ್ಸಾಹ ಧನ ವಿತರಣಾ ಮತ್ತು ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ್, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ.ಪತ್ತಾರ, ಸಹಕಾರಿ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಸವನಗೌಡ ಪೊಲೀಸ್ ಪಾಟೀಲ್, ಶಿಶಿರ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಅಶೋಕ ಪಾಟೀಲ್, ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ಪವನ ಹಾಗು ಸಹಕಾರಿಯ ಅಧ್ಯಕ್ಷರಾದ ಶ್ರೀ ಹನುಮಂತ ರಾವ ಕುಲಕರ್ಣಿ, ಉಪಾಧ್ಯಕ್ಷರಾದ ಶ್ರೀ ವಾಸುದೇವ ಹಾಗು ಸಹಕಾರಿಯ ಆಡಳಿತ ಮಂಡಳಿ, ಸದಸ್ಯರು, ಸಿಬ್ಬಂದಿ ವರ್ಗದವರು ಮತ್ತು ಆಶಾ ಕಾರ್ಯಕರ್ತೆಯರಾದ ಶ್ರೀ ಹುಲಿಗೆಮ್ಮ, ರಾಜೇಶ್ವರಿ, ಲಕ್ಷ್ಮೀ, ಕಮಲಾಕ್ಷಿ, ಶಕೀಲಾಬಾನು, ಚಾಂದ ಬೀ, ಊರಿನ ಗಣ್ಯ ಮಾನ್ಯರು ಆದ ನಾಗರಾಜ ಮಡಿವಾಳ, ಫಕೀರಪ್ಪ, ಸಿದ್ಧಪ್ಪ ಮೈಲಾಪುರ ಮುಂತಾದವರು ಹಾಗೂ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಕನಕರಾಯ ಪಾಟೀಲ್ ರವರು ಉಪಸ್ಥಿತರಿದ್ದರು.

## ಪ್ರವರ್ತಕರ ಸಭೆ

**ಮೈಸೂರು :** ಉದ್ದೇಶಿತ ಪ್ರಭು ಶ್ರೀರಾಮ ಸೌಹಾರ್ದ ಸಹಕಾರಿ ನಿ., ಇಲವಾಲ, ಮೈಸೂರು ಇದರ ಪ್ರವರ್ತಕರ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಚಂದ್ರಶೇಖರಯ್ಯ ಭಾಗವಹಿಸಿ ಸೌಹಾರ್ದ ಸಹಕಾರಿ ಕಾಯ್ದೆ ಮತ್ತು ಷೇರು ಸಂಗ್ರಹದ ಕುರಿತು ವಿವರಗಳನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಹಿರಿಯರಾದ ಶ್ರೀ ವೆಂಕಟರಾಮ್ ರವರು, ಶ್ರೀ ಜಗದೀಶ್ ಹೆಬ್ಬಾರ್ ರವರು, ತುಳು ಮಾಧ್ವ ಬ್ರಾಹ್ಮಣರ ಸೌಹಾರ್ದ ಸಹಕಾರಿ ನಿ., ಮೈಸೂರು ಇದರ ಉಪಾಧ್ಯಕ್ಷರು ಹಾಗೂ ಉಪಸ್ಥಿತರಿದ್ದರು.



**ಕಲಬುರಗಿ :** ಕಲಬುರಗಿ ನಗರದ ಎಸ್.ಎಮ್ ಪಂಡಿತ ರಂಗಮಂದಿರದಲ್ಲಿ ನಡೆದ ಸಹಕಾರ ಇಲಾಖೆ ಹಾಗೂ ಸಹಕಾರ ಸಂಘ ಹಾಗೂ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಕಲಬುರಗಿ ಜಿಲ್ಲೆಯ ಆಶಾ ಕಾರ್ಯಕರ್ತರಿಗೆ ಪ್ರೋತ್ಸಾಹ ಧನದ ಚೆಕ್ ವಿತರಣೆಯನ್ನು ಸಹಕಾರ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್ ಇವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ಸಿದ್ದಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಸಹಕಾರಿಯ ಅಧ್ಯಕ್ಷರಾದ ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಎಸ್ ಮಹಾಜನರವರು ರೂ 50,000/- ಪ್ರೋತ್ಸಾಹ ಧನವನ್ನು ಮಾನ್ಯ ಸಹಕಾರ ಸಚಿವರಾದ ಶ್ರೀ ಎಸ್.ಟಿ ಸೋಮಶೇಖರವರ ಮುಖಾಂತರ ಆಶಾ ಕಾರ್ಯಕರ್ತೆಯರಿಗೆ ಸಲ್ಲಿಸಲಾಯಿತು ಹಾಗೂ 50.000/- ಗಳನ್ನು ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಸಹಕಾರ ಇಲಾಖೆಯ ಅಧಿಕಾರಿಗಳು, ಸ್ಥಳೀಯ ಸಹಕಾರಿಗಳು ಉಪಸ್ಥಿತರಿದ್ದರು.



**ಲಿಂಗಸೂಗೂರ :** ದಿನಾಂಕ 24-06-2020 ರಂದು ಸಜ್ಜಲಶ್ರೀ ಸೌಹಾರ್ದ ಪತ್ತಿನ ಸಹಕಾರಿಯಲ್ಲಿ ಒಟ್ಟು 10 ಆಶಾ ಕಾರ್ಯಕರ್ತೆಯರಿಗೆ ಕೋವಿಡ್-19 ಪ್ರೋತ್ಸಾಹ ಧನವಾಗಿ ತಲಾ 3000 ರಂತೆ ಒಟ್ಟು 30,000 ರೂಪಾಯಿಯ ಮೊತ್ತವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಮಲ್ಲೇಶಗೌಡ ಪಾಟೀಲ್ ಮಟ್ಟೂರು ಇವರ ಅಧ್ಯಕ್ಷತೆಯಲ್ಲಿ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಸಹಕಾರಿ ಅಭಿವೃದ್ಧಿ ಅಧಿಕಾರಿ ಶೇಖ್ ಹುಸೇನ್ ಸರ್ ಹಾಗೂ ಸಹಕಾರಿಯ ನಿರ್ದೇಶಕರಾದ ಶಿವುಕುಮಾರ ಪಾಟೀಲ್ ಆದಾಪುರ, ಬಸವರಾಜ ಪಾಟೀಲ್ ಜಾವೂರ್, ರಾಮನಗೌಡ ಮೇಟಿ, ವೀರೇಶ ಪವಾರ್, ಗಂಗಣ್ಣ ಹೊಸಗೌಡರ್, ಬಸನಗೌಡ ಪಾಟೀಲ್ ಯರಡೋಣಿ ಹಾಗೂ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಸಂಜೀವಕುಮಾರ ಪಾಟೀಲ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಕೊಪ್ಪಳ :** ಶ್ರೀ ಸುವರ್ಣಗಿರಿ ಪತ್ತಿನ ಸೌಹಾರ್ದ ಸಹಕಾರಿ ನಿ; ಕನಕಗಿರಿ, ಕೊಪ್ಪಳ ಸಹಕಾರಿಯು ಕನಕಗಿರಿ ಪಟ್ಟಣದ 4 ಜನ ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನ ಹಾಗೂ ಸನ್ಮಾನವನ್ನು ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಕನಕಗಿರಿ ಶಾಸಕರಾದ ಶ್ರೀ ಬಸವರಾಜ ದಢೇಸೂಗೂರು, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ್, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ.ಬಿ.ಪತ್ತಾರ, ಕನಕಗಿರಿಯ ಮಾನ್ಯ ವೈದ್ಯಾಧಿಕಾರಿಗಳಾದ ಡಾ॥ ಪ್ರಜ್ವಲ್, ಕನಕಗಿರಿಯ ಪಟ್ಟಣ ಪಂಚಾಯಿತಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀಮತಿ ತಿರುಮಲಮ್ಮ, ಶ್ರೀ ಸುವರ್ಣಗಿರಿ ಪತ್ತಿನ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಸವರಾಜ ಗುಗ್ಗಳಶೆಟ್ಟರ್, ಮಾನ್ಯ ಉಪಾಧ್ಯಕ್ಷರಾದ ಶ್ರೀ ನಾಗಭೂಷಣ ಜಿನಾದ್ರಿ, ಆಡಳಿತ ಮಂಡಳಿಯ ನಿರ್ದೇಶಕರು, ಸದಸ್ಯರು, ಸಿಬ್ಬಂದಿವರ್ಗದವರು ಮತ್ತು ಮುಖ್ಯಕಾರ್ಯನಿರ್ವಾಹಕರಾದ ಶ್ರೀ ವೀರಭದ್ರಗೌಡ ಮಾಲಿಪಾಟೀಲ್ ರವರು ಉಪಸ್ಥಿತರಿದ್ದರು.



**ಶಿವಮೊಗ್ಗ :** ದಿನಾಂಕ 22-06-2020 ರಂದು ಜೀವನ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಶಿವಮೊಗ್ಗ ಸದರಿ ಸಹಕಾರಿಯ ವತಿಯಿಂದ ಕಛೇರಿಯಲ್ಲಿ ಕೋರಾನಾ ವೈರಸ್ ವಿರುದ್ಧ ಹೋರಾಡಿದ ಆಶಾ ಕಾರ್ಯಕರ್ತರಾದ ಶ್ರೀಮತಿ ಆಯಿಷಾ ಹಾಗೂ ಶ್ರೀಮತಿ ಪೂರ್ಣಿಮಾ ಇವರಿಗೆ ತಲಾ ರೂ. 3,000/- ದಂತೆ ಒಟ್ಟು ರೂ. 6000/- ಚೆಕ್ ನೀಡಿ ಸನ್ಮಾನ ಮಾಡಲಾಯಿತು.

ಕಾರ್ಯಕ್ರಮದ ಪ್ರಾರ್ಥನೆ ಹಾಗೂ ಸ್ವಾಗತವನ್ನು ಸಿಬ್ಬಂದಿಗಳಾದ ಕುಮಾರಿ ಚೈತನ್ಯ. ವಿ ಹಾಗೂ ಶ್ರೀಮತಿ ಸುಚಿತ್ರಾ ನೆರವೇರಿಸಿದರು. ಅಧ್ಯಕ್ಷತೆಯನ್ನು ಶ್ರೀ ಮಹಮ್ಮದ್ ಇಲಿಯಾಸ್ ನೆರವೇರಿಸಿ ಆಶಾ ಕಾರ್ಯಕರ್ತರ ಬಗ್ಗೆ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎಸ್.ಕೆ. ಗಣಪತಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಹರೀಶ್.ಕೆ. ಎಸ್, ನಿರ್ದೇಶಕರಾದ ಶ್ರೀ ರವಿಶಂಕರ ಹೆಗಡೆ, ಎ. ಫ್ರಾನ್ಸಿಸ್ ಡಿಸೋಜಾ, ನಾಗರಾಜ್ ನಾಯ್ಕ್ ಹಾಗೂ ಶ್ರೀಮತಿ ವಿಶಾಲಾಕ್ಷಿ ಉಪಸ್ಥಿತರಿದ್ದರು.



**ಕೊಪ್ಪಳ :** ದಿನಾಂಕ 27-06-2020, ಶನಿವಾರದಂದು ಕನಕಗಿರಿ ಪಟ್ಟಣದ ಸೌಹಾರ್ದ ಸಹಕಾರಿಗಳು ಮತ್ತು ಸಹಕಾರ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಕೋವಿಡ್-19 ತಡೆಗಟ್ಟಲು ಶ್ರಮಿಸುತ್ತಿರುವ ಆಶಾ ಕಾರ್ಯಕರ್ತೆರಿಗೆ ಸನ್ಮಾನ ಹಾಗೂ ಪ್ರೋತ್ಸಾಹ ಧನ ವಿತರಣಾ ಕಾರ್ಯಕ್ರಮವನ್ನು ಕಾರಟಗಿ ಪಟ್ಟಣದ ಎ.ಪಿ.ಎಮ್.ಸಿ ಆವರಣದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರು ಮತ್ತು ಶ್ರೀ ಸುವರ್ಣಗಿರಿ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಸವರಾಜ ಗುಗ್ಗಳಶೆಟ್ಟರವರು ವಹಿಸಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ಕನಕಗಿರಿ ವಿಧಾನಸಭೆ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ಬಸವರಾಜ ದಢೇಸೂಗೂರು ರವರು ವಹಿಸಿದರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ್, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ.ಪತ್ತಾರ, ಕನಕಗಿರಿಯ ವೈದ್ಯಾಧಿಕಾರಿಗಳಾದ ಶ್ರೀ ಡಾ॥ ಪ್ರಜ್ವಲ್, ಕನಕಗಿರಿಯ ಪಿ.ಎಸ್.ಐ ಶ್ರೀ ಪ್ರಶಾಂತ್,ಕನಕಗಿರಿಯ ಪಟ್ಟಣ ಪಂಚಾಯಿತಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀಮತಿ ತಿರುಮಲಮ್ಮ, ಸಹಕಾರ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಸವನಗೌಡ ಪೊಲೀಸ್ ಪಾಟೀಲ್, ಕನಕಗಿರಿ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಶರಣಪ್ಪ ಬತ್ತದ, ಅಭಿನವಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ವಾಗೇಶ ಹಿರೇಮಠ, ಕನಕ ಸಮೃದ್ಧಿ ಸೌಹಾರ್ದ ಪತ್ತಿನ ಸಹಕಾರಿಯ ಅಧ್ಯಕ್ಷರಾದ ಶ್ರೀ ಡಾ॥ ದೇವರಾಜ ಮಂಗಳೂರು, ಸರ್ವಜನ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ನಾಗಪ್ಪ ಹುಗ್ಗಿ, ಕನಕಾಚಲ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಕಳಕಪ್ಪ ಹಾಗೂ ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ಪವನ ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾರಂಭವನ್ನು ನಾಡಗೀತೆ ಹಾಗೂ ರೈತ ಗೀತೆಯೊಂದಿಗೆ ಪ್ರಾರಂಭಿಸಲಾಯಿತು

ಕಾರ್ಯಕ್ರಮದ ಉದ್ಘಾಟಕರಾದ ಕನಕಗಿರಿ ವಿಧಾನಸಭೆ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ಬಸವರಾಜ ದಢೇಸೂಗೂರುರವರು ಕೊರೋನಾ ಹಿನ್ನೆಲೆಯಲ್ಲಿ ತಮ್ಮ ಜೀವದ ಭಯ ತೊರೆದು ನಿತ್ಯ ಸೇವೆ ಮಾಡುತ್ತಿರುವ ಆಶಾ ಕಾರ್ಯಕರ್ತೆಯರ ನೌಕರಿಯನ್ನು ಖಾಯಂಗೊಳಿಸಿ ಸೂಕ್ತ ವೇತನ ನೀಡಲೂ ಮುಂದಿನ ಅಧಿವೇಶನದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿರೂರಪ್ಪರವರಿಗೆ ಮನವಿ ಮಾಡಲಾಗುವುದು ಎಂದರು.

ಅದೇ ರೀತಿಯಾಗಿ ಕಾರ್ಯಕ್ರಮದ ಮುಖ್ಯ ಅಥಿತಿಗಳಾದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ್ ರವರು ಕೋವಿಡ್-19 ಮಹಾಮಾರಿಯಿಂದಾಗಿ ಲಾಕ್‌ಡೌನ್ ಉಂಟಾದ ಸಂದರ್ಭದಲ್ಲಿ ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳು ಕೈಗೊಂಡ ಅನೇಕ ರೀತಿಯ ಸೇವಾ ಕಾರ್ಯ ಚಟುವಟಿಕೆಗಳ ಕುರಿತು ಹಾಗೂ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಂದ ಪಿ.ಎಮ್ ಕೇರ್ಸ್ ಹಾಗೂ ಮುಖ್ಯಮಂತ್ರಿಗಳ ಪರಿಹಾರ ನಿಧಿಗಳಿಗೆ 9 ಲಕ್ಷ ರೂ ಮೊತ್ತ ದೇಣಿಗೆ ಸಂಗ್ರಹವಾದ ಕುರಿತು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿರುವ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳಾದ ಒಕ್ಕೂಟದ ಮಾನ್ಯ ನಿರ್ದೇಶಕರು ಮತ್ತು ಶ್ರೀ ಸುವರ್ಣಗಿರಿ ಪತ್ತಿನ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಸವರಾಜ ಗುಗ್ಗಳಶೆಟ್ಟರರವರು ಕನಕಗಿರಿ ಪಟ್ಟಣದ ಸೌಹಾರ್ದ ಸಹಕಾರಿಗಳು ಆಶಾ ಕಾರ್ಯಕರ್ತೆಯರಿಗೆ ಸನ್ಮಾನ ಮತ್ತು ಪ್ರೋತ್ಸಾಹ ಧನದ ವಿತರಣಾ ಕಾರ್ಯಕ್ರಮದ ಕುರಿತು ಮಾತನಾಡಿದರು ಮತ್ತು ಮುಂದಿನ ದಿನಗಳಲ್ಲಿ ಇನ್ನು ಅನೇಕ ರೀತಿಯ ಸಾಮಾಜಿಕ ಕಾರ್ಯಚಟುವಟಿಕೆಗಳು ಸೌಹಾರ್ದ ಸಹಕಾರಿಗಳ ಮುಖಾಂತರ ನಡೆಸಲಾಗುವುದು ಎಂದರು. ಕಾರ್ಯಕ್ರಮದಲ್ಲಿ ಒಟ್ಟು 19 ಆಶಾಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನವನ್ನು ನೀಡಲಾಯಿತು.



**ಕೊಪ್ಪಳ :** ದಿನಾಂಕ : 28-06-2020, ರವಿವಾರದಂದು ಸಾಯಂಕಾಲ 4:00 ಗಂಟೆಗೆ ಗಂಗಾವತಿ ನಗರದ ಸಿ.ಬಿ.ಎಸ್ ಕಲ್ಯಾಣ ಮಂಟಪದಲ್ಲಿ ಗಂಗಾವತಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳು ಮತ್ತು ಸಹಕಾರಿಯ ಇಲಾಖೆ ಹಾಗೂ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ವತಿಯಿಂದ ಹಾಗೂ ಸಿ.ಬಿ.ಎಸ್ ಸೌಹಾರ್ದ ಸಹಕಾರಿ ಬ್ಯಾಂಕಿನ ಪ್ರಾಯೋಜಕತ್ವದಲ್ಲಿ ತಾಲ್ಲೂಕಿನ ಆಶಾ ಕಾರ್ಯಕರ್ತೆಯರ ಸನ್ಮಾನ ಹಾಗು ಪ್ರೋತ್ಸಾಹ ಧನ ವಿತರಣಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ರವರು ವಹಿಸಿದರು. ಕಾರ್ಯಕ್ರಮದ ಉದ್ಘಾಟಕರಾಗಿ ಗಂಗಾವತಿ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ಪರಣ್ಣ ಮುನವಳ್ಳಿರವರು ವಹಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾನ್ಯ ಮಾಜಿ ಸಂಸದರಾದ ಶ್ರೀ ಶಿವರಾಮಗೌಡ್ರು, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ.ಪತ್ತಾರ, ಸಿ.ಬಿ.ಎಸ್ ಸೌಹಾರ್ದ ಸಹಕಾರಿ ಬ್ಯಾಂಕಿನ ಮಾನ್ಯ ಅಧ್ಯಕ್ಷರಾದ ಗಿರಿಯಪ್ಪ ಹೊಸಕೇರಿ, ರಾಷ್ಟ್ರೀಯ ಪಟ್ಟಣ ಸಹಕಾರಿ ಬ್ಯಾಂಕಗಳು

ಮತ್ತು ಪತ್ತಿನ ಸಹಕಾರಿಗಳ ಮಹಾಮಂಡಳದ ಮಾನ್ಯ ನಿರ್ದೇಶಕರಾದ ಶ್ರೀ ಕೆ.ಕಾಳಪ್ಪ, ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಮಾನ್ಯ ಅಧ್ಯಕ್ಷರಾದ ಶ್ರೀ ದೊಡ್ಡಪ್ಪ ದೇಸಾಯಿ, ಮಾನ್ಯ ಸಹಕಾರ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಸವನಗೌಡ ಪೊಲೀಸ್ ಪಾಟೀಲ್, ಸಿ.ಬಿ.ಎಸ್ ಸೌಹಾರ್ದ ಸಹಕಾರಿ ಬ್ಯಾಂಕಿನ ಮಾನ್ಯ ನಿರ್ದೇಶಕರಾದ ಶ್ರೀ ಕೆ.ಚನ್ನಸಬಯ್ಯ ಸ್ವಾಮಿಗಳು ಹಾಗೂ ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ಪವನ ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾರಂಭವನ್ನು ನಾಡಗೀತೆ ಹಾಗೂ ರೈತ ಗೀತೆಯೊಂದಿಗೆ ಪ್ರಾರಂಭಿಸಲಾಯಿತು. ಕಾರ್ಯಕ್ರಮದ ಪ್ರಾರ್ಥನಾಗೀತೆಯನ್ನು ಶ್ರೀ ವೀಣಾ ಮುದಗಲ್ ರವರು ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಸಿ.ಬಿ.ಎಸ್ ಸೌಹಾರ್ದ ಸಹಕಾರಿ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಸಿ.ಜಿ.ಜವಳಿ ರವರು ನೇರವೇರಿಸಿದರು ಹಾಗೂ ವಂದನಾರ್ಪಣೆಯನ್ನು ಶ್ರೀ ಚಂದ್ರಶೇಖರ ಕಾವಲಿ ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಒಟ್ಟು 90 ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನದ ವಿತರಣೆ ಹಾಗೂ ಸನ್ಮಾನಿಸಲಾಯಿತು.

---



**ಕೊಪ್ಪಳ** : ದಿನಾಂಕ 29-06-2020, ಸೋಮವಾರದಂದು ಕಾರಟಗಿ ತಾಲ್ಲೂಕಿನ ಎಲ್.ವಿ.ಟಿ. ಕಲ್ಯಾಣ ಮಂಟಪ, ಎಲ್.ವಿ.ಟಿ ಕಾಂಪ್ಲೆಕ್ಸ್, ಆರ್.ಜಿ.ರೋಡ್, ಕಾರಟಗಿಯಲ್ಲಿ ಕಾರಟಗಿ ಪಟ್ಟಣದ ಸೌಹಾರ್ದ ಸಹಕಾರಿಗಳು ಮತ್ತು ಸಹಕಾರಿ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಆಶಾ ಕಾರ್ಯಕರ್ತೆಯರಿಗೆ ಸನ್ಮಾನ ಹಾಗು ಪ್ರೋತ್ಸಾಹ ಧನ ವಿತರಣಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರು ಮತ್ತು ಎಲ್.ವಿ.ಟಿ. ಪತ್ತಿನ ಸೌಹಾರ್ದ ಸಹಕಾರಿಯ ಮಾನ್ಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಸಣ್ಣ ಸೂಗಪ್ಪರವರು ವಹಿಸಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ಕನಕಗಿರಿ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ಬಸವರಾಜ ದಢೇಸೂಗೂರು ರವರು ವಹಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ್, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ.ಪತ್ತಾರ, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ನಿರ್ದೇಶಕರು ಮತ್ತು ಸೂರಜ್ ಪತ್ತಿನ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಎಮ್.ರಮೇಶ, ಕಾರಟಗಿ ಎ.ಪಿ.ಎಮ್.ಸಿ ಮಾನ್ಯ ಅಧ್ಯಕ್ಷರಾದ ಶ್ರೀ ಸೋಮಶೇಖರಗೌಡ, ಮಾನ್ಯ ಸಹಕಾರ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಸವನಗೌಡ ಪೊಲೀಸ್ ಪಾಟೀಲ್, ಶಿಶಿರ ಪತ್ತಿನ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಅಶೋಕ ಪಾಟೀಲ್ ಹಾಗೂ ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ಪವನ ಉಪಸ್ಥಿತರಿದ್ದರು.

ಕಾರ್ಯಕ್ರಮದ ಪ್ರಾರಂಭವನ್ನು ನಾಡಗೀತೆ ಹಾಗೂ ರೈತ ಗೀತೆಯೊಂದಿಗೆ ಪ್ರಾರಂಭಿಸಲಾಯಿತು.ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಶರಣೇಗೌಡರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಒಟ್ಟು 47 ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನ ವಿತರಣೆ ಹಾಗು ಸನ್ಮಾನಿಸಲಾಯಿತು.

---



**ಬೀದರ** : ಶ್ರೀ ರೇಣುಕ ಮಾಹೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಬೀದರ ಸಂಸ್ಥೆ ವತಿಯಿಂದ ನೌಬಾದ ಬಳ್ಳಿಯ ಪುಣ್ಯಾಶ್ರಮದಲ್ಲಿ ಜಿಲ್ಲಾಧಿಕಾರಿ 3 ವರ್ಷ ಸೇವೆ ಸಲ್ಲಿಸಿ ಬೆಂಗಳೂರ ನಗರದ ಬಿ.ಡಿ.ಎ ಪ್ರಾಧಿಕಾರಕ್ಕೆ ವರ್ಗಾವಣೆಯ ಸಮಯದಲ್ಲಿ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು ತಪೋನೆಲೆಯ ಸ್ಥಳದಲ್ಲಿ ಹೆಚ್. ಆರ್ ಮಹದೇವ್ ಧರ್ಮ ಪತ್ನಿ ಶುಭಮಂಗಳ ಭೇಟಿ ನೀಡಿದರು. "ಮಾನವ ಧರ್ಮಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕೆ ಶಾಂತಿ" ಎಂದು ಸಾರಿದ ಜಗದ್ಗುರು ರೇಣುಕಾಚಾರ್ಯರ ದರ್ಶನ ಪಡೆದು ಪೂಜ್ಯ ಸನ್ಮುಖಯ್ಯ ಸ್ವಾಮಿಗಳ್ಳ ಆಶೀರ್ವಾದ ಪಡೆದರು. ಶ್ರೀ ರೇಣುಕ ಮಾಹೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಸಂಸ್ಥೆ ವತಿಯಿಂದ "ಶ್ರೀ ಸಿದ್ಧಾಂತ ಶಿಖಾಮಣಿ ಆಡಿಯೋ ಸ್ವೀಕರಿಸಿದರು. ಡಾ. ಸಿದ್ದಾರೆಡ್ಡಿ ಫೌಂಡೇಶನ್ ಅಧ್ಯಕ್ಷರಾದ ಗುರಮ್ಮ ಸಿದ್ಧಾರೆಡ್ಡಿ ಈ ಸಂಧರ್ಭದಲ್ಲಿ ಮಾತನಾಡಿ ಡಾ ಹೆಚ್. ಆರ್ ಮಾಹಾದೇವ ಸಧಾ ಧಾರ್ಮಿಕ ಹಾಗು ಆಧ್ಯಾತ್ಮಿಕ ಮೈಗೂಡಿಸಿಕೊಂಡಿದ್ದಾರೆ ಹಾಗೂ ಇತರೆ ಹಿರಿಯ ಅಧಿಕಾರಿಗಳಿಗೆ ಮಾದರಿಯಾಗಿರುವರು. ಇವರ ಪರಿಶ್ರಮ ಕಣ್ಣಿಗೆ ಕಾಣದ್ದಿದರು ಅದು ಶಾಶ್ವತವಾಗಿ ನೆಲೆಯೂರಿರುತ್ತದೆಯೆಂದು ಬಣ್ಣಿಸಿದರು.

ಕೇಂದ್ರ ಜಾಗ್ರತ್ ಹಾಗು ಮೇಲು ಉಸ್ತುವಾರಿ ಸಮಿತಿ ಸದಸ್ಯ ಶಿವಯ್ಯ ಸ್ವಾಮಿ, ಪತ್ರಕರ್ತ ಶಿವಕುಮಾರ ಸ್ವಾಮಿ, ಸಹಕಾರಿಯ ಅಧ್ಯಕ್ಷರಾದ ಮಹೇಶ್ವರ್ ಸ್ವಾಮಿ, ಉಪಾಧ್ಯಕ್ಷರಾದ ಶ್ರೀಕಾಂತ್ ಸ್ವಾಮಿ ಸೋಲಪುರ ನಿರ್ದೇಶಕ ಡಾ ಪ್ರಭುಲಿಂಗ ಸ್ವಾಮಿ, ಪುಣ್ಯಾಶ್ರಮ ಭಕ್ತರಾದ ರಾಜಕುಮಾರ್ ಜಮಾಧರ, ಅನಿಲಕುಮಾರ ಉಪಸ್ಥಿತರಿದ್ದರು.



**ಬಳ್ಳಾರಿ :** ಕೊರೋನ ತಡೆಗೆ ತಮ್ಮ ಜೀವದ ಹಂಗು ತೊರೆದು ಹೋರಾಡುತ್ತಿರುವ ಆಶಾ ಕಾರ್ಯಕರ್ತೆರು, ವೈದರು, ಪೊಲೀಸ್ ಅಧಿಕಾರಿಗಳ ಸೇವೆ ಪ್ರಶಂಸನೀಯವಾಗಿದ್ದು ಕೊರೊನಾ ನಿಯಂತ್ರಿಸುವಲ್ಲಿ ಯುದ್ಧೋಪಾಧಿಯಲ್ಲಿ ಸೈನಿಕರಂತೆ ಆಶಾ ಕಾರ್ಯಕರ್ತರು ಕಾರ್ಯನಿರ್ವಹಿಸುತ್ತಿದ್ದಾರೆ. ಸಂಡೂರು ಹಾಗೂ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ **402 ಆಶಾ ಕಾರ್ಯಕರ್ತೆರಿಗೆ ತಲಾ 3000 ಸಾವಿರ** ಪ್ರೋತ್ಸಾಹಧನವನ್ನು ಸೌಹಾರ್ದ ಸಹಕಾರಿಗಳಿಂದ ನೀಡಲಾಗುತ್ತಿದೆ ಇದೊಂದು ಹಳಿಲು ಸೇವೆ ಎಂದು ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವಿಶ್ವನಾಥ್ ಚ. ಹಿರೇಮಠರವರು ಹೇಳಿದರು

ಹಗರಿಬೊಮ್ಮನಹಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಜ್ಯೋತಿ ಬೆಳಗಿಸಿ ನಂದಿಪುರಮಠದ ಶ್ರೀ ಮಹೇಶ್ವರ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಿದರು. ದಿವ್ಯ ಸಾನಿಧ್ಯವನ್ನು ಶ್ರೀ ಹಾಲಶಂಕರ ಸ್ವಾಮೀಜಿ ವಹಿಸಿದ್ದರು, ಕಾರ್ಯಕ್ರಮದಲ್ಲಿ ಸಹಕಾರ ಇಲಾಖೆಯ ಸಹಾಯಕ ನಿಬಂಧಕ ಶ್ರೀ ಲಿಯಾಕತ್ ಅಲಿ, ಸಮಾಜ ಸೇವಕರಾದ ಶ್ರೀಮತಿ ಗೀತಾಬಾಯಿ ಬೀಮನಾಯ್ಕ್, ತಹಶೀಲ್ದಾರ್ ಶ್ರೀ ಆಶಪ್ಪ ಪೂಜಾರ್, ಪೋಲೀಸ್ ವೃತ್ತ ನಿರೀಕ್ಷಕ ಮಲ್ಲಿಕಾರ್ಜನ, ನಂದೀಶ್ವರ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ವೆಂಕಣ್ಣ, ಮುಖ್ಯಕಾರ್ಯನಿರ್ವಹಕ ಶ್ರೀ ನಾಗಭೂಷಣ್, ಪಂಚಮಿತ್ರ ಸೌಹಾರ್ದ ಸಹಕಾರಿಯ ಅಧ್ಯಕ್ಷ ಕೆ. ಶ್ರೀನಿವಾಸ್ ಮುಖ್ಯಕಾರ್ಯನಿರ್ವಹಕ ಶ್ರೀ ಶಂಕರಪ್ಪ, ಪ್ರಣತಿ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಹಕ ಶ್ರೀ ಶ್ವೇತ ಹಾಜರಿದ್ದರು.

ಸಂಡೂರಿನ ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ದ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಡೂರು ಪಟ್ಟಣ ಬ್ಯಾಂಕಿನ ನಿರ್ದೇಶಕರಾದ ಶ್ರೀ ನಂಜುಡಪ್ಪ, ಶ್ರೀ ಮಯೂರ, ಶ್ರೀ ಈರೇಶ ಸಹಕಾರ ಇಲಾಖೆಯ ಅಭಿವೃದ್ದಿ ಅಧಿಕಾರಿ ಶ್ರೀ ಶರಣಬಸಪ್ಪ, ಮುಖ್ಯಕಾರ್ಯನಿರ್ವಹಕ ಶ್ರೀಮತಿ ರೇಣುಕ, ಕಾರ್ತೀಕೇಯ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಉಜ್ಜೀನಪ್ಪ, ಶ್ರೀ ಸಾಯಿ ಕೀರ್ತನ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಶಿವರಾಮ್ ಸೌಹಾರ್ದ ಸಹಕಾರಿಯ ಜಿಲ್ಲಾ ಸಂಯೋಜಕ ಶ್ರೀ ರವಿಕುಮಾರ ಉಪಸ್ಥಿತರಿದ್ದರು.



**ಕೊಪ್ಪಳ:** ದಿನಾಂಕ: 20-06-2020 ರಂದು, ತಾವರಗೇರಾದಲ್ಲಿ ಕೋವಿಡ್-19 ವಿರುದ್ಧ ಕಾರ್ಯನಿರ್ವಹಿಸುತ್ತಿರುವ ಫ್ರಂಟ್‌ಲೈನ್ ಕೊರೋನಾ ವಾರಿಯರ್ಸ್‌ಗಳಾದ ಆಶಾ ಕಾರ್ಯಕರ್ತೆಯಿರಿಗೆ ಚೇತನಾ ಪತ್ತಿನ ಸೌಹಾರ್ದ ಸಹಕಾರಿ ನಿ., ತಾವರಗೇರಾ, ತಾ॥ ಕುಷ್ಟಗಿ, ಕೊಪ್ಪಳ ಸಹಕಾರಿಯ ವತಿಯಿಂದ 30 ಜನ ಆಶಾ ಕಾರ್ಯಕರ್ತೆಯರಿಗೆ ರೂ. 90.000/- ಪ್ರೋತ್ಸಾಹ ಧನ ವಿತರಣಾ ಮತ್ತು ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ನಾರಾಯಣಗೌಡ ಮೇದಿಕೇರಿ ರವರು, ಮುಖ್ಯ ಅತಿಥಿಗಳಾಗಿ ಶ್ರೀ ದೊಡ್ಡಬಸನಗೌಡ ಪಾಟೀಲ್, ವೈದ್ಯಾಧಿಕಾರಿಗಳಾದ ಡಾ॥ ಕಾವೇರಿ, ಕುಷ್ಟಗಿ ಸಹಕಾರಿ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಮ-ರಿಯಪ್ಪ.ಡಿ. ಹಳ್ಳಿ, ಶ್ರೀ ಕಳಕನಗೌಡ ಪಾಟೀಲ್, ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಬಸವರಾಜ ಪಾಟೀಲ್, ಆರ್.ಡಿ.ಸಿ.ಸಿ ಬ್ಯಾಂಕಿನ ಶಾಖಾ ವ್ಯವಸ್ಥಾಪಕರಾದ ಶ್ರೀ ವಿ.ಚೆನ್ನಪ್ಪ ರವರು ಹಾಗೂ ಸಹಕಾರಿಯ ಆಡಳಿತ ಮಂಡಳಿ, ಸದಸ್ಯರು ಹಾಗು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು



**ಕೊಪ್ಪಳ:** ದಿನಾಂಕ 30-06-2020 ರಂದು ಶ್ರೀ ಕೊಪ್ಪಳ ಶಾಂತವೀರ ಪತ್ತಿನ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸಹಕಾರಿಯ ವತಿಯಿಂದ 3 ಜನ ಆಶಾ ಕಾರ್ಯಕರ್ತೆಯರಿಗೆ ರೂ. 9000/- ಪ್ರೋತ್ಸಾಹ ಧನ ವಿತರಣೆ ಮತ್ತು ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀಮತಿ ಮೀನಾಕ್ಷಿ ಸದಾಶಿವಯ್ಯ ಸಿಂಧೋಗಿ, ಮಾನ್ಯ ಉಪಾಧ್ಯಕ್ಷರಾದ ಶ್ರೀ ಈರಣ್ಣ ಮರಿಯಯ್ಯ ರ‍್ಯಾವಣಕಿ, ಆಡಳಿತ ಮಂಡಳಿಯ ನಿರ್ದೇಶಕರು, ಸದಸ್ಯರು, ಸಿಬ್ಬಂದಿ ವರ್ಗದವರು ಮತ್ತು ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಕೋಟ್ರಮ್ಮ ಎಮ್. ತಳಕಲ್ ರವರು ಉಪಸ್ಥಿತರಿದ್ದರು.

**ಕೊಪ್ಪಳ:** ಕನಕಗಿರಿ ಪಟ್ಟಣ ಸೌಹಾರ್ದ ಸಹಕಾರಿಗಳು ಹಾಗು ಸಹಕಾರಿ ಇಲಾಖೆಯ ಸಹಯೋಗದೊಂದಿಗೆ ದಿನಾಂಕ 27-06-2020 ರಂದು ಬೆಳಗ್ಗೆ 11:00 ಗಂಟೆಗೆ ಕೋವಿಡ್ ಮಹಾಮಾರಿಯ (ಕೋವಿಡ್-19) ವಿರುದ್ಧ ಕಾರ್ಯನಿರ್ವಹಿಸುತ್ತಿರುವ 3 ಆಶಾ ಕಾರ್ಯಕರ್ತೆಯರಿಗೆ 9000 ಸಾವಿರ ಪ್ರೋತ್ಸಾಹ ಧನ ವಿತರಣೆ ಮತ್ತು ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕನಕ ಸಮೃದ್ಧಿ ಸೌಹಾರ್ದ ಪತ್ತಿನ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರು, ಮಾನ್ಯ ಉಪಾಧ್ಯಕ್ಷರು, ಆಡಳಿತ ಮಂಡಳಿಯ ನಿರ್ದೇಶಕರು, ಶ್ರೀ ನಿಂಗಪ್ಪ ರವರು ಉಪಸ್ಥಿತರಿದ್ದರು.

## ವಿಶ್ವ ಪರಿಸರ ದಿನಾಚರಣೆ

**ಅಂಕೋಲಾ:** ಶ್ರೀ ವಿವೇಕ ಸೌಹಾರ್ದ ಸಹಕಾರಿ ನಿ., ಬೇಲೇಕೇರಿ ಇವರು ಪ್ರತಿವರ್ಷದಂತೆ ಈ ವರ್ಷವೂ ತಮ್ಮ ಮೃತ ಸದಸ್ಯರ ಹಾಗೂ ಖ್ಯಾತ ಸಾಹಿತಿಗಳ ಹೆಸರಿನಲ್ಲಿ ಗಿಡ ನೆಟ್ಟು ಅವುಗಳನ್ನು ಮರವಾಗಿ ಬೆಳೆಸುವ ಜವಾಬ್ದಾರಿ ಈ ಸಹಕಾರಿ ಹೊತ್ತಿದೆ. ಕಳೆದ ಹದಿನೆಂಟು ವರ್ಷಗಳ ಹಿಂದೆ ನೆಟ್ಟ ಗಿಡಗಳು ಈಗ ಮರವಾಗಿ ಹೆಮ್ಮರವಾಗಿ ಬೆಳೆದ ಬಗ್ಗೆ ಈ ಮರಗಳೇ ಸಾಕ್ಷಿಯಾಗಿವೆ.

ಪ್ರತಿ ವರ್ಷದಂತೆ ಈ ವರ್ಷವೂ ವಿಶ್ವ ಪರಿಸರ ದಿನಾಚರಣೆ ದಿನದ ಅಂಗವಾಗಿ ಡಾ॥ ಎಂ.ಎಂ ಸೈಯದ್ ಬೇಲೇಕೇರಿ, ಸಾಹಿತಿಗಳಾದ ಕಲಾ ಭಟ್ ಅಂಕೋಲಾ, ಎಂ.ಎಂ.ಎಲ್ ನಿವೃತ್ತ ಉದ್ಯೋಗಿಯಾದ ಆರ್.ವಿ ನಾಯಕ ಬೇಲೇಕೇರಿ, ಜೈರಾಮ ಕವಿ ಅಂಕೋಲಾ, ಹರೀಶ್ ಗೋವಿಂದ ನಾಯಕ ಬೇಲೇಕೇರಿ ಇವರೆಲ್ಲರ ಹೆಸರಿನಲ್ಲಿ ಗಿಡಗಳನ್ನು ನೆಟ್ಟು ಮರವಾಗಿ ಬೆಳೆಸುವ ಸಂಪೂರ್ಣ ಜವಾಬ್ದಾರಿಗಳನ್ನು ಸಹಕಾರಿ ಹೊತ್ತಿದೆ.



ವಿಶ್ವ ಪರಿಸರ ದಿನಚರಣೆಯಲ್ಲಿ ಸಹಕಾರಿಯ ಅಧ್ಯಕ್ಷ ಕೇಶವ ನಾಯಕ, ವ್ಯವಸ್ಥಾಪಕ ಅಶೋಕ ನಾಯಕ, ಗ್ರಾಮ ಪಂಚಾಯತ್ ಸದಸ್ಯರಾದ ಲಕ್ಷ್ಮಣ ನಾಯಕ, ಪ್ರಸನ್ನ ನಾಯ್ಕ, ಗ್ರಾಮ ಪಂಚಾಯತ್ ಸದಸ್ಯರಾದ ಲಕ್ಷ್ಮಣ ನಾಯಕ, ಪ್ರಸನ್ನ ನಾಯ್ಕ, ಚಂದನಾ ತಾಂಡೇಲ್ ಕೃತಿಕಾ ನಾಯ್ಕ, ಊದಿತ ತಾಂಡೇಲ್, ಅನುಷಾ ರೋಹಿದಾಸ ಪಡ್ನೇಕರ ಹಾಗೂ ಅವರ ಕುಟುಂಬದವರು ಭಾಗವಹಿಸಿದ್ದರು.

---



**ಕೊಪ್ಪಳ:** ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಗಿಣಿಗೇರಿ ದಿನಾಂಕ 05-06-2020 ರಂದು ವಿಶ್ವ ಪರಿಸರ ದಿನ ನಿಮಿತ್ಯ ಗಿಣಿಗೇರಿ ಗ್ರಾಮದಲ್ಲಿ ಸಸಿಗಳನ್ನು ನೆಡುವುದರ ಮೂಲಕ ವಿಶ್ವ ಪರಿಸರ ದಿನ ಆಚರಿಸಲಾಯಿತು. ಈ ವೇಳೆ ಪರಿಸರವನ್ನುದ್ದೇಶಿಸಿ ಮಾತನಾಡಿದ ಸಹಕಾರಿ ಅಧ್ಯಕ್ಷರಾದ ಶ್ರೀ ಶರಣಪ್ಪ ಹ್ಯಾಟಿಯವರು ಪರಿಸರವನ್ನು ನಾವು ರಕ್ಷಿಸಿದರೆ ಅದು ನಮ್ಮನ್ನ ರಕ್ಷಿಸುತ್ತದೆ ನಾವು ಪರಿಸರ ವಿರುದ್ದವಾದರೆ ಅದಕ್ಕೆ ಮುಖ ತೊರಿಸಲು ನಾಚಿಕೆ ಯಾಗುವ ಕಾಲ ಬಂದಿದೆ 2020ರ ಕೊರೊನಾದಿಂದ ಪರಿಸರ ತಾಯಿ ಕಾಪಡಲಿ ಇನ್ನು ಮುಂದೆಯಾದರು ಪರಿಸರ ಸ್ನೇಹಿಯಾಗಿ ಬಾಳೋಣವೆಂದು ಗ್ರಾಮದ ಜನತೆಯಲ್ಲಿ ಮನವಿ ಮಾಡಿ ಮಾತನಾಡಿದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಬೇಂದ್ರೆ ಪಬ್ಲಿಕ್ ಶಾಲೆಯ ಮುಖ್ಯೊಪಾದ್ಯರು ಹಾಗೂ ಸಿಬ್ಬಂದಿಯವರು ಹಾಗೂ ಸಹಕಾರಿ ನಿರ್ದೇಶಕರುಗಳಾದ ಶ್ರೀ ಯಮನೂರಪ್ಪ ಗಂಟಿ, ಶ್ರೀ ಡಾ॥ ಬಸವರಾಜ ಪಿ ಎಮ್ , ಶ್ರೀ ಕರಿಬಸವರಾಜ ಗದ್ದಿ, ಶ್ರೀ ಪುಟ್ಟಪ್ಪ ವಾರದ ಮತ್ತು ಸಹಕಾರಿ ಸಿಬ್ಬಂದಿಯವರು ಉಪಸ್ಥಿತರಿದ್ದು ಗ್ರಾಮದಲ್ಲಿ ಪರಿಸರ ಜಾಗೃತಿ ಮೂಡಿಸಿದರು.

---

## ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಪರಿಸರ ದಿನಾಚರಣೆ



**ದರ್ಬೆ:** ವನಮಹೋತ್ಸವದ ಪ್ರಯುಕ್ತ ಸಾಮಾಜಿಕ ಜಾಗೃತಿ ಯೋಜನೆಯಡಿಯಲ್ಲಿ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಸಹಸಂಸ್ಥೆ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಸಹಕಾರಿಯ ಸುಳ್ಯ, ಬೆಳ್ಳಾರೆ, ದರ್ಬೆ, ಎಂ ಎಸ್ ರಸ್ತೆ, ವಿಟ್ಲ ಶಾಖೆಗಳಲ್ಲಿ ಹಲವು ಬಗೆಯ ಸುಮಾರು 300 ಗಿಡಗಳನ್ನು ಸಹಕಾರಿಯ ಸದಸ್ಯರಿಗೆ ವಿತರಿಸಿ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.

ಸಹಕಾರಿಯ ಬೆಳ್ಳಾರೆ ಶಾಖೆಯ ವ್ಯವಸ್ಥಾಪಕರಾದ ಶ್ರೀ ಶಿವಪ್ರಸಾದ್ ಪೆರುವಾಜೆ ಸಸಿಗಳನ್ನು ವಿತರಿಸಿ ನಾವು ಸಸಿಗಳನ್ನು ನೆಟ್ಟು ಬೆಳೆಸಿ ಸ್ವಚ್ಛ ಮತ್ತು ಸುಂದರ ಪರಿಸರವನ್ನು ನಿರ್ಮಾಣ ಮಾಡುವುದರೊಂದಿಗೆ ಭೂತಾಯಿಗೆ ಕೃತಜ್ಞತೆಯನ್ನು ಸಲ್ಲಿಸಬೇಕು ಎಂದು ಹೇಳಿದರು. ಟ್ರಸ್ಟ್ ನ ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀ ಬಿಪಿನ್ ಚಂದ್ರ ಕಾರ್ಯಕ್ರಮವನ್ನು ನಿರ್ವಹಿಸಿದರು.

## ಭೇಟಿ



**ಬೆಂಗಳೂರು** : 2015ನೇ ಸಾಲಿನಲ್ಲಿ ಕರ್ನಾಟಕ ಲೋಕಸೇವಾ ಆಯೋಗದಿಂದ ನೇಮಕವಾದ ಸಹಾಯಕ ನಿಬಂಧಕರುಗಳು ದಿನಾಂಕ 24.06.2020 ರಂದು ಶ್ರೀ ಮಾಹಾಯೋಗಿ ವೇಮನ ಸೌಹಾರ್ದ ಸಹಕಾರಿಗೆ ಭೇಟಿ ನೀಡಿ ಸಹಕಾರಿಯ ಬಗ್ಗೆ ಅಗತ್ಯ ಮಾಹಿತಿ ಪಡೆದರು. ಸದರಿ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ರವರು ಉಪಸ್ಥಿತರಿದ್ದರು. ಜಿಲ್ಲಾ ಸಂಯೋಜಕರಾದ ಶ್ರೀ ಅನಿಲ್ ಕುಮಾರ್ ಎಂ. ರವರು ಉಪಸ್ಥಿತರಿದ್ದರು.



**ತಿಪಟೂರು:** ತಿಪಟೂರು ನಗರದ ಕೆ.ಆರ್. ಬಡಾವಣೆಯಲ್ಲಿರುವ ಉದಯರವಿ ಸೌಹಾರ್ದ ಪತ್ತಿನ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಸೋಮಣ್ಣ, ಅಧ್ಯಕ್ಷರ ಕೆ.ಎಂ ರಾಜಣ್ಣ, ಕಾರ್ಯದರ್ಶಿ ರವಿ, ನಗರಸಭೆ ಸದಸ್ಯ ಯೋಗಿಶ್ ಇವರು ಸಸಿ ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆ ಆಚರಿಸಿದರು.



**ಬೆಳಗಾವಿ :** ಶ್ರೀ ಸಾಯಿ ಸೌಹಾರ್ದ ಸಹಕಾರಿ ನಿ., ಮೂಡಲಗಿ ಸಹಕಾರಿ ವತಿಯಿಂದ 3 ಜನ ಆಶಾ ಕಾರ್ಯಕರ್ತೆಯರಿಗೆ ತಲಾ 3000/– ರೂ ಚೆಕ್ ನೀಡಿ ಗೌರವಿಸಲಾಯಿತು.



**ಬೆಂಗಳೂರು** : 2015ನೇ ಸಾಲಿನಲ್ಲಿ ಕರ್ನಾಟಕ ಲೋಕಸೇವಾ ಆಯೋಗದಿಂದ ನೇಮಕವಾದ ಸಹಾಯಕ ನಿಬಂಧಕರುಗಳು ದಿನಾಂಕ 23.06.2020 ರಂದು ಉದಯ ಸೌಹಾರ್ದ ಸಹಕಾರಿಗೆ ಭೇಟಿ ನೀಡಿ ಸಹಕಾರಿಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಎಸ್.ಗುಂಡೂರಾವ್ ರವರೊಂದಿಗೆ ಚರ್ಚೆ ನಡೆಸಿ ಸಹಕಾರಿಯ ಅಗತ್ಯ ಮಾಹಿತಿ ಪಡೆದರು. ಸದರಿ ಸಂದರ್ಭದಲ್ಲಿ ಉದಯ ಸೌಹಾರ್ದ ಸಹಕಾರಿಯ ವತಿಯಿಂದ ಅವರನ್ನು ಸನ್ಮಾನಿಸಲಾಯಿತು. ಜಿಲ್ಲಾ ಸಂಯೋಜಕರಾದ ಶ್ರೀ ಎಂ. ಅನಿಲ್ ಕುಮಾರ್ ರವರು ಉಪಸ್ಥಿತರಿದ್ದರು.



**ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗದಿಂದ 2015ನೇ ಸಾಲಿನಲ್ಲಿ ಆಯ್ಕೆಯಾಗಿರುವ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ (ಪರೀಕ್ಷಾರ್ಥ ಸೇವೆಯಲ್ಲಿರುವ) ಸಿಬ್ಬಂದಿಗಳು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರೊಂದಿಗೆ ದಿನಾಂಕ 22.06.2020 ರಂದು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯಕ್ಕೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಉಪಸ್ಥಿತರಿದ್ದರು.



**ಮಂಗಳೂರು :** ಮಂಗಳೂರು ಸೌಹಾರ್ದ ಸಹಕಾರಿಯ ದಶಮಾನೋತ್ಸವ ಕಾರ್ಯಕ್ರಮವು ಆಡಳಿತ ಮಂಡಳಿ ಸದಸ್ಯರು ಉಪಸ್ಥಿತಿಯಲ್ಲಿ ನಡೆಯಿತು.

# ಸೌಹಾರ್ದ ಸಹಕಾರಿಗಳು ಕೋವಿಡ್-19 ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ, ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ಹಾಗೂ ಆಶಾ ಕಾರ್ಯಕರ್ತೆರಿಗೆ ನೇರವಾಗಿ ಸಲ್ಲಿಸಿರುವ ಹಾಗೂ ಸಂಯುಕ್ತ ಸಹಕಾರಿ ಮೂಲಕ ಸಲ್ಲಿಸಿರುವ ವಿವರಗಳು.

- ರಾಜ್ಯದ ಸೌಹಾರ್ದ ಸಹಕಾರಿಗಳು ತಾವು ಕೋವಿಡ-19 ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ, ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ಹಾಗೂ ಆಶಾ ಕಾರ್ಯಕರ್ತೆರಿಗೆ ನೇರವಾಗಿ ಅಥವಾ ಸಂಯುಕ್ತ ಸಹಕಾರಿಗೆ ತಾವು ಕಳುಹಿಸಿದ ಸೌಹಾರ್ದ ಸಹಕಾರಿಗಳ ವಿವರಗಳನ್ನು ಇಲ್ಲಿ ಪ್ರಕಟಿಸಲಾಗಿದೆ. ಈ ನಿಧಿಗೆ ತಾವು ಸಲ್ಲಿಸಿದ ವಿವರಗಳನ್ನು ಕಳುಹಿಸದಿರುವ ಸೌಹಾರ್ದ ಸಹಕಾರಿಗಳು ತಮ್ಮ ವಿವರಗಳನ್ನು ಸಂಯುಕ್ತ ಸಹಕಾರಿಗೆ ಕಳುಹಿಸಿದಲ್ಲಿ ಮುಂದಿನ ಸ್ವಾಭಿಮಾನಿ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.
- ಇನ್ನೂ ತಮ್ಮ ವಂತಿಗೆಯನ್ನು ಕಳುಹಿಸದಿರುವ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಗೆ ತಮ್ಮ ವಂತಿಗೆಯನ್ನು ಕಳುಹಿಸಿದಲ್ಲಿ ಎಲ್ಲ ಮೊತ್ತವನ್ನು ಕ್ರೋಢಿಕರಿಸಿ ಮಾನ್ಯ ಸಹಕಾರ ಮಂತ್ರಿಗಳ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಿಗೆ ಸಲ್ಲಿಸಲಾಗುವುದು.

| ಕ್ರ. ಸಂ | ಸದಸ್ಯತ್ವ ಸಂಖ್ಯೆ | ಸಹಕಾರಿಯ ಹೆಸರು | ಜಿಲ್ಲೆ | ಮೊತ್ತ | ಪರಿಹಾರ ನಿಧಿ |
|---|---|---|---|---|---|
| 1 | UDP-0033 | ನಿರ್ಮಾಣ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., | ಉಡುಪಿ | 50000 | ಸಂಯುಕ್ತ ಸಹಕಾರಿ |
| 2 | RCR-0070 | ಅಕ್ಷಯ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ. | ರಾಯಚೂರು | 20000 | ಸಂಯುಕ್ತ ಸಹಕಾರಿ |
| 3 | GLB-0164 | ಶ್ರೀ ಧನಲಕ್ಷ್ಮೀ ಸೌಹಾರ್ದ ಪತ್ತಿನ ಸಹಕಾರಿ ನಿ., | ಕಲಬುರಗಿ | 11000 | ಸಂಯುಕ್ತ ಸಹಕಾರಿ |
| 4 | UDP-0016 | ಜನಹಿತ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., | ಉಡುಪಿ | 10000 | ಸಂಯುಕ್ತ ಸಹಕಾರಿ |
| 5 | KWR-0122 | ಮಲೆನಾಡು ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., | ಉತ್ತರ ಕನ್ನಡ | 10000 | ಸಂಯುಕ್ತ ಸಹಕಾರಿ |
| 6 | RCR-0205 | ಸ್ನೇಹನಿಧಿ ಪತ್ತಿನ ಸೌಹಾರ್ದ ಸಹಕಾರಿ ನಿ., | ರಾಯಚೂರು | 5001 | ಸಂಯುಕ್ತ ಸಹಕಾರಿ |
| 7 | UDP-0005 | ಗಂಗೊಳ್ಳಿ ಟೌನ್ ಸೌಹಾರ್ದ ಸಹಕಾರಿ ನಿ., | ಉಡುಪಿ | 5000 | ಸಂಯುಕ್ತ ಸಹಕಾರಿ |
| 8 | UDP-0082 | ಪಂದುಬೆಟ್ಟು ಸೌಹಾರ್ದ ಸಹಕಾರಿ ನಿ., | ಉಡುಪಿ | 5000 | ಸಂಯುಕ್ತ ಸಹಕಾರಿ |
| 9 | GLB-0031 | ಅಣ್ಣ ಬಸವಣ್ಣ ಸೌಹಾರ್ದ ಪತ್ತಿನ ಸಹಕಾರಿ ನಿ. | ಕಲಬುರಗಿ | 5000 | ಸಂಯುಕ್ತ ಸಹಕಾರಿ |
| 10 | GLB-0076 | ಜೇವರ್ಗಿ ಸೌಹಾರ್ದ ಪತ್ತಿನ ಸಹಕಾರಿ ನಿ., | ಕಲಬುರಗಿ | 5000 | ಸಂಯುಕ್ತ ಸಹಕಾರಿ |
| 11 | RCR-0061 | ತುಂಗಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ. | ರಾಯಚೂರು | 5000 | ಸಂಯುಕ್ತ ಸಹಕಾರಿ |
| 12 | RCR-0113 | ಶ್ರೀ ಜಗದ್ಗುರು ರೇಣುಕಾಚಾರ್ಯ ಪತ್ತಿನ ಸೌಹಾರ್ದ ಸಹಕಾರಿ ನಿ., | ರಾಯಚೂರು | 5000 | ಸಂಯುಕ್ತ ಸಹಕಾರಿ |
| 13 | RCR-0115 | ಯುವ ಶಕ್ತಿ ಸೌಹಾರ್ದ ಪತ್ತಿನ ಸಹಕಾರಿ ನಿ., | ರಾಯಚೂರು | 5000 | ಸಂಯುಕ್ತ ಸಹಕಾರಿ |
| 14 | RCR-0116 | ಶ್ರೀ ಬಸವಲಿಂಗ ಪತ್ತಿನ ಸೌಹಾರ್ದ ಸಹಕಾರಿ ನಿ., | ರಾಯಚೂರು | 5000 | ಸಂಯುಕ್ತ ಸಹಕಾರಿ |
| 15 | RCR-0123 | ಪಂಚಮುಖಿ ಸೌಹಾರ್ದ ಪತ್ತಿನ ಸಹಕಾರಿ ನಿ., | ರಾಯಚೂರು | 5000 | ಸಂಯುಕ್ತ ಸಹಕಾರಿ |
| 16 | RCR-0125 | ಶ್ರೀ ಕನಕಲಕ್ಷ್ಮೀ ಪತ್ತಿನ ಸೌಹಾರ್ದ ಸಹಕಾರಿ ನಿ., | ರಾಯಚೂರು | 5000 | ಸಂಯುಕ್ತ ಸಹಕಾರಿ |
| 17 | RCR-0140 | ಶ್ರೀ ಸಮೀರ ಸನ್ಮಿತ್ರ ಪತ್ತಿನ ಸೌಹಾರ್ದ ಸಹಕಾರಿ ನಿ., | ರಾಯಚೂರು | 5000 | ಸಂಯುಕ್ತ ಸಹಕಾರಿ |
| 18 | RCR-0157 | ಪ್ರಕೃತಿ ಪತ್ತಿನ ಸೌಹಾರ್ದ ಸಹಕಾರಿ ನಿ., | ರಾಯಚೂರು | 5000 | ಸಂಯುಕ್ತ ಸಹಕಾರಿ |
| 19 | RCR-0174 | ನಿಕೋ ನಿಜಲಿಂಗಪ್ಪ ಕಾಲೋನಿ ಪತ್ತಿನ ಸೌಹಾರ್ದ ಸಹಕಾರಿ ನಿ., | ರಾಯಚೂರು | 5000 | ಸಂಯುಕ್ತ ಸಹಕಾರಿ |
| 20 | RCR-0191 | ಶಿವ ಪಾರ್ವತಿ ಗಣೇಶ ಪತ್ತಿನ ಸೌಹಾರ್ದ ಸಹಕಾರಿ ನಿ., | ರಾಯಚೂರು | 5000 | ಸಂಯುಕ್ತ ಸಹಕಾರಿ |
| 21 | RCR-0193 | ಪ್ರಗತಿ ಪರಿವಾರ ಪತ್ತಿನ ಸೌಹಾರ್ದ ಸಹಕಾರಿ ನಿ., | ರಾಯಚೂರು | 5000 | ಸಂಯುಕ್ತ ಸಹಕಾರಿ |

| | | | | | |
|---|---|---|---|---|---|
| 22 | RCR-0228 | ಭೂಮಿನ್ ಪತ್ತಿನ ಸೌಹಾರ್ದ ಸಹಕಾರಿ ನಿ., | ರಾಯಚೂರು | 5000 | ಸಂಯುಕ್ತ ಸಹಕಾರಿ |
| 23 | GLB-0018 | ಶ್ರೀ ಮಹಾದೇವ ಸೌಹಾರ್ದ ಪತ್ತಿನ ಸಹಕಾರಿ ನಿ., | ಕಲಬುರಗಿ | 2000 | ಸಂಯುಕ್ತ ಸಹಕಾರಿ |
| 24 | GLB-0049 | ಬೀದಿ ವ್ಯಾಪಾರಿಗಳ ಸೌಹಾರ್ದ ಪತ್ತಿನ ಸಹಕಾರಿ ನಿ., | ಕಲಬುರಗಿ | 1100 | ಸಂಯುಕ್ತ ಸಹಕಾರಿ |
| 25 | GLB-0022 | ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿ ನಿ. | ಕಲಬುರಗಿ | 1000 | ಸಂಯುಕ್ತ ಸಹಕಾರಿ |
| 26 | GLB-0046 | ಮಹಿಳಾ ಸೌಹಾರ್ದ ಸಹಕಾರಿ ನಿ. | ಕಲಬುರಗಿ | 1000 | ಸಂಯುಕ್ತ ಸಹಕಾರಿ |
| 27 | GLB-0059 | ಮುಣ್ಣೂರು ಸಮಾಜ ಸೌಹಾರ್ದ ಪತ್ತಿನ ಸಹಕಾರಿ ನಿ., | ಕಲಬುರಗಿ | 1000 | ಸಂಯುಕ್ತ ಸಹಕಾರಿ |
| 28 | GLB-0104 | ವಿದ್ಯಾವತಿ ಮಹಿಳಾ ಸೌಹಾರ್ದ ಪತ್ತಿನ ಸಹಕಾರಿ ನಿ., | ಕಲಬುರಗಿ | 1000 | ಸಂಯುಕ್ತ ಸಹಕಾರಿ |
| 29 | GLB-0163 | ಸಾಧನೆ ಸೌಹಾರ್ದ ಪತ್ತಿನ ಸಹಕಾರಿ ನಿ., | ಕಲಬುರಗಿ | 1000 | ಸಂಯುಕ್ತ ಸಹಕಾರಿ |
| 30 | CMN-0001 | ಶ್ರೀ ವಾಸವಿ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., | ಚಾಮರಾಜನಗರ | 1000 | ಸಂಯುಕ್ತ ಸಹಕಾರಿ |
| 31 | KWR-0091 | ಜೈ ಶ್ರೀ ಅಂಬೆ ದುರ್ಗಾಮಾತಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., | ಉತ್ತರ ಕನ್ನಡ | 50500 | ಮುಖ್ಯಮಂತ್ರಿ ಪರಿಹಾರ ನಿಧಿ |
| 32 | GLB-0084 | ಆಸ್ಥಾ ಮಹಿಳಾ ಸೌಹಾರ್ದ ಪತ್ತಿನ ಸಹಕಾರಿ ನಿ., | ಕಲಬುರಗಿ | 1000 | ಮುಖ್ಯಮಂತ್ರಿ ಪರಿಹಾರ ನಿಧಿ |
| 33 | KWR-0053 | ಶ್ರೀರಾಮ ಪರಿಸರ ಕ್ರಡಿಟ್ ಸೌಹಾರ್ದ ಸಹಕಾರಿ ನಿ., ಅಂಕೋಲಾ | ಉತ್ತರ ಕನ್ನಡ | 114000 | ಆಶಾ ಕಾರ್ಯಕರ್ತೆಯರಿಗೆ |
| 34 | RCR-0002 | ಜನತಾ ಪತ್ತಿನ ಸೌಹಾರ್ದ ಸಹಕಾರಿ ನಿ., | ರಾಯಚೂರು | 33000 | ಆಶಾ ಕಾರ್ಯಕರ್ತೆಯರಿಗೆ |
| 35 | BGM-0501 | ಶ್ರೀ ಮಹಿಳಾ ಕ್ರಡಿಟ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 30000 | ಆಶಾ ಕಾರ್ಯಕರ್ತೆಯರಿಗೆ |
| 36 | BGM-0437 | ಶ್ರೀ ಮಲ್ಲಿಕಾರ್ಜುನ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಅಥಣಿ | ಬೆಳಗಾವಿ | 30000 | ಆಶಾ ಕಾರ್ಯಕರ್ತೆಯರಿಗೆ |
| 37 | BGM-0246 | ಶ್ರೀ ಮಹಾಲಿಂಗೇಶ್ವರ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ದಿಗ್ಗೆವಾಡಿ | ಬೆಳಗಾವಿ | 18000 | ಆಶಾ ಕಾರ್ಯಕರ್ತೆಯರಿಗೆ |
| 38 | CKM-0005 | ಶ್ರೀ ವಾಸವಿ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., | ಚಿಕ್ಕಮಗಳೂರು | 15000 | ಆಶಾ ಕಾರ್ಯಕರ್ತೆಯರಿಗೆ |
| 39 | BGM-0073 | ಸುಣಧೋಳಿ ಮಹಿಳಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸುಣಧೋಳಿ | ಬೆಳಗಾವಿ | 15000 | ಆಶಾ ಕಾರ್ಯಕರ್ತೆಯರಿಗೆ |
| 40 | HSN-0003 | ಸಹನಾ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., | ಹಾಸನ | 12000 | ಆಶಾ ಕಾರ್ಯಕರ್ತೆಯರಿಗೆ |
| 41 | CKM-0019 | ದಿವಿಜ ಪತ್ತಿನ ಸೌಹಾರ್ದ ಸಹಕಾರಿ ನಿ., | ಚಿಕ್ಕಮಗಳೂರು | 10000 | ಆಶಾ ಕಾರ್ಯಕರ್ತೆಯರಿಗೆ |
| 42 | CKM-0030 | ಸಮಾನ ಪತ್ತಿನ ಸೌಹಾರ್ದ ಸಹಕಾರಿ ನಿ., | ಚಿಕ್ಕಮಗಳೂರು | 9000 | ಆಶಾ ಕಾರ್ಯಕರ್ತೆಯರಿಗೆ |
| 43 | BGM-0182 | ಶ್ರೀ ಶ್ರಿಧರಸ್ವಾಮಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 9000 | ಆಶಾ ಕಾರ್ಯಕರ್ತೆಯರಿಗೆ |
| 44 | BGM-0193 | ಆಶಿರ್ವಾದ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 9000 | ಆಶಾ ಕಾರ್ಯಕರ್ತೆಯರಿಗೆ |
| 45 | BGM-0739 | ಪರಿವರ್ತನ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 9000 | ಆಶಾ ಕಾರ್ಯಕರ್ತೆಯರಿಗೆ |
| 46 | BGM-0035 | ಆದಿನಾಥ ಅಲ್ಪಸಂಖ್ಯಾತರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 9000 | ಆಶಾ ಕಾರ್ಯಕರ್ತೆಯರಿಗೆ |
| 47 | BGM-0965 | ಸ್ವಾಮಿ ವಿವೇಕಾನಂದ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., | ಬೆಳಗಾವಿ | 9000 | ಆಶಾ ಕಾರ್ಯಕರ್ತೆಯರಿಗೆ |
| 48 | BGM-0213 | ಶ್ರೀ ಹನುಮಾನ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ.,ಚಿಕ್ಕೋಡಿ | ಬೆಳಗಾವಿ | 9000 | ಆಶಾ ಕಾರ್ಯಕರ್ತೆಯರಿಗೆ |
| 49 | BGM-0379 | ಬ್ರಹ್ಮದೇವ ಅರ್ಬನ್ ಕ್ರಡಿಟ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 9000 | ಆಶಾ ಕಾರ್ಯಕರ್ತೆಯರಿಗೆ |
| 50 | HSN-0002 | ಶ್ರೀ ಪುಷ್ಪಗಿರಿ ಸೌಹಾರ್ದ ಸಹಕಾರಿ ನಿ., | ಹಾಸನ | 6000. | ಆಶಾ ಕಾರ್ಯಕರ್ತೆಯರಿಗೆ |
| 51 | CKM-0009 | ದೈವಜ್ಞ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., | ಚಿಕ್ಕಮಗಳೂರು | 6000 | ಆಶಾ ಕಾರ್ಯಕರ್ತೆಯರಿಗೆ |
| 52 | BGM-0407 | ಜಯಶಂಕರ ಕಳಕುಂದ್ರಿಕರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |

| | | | | | |
|---|---|---|---|---|---|
| 53 | BGM-0125 | ದಿ ನ್ಯಾಷನಲ್ ಕ್ರೆಡಿಟ್ ಸೌಹಾರ್ದ ಕೋ–ಆಪರೆಟಿವ್ ಲಿ., | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 54 | BGM-0160 | ಶ್ರೀ ಗಜಾನನ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 55 | BGM-0821 | ಸಾಯಿ ಸಂಕಲ್ಪ ವಿವಿಧ ಉದ್ಧೇಶಗಳ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 56 | BGM-0551 | ಶ್ರೀ ಜೋಡ ಬಸವೇಶ್ವರ ಸೌಹಾರ್ದ ಸಹಕಾರಿ ನಿ., ಸುತಗಟ್ಟಿ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 57 | BGM-1020 | ಭಾರತ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಯರಗಟ್ಟಿ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 58 | BGM-0878 | ರಾಜಲಕ್ಷ್ಮೀ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ದೇವಲತ್ತಿ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 59 | BGM-0931 | ಸಿದ್ದೀವಿನಾಯಕ ಸೌಹಾರ್ದ ಸಹಕಾರಿ ನಿ., ಇಟಗಿ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 60 | BGM-0729 | ಬಸವ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ, | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 61 | BGM-0368 | ಅರಿಹಂತ ಅಲ್ಪಸಂಖ್ಯಾತರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 62 | BGM-0654 | ಜೈ ಜವಾನ ಜೈ ಕಿಸಾನ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 63 | BGM-0473 | ಬಸವೇಶ್ವರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 64 | BGM-0926 | ಶ್ರೀ ವೀರಭದ್ರೇಶ್ವರ ಸೌಹಾರ್ದ ಸಹಕಾರಿ ನಿ.,ನಂದಗಾಂವ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 65 | BGM-0658 | ವಿಶ್ವಕರ್ಮ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಖಾನಾಪೂರ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 66 | BGM-0836 | ಶ್ರೀ ಶ್ರೀ ಸ್ವಾಮಿ ವಿವೇಕಾನಂದ ಪತ್ತಿನ ಸೌಹಾರ್ದ ಸಹಕಾರಿ ನಿ., ಖನಗಾಂವ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 67 | BGM-0316 | ವಿಶ್ವಾಸ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.,ಗೋಕಾಕ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 68 | BGM-0392 | ಮಹಾಲಕ್ಷ್ಮೀ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಕುಂದರಗಿ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 69 | BGM-0789 | ಲಂಭೋಧರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಗೋಕಾಕ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 70 | BGM-1010 | ಬಸವೇಶ್ವರ ಸೌಹಾರ್ದ ಸಹಕಾರಿ ನಿ.,ಬೆಟಗೇರಿ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 71 | BGM-0674 | ದಾನೇಶ್ವರಿ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ.,ಘಟಪ್ರಭಾ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 72 | BGM-1027 | ಮಹಾಲಕ್ಷ್ಮೀ ಗ್ರಾಮೀಣ ಅಭಿವೃದ್ದಿ ಸೌಹಾರ್ದ ಸಹಕಾರಿ ನಿ., ಬೆಟಗೇರಿ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 73 | BGM-0866 | ಜಗಜ್ಯೋತಿ ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ನಿ.,ಗೋಕಾಕ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 74 | BGM-0602 | ಆಧಿನಾಥ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಜುಗೂಳ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 75 | BGM-0094 | ಸಿದ್ದಿವಿನಾಯಕ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಚಿಕ್ಕೋಡಿ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 76 | BGM-0775 | ಶ್ರೀ ಕುಮಾರಸ್ವಾಮಿ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 77 | BGM-0169 | ಶ್ರೀ ಭಾಗ್ಯಲಕ್ಷ್ಮಿಸೌಹಾರ್ದ ಕ್ರೆಡಿಟ್ ಸಹಕಾರಿ ನಿ., | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 78 | BGM-0262 | ಶ್ರೀ ನವಭಾರತ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 79 | BGM-0395 | ಶ್ರೀ ಸಿದ್ದಲಿಂಗ ಸ್ವಾಮಿಜೀ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಅಥಣಿ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 80 | BGM-0013 | ಶ್ರೀ ಮಹಾಲಕ್ಷ್ಮೀ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಚಿಕ್ಕೋಡಿ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 81 | BGM-0503 | ಶ್ರೀ ಆಧಾರ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ.,ಚಿಂಚಲಿ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 82 | BGM-0660 | ಶ್ರೀ ಎಂಜೇಲ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಅಥಣಿ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 83 | BGM-0234 | ಶ್ರೀ ಶಿವ ಶಕ್ತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |

| | | | | | |
|---|---|---|---|---|---|
| 84 | BGM-0066 | ಶ್ರೀ ದುರುದುಂಡೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 85 | BGM-0574 | ಜಿಂಡ್ರಾಶ ಅರ್ಬನ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 86 | BGM-0226 | ಯಮಕನಮರಡಿ ಲಕ್ಷ್ಮೀ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 87 | BGM-0303 | ವೀರಭದ್ರೇಶ್ವರ ಕ್ರಡಿಟ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 88 | BGM-0121 | ಶ್ರೀ ರೇಣುಕಾದೇವಿ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 89 | BGM-0558 | ಶ್ರೀ ಸಾಯಿ ವಿವಿದೋದ್ದೇಶಗಳ ಸ್ವಹಾರ್ದ ಸಹಕಾರಿ ನಿ., | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 90 | BGM-0117 | ಕುಂಬಾರರ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 91 | BGM-0149 | ಶ್ರೀ ಮಲ್ಲಿಕಾರ್ಜುನ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 92 | BJP-0142 | ಜುಮನಾಳ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., | ವಿಜಯಪುರ | 6000 | ಆಶಾ ಕಾರ್ಯಕರ್ತೆಯರಿಗೆ |
| 93 | BGM-0108 | ಶ್ರೀ ಲೋಕಕಲ್ಯಾಣ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ.,ಜತ್ರಾಟ | ಬೆಳಗಾವಿ | 4000 | ಆಶಾ ಕಾರ್ಯಕರ್ತೆಯರಿಗೆ |
| 94 | HSN-0001 | ಶ್ರೀ ವಿಘ್ನೇಶ್ವರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., | ಹಾಸನ | 3,000 | ಆಶಾ ಕಾರ್ಯಕರ್ತೆಯರಿಗೆ |
| 95 | HSN-0010 | ಸಾಯಿ ಸಿರಿ ಸೌಹಾರ್ದ ಪತ್ತಿನ ಸಹಕಾರಿ ನಿ., | ಹಾಸನ | 3000 | ಆಶಾ ಕಾರ್ಯಕರ್ತೆಯರಿಗೆ |
| 96 | HSN-0014 | ಸಂಜೀವಿನಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., | ಹಾಸನ | 3000 | ಆಶಾ ಕಾರ್ಯಕರ್ತೆಯರಿಗೆ |
| 97 | BGM-0893 | ಶ್ರೀ ಗ್ರಾಮದೇವತಾ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 98 | BGM-0425 | ಶ್ರೀ ಸಾಯಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 99 | BGM-0307 | ಶ್ರೀ ಅಹಿಂಸಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 100 | BGM-0736 | ವಿಜನ್ ವಿವಿಧ ಉದ್ಧೇಶಗಳ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 101 | BGM-0202 | ಶಿವಲಿಂಗ ಕ್ರಡಿಟ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 102 | BGM-0470 | ಆಧಾರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 103 | BGM-0070 | ಶಿವ ಕ್ರಡಿಟ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 104 | BGM-0028 | ಶ್ರೀ ಉಮಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 105 | BGM-1076 | ದೇಶನೂರ ಸೌಹಾರ್ದ ಸಹಕಾರಿ ನಿ., ದೇಶನೂರ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 106 | BGM-0061 | ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ನಿ., ಬೈಲಹೊಂಗಲ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 107 | BGM-0778 | ಶ್ರೀ ಕಾಮಧೇನು ಮಹಿಳಾ ಸೌಹಾರ್ದ ಸಹಕಾರಿ ನಿ., ಮುನವಳ್ಳಿ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 108 | BGM-0669 | ಶ್ರೀ ಚನ್ನವಿರೇಶ್ವರ ಸೌಹಾರ್ದ ಸಹಕಾರಿ ನಿ., ಇನಾಮಹೊಂಗಲ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 109 | BGM-0879 | ಕಟಕೋಳ ಸಿದ್ರಾಯಜ್ಜಾ ಸೌಹಾರ್ದ ಸಹಕಾರಿ ನಿ., ಯರಗಟ್ಟಿ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 110 | BGM-1045 | ಶ್ರೀ ಭುವನೇಶ್ವರಿ ಸೌಹಾರ್ದ ಸಹಕಾರಿ ನಿ., ರಾಮದುರ್ಗ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 111 | BGM-0806 | ರಾಮದುರ್ಗ ಸೌಹಾರ್ದ ಸಹಕಾರಿ ನಿ., ರಾಮದುರ್ಗ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 112 | BGM-0805 | ಶ್ರೀ ಶಿವಲಿಂಗೇಶ್ವರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 113 | BGM-0661 | ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ನಿ., ಸುರೇಬಾನ –ಮನಿಹಾಳ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 114 | BGM-0725 | ಶ್ರೀ ಆಂಜನೇಯ ಸಂಕಲ್ಪ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |

| | | | | | |
|---|---|---|---|---|---|
| 115 | BGM-0567 | ಜೈ ಕರ್ನಾಟಕ ಅರ್ಬನ್ ಕೆಡಿಟ್ ಸೌಹಾರ್ದ ಸಹಕಾರಿ ನಿ., ರಾಮದುರ್ಗ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 116 | BGM-0933 | ಶ್ರೀ ಲಕ್ಷ್ಮೀ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೈಲೂರು | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 117 | BGM-0776 | ಶ್ರೀ ಗಣೇಶ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಬೈಲೂರ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 118 | BGM-0475 | ಬಸವವಿಜಯ ಸೌಹಾರ್ದ ಸಹಕಾರಿ ನಿ., ಬೈಲೂರು | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 119 | BGM-0596 | ರಾಣಿ ಚನ್ನಮ್ಮಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಬೈಲೂರು | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 120 | BGM-0646 | ಗುರುಪ್ರಸಾದ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 121 | BGM-0167 | ಮಹಾಲಕ್ಷ್ಮೀ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 122 | BGM-0186 | ಶ್ರೀ ಸಾತೇರಿ ಮಾವುಲಿ ಅರ್ಬನ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 123 | BGM-0109 | ಶ್ರೀ ಬಸವೇಶ್ವರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 124 | BGM-0959 | ಶ್ರೀ ಸಿದ್ದಕಲಾ ಕಲ್ಮೇಶ್ವರ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 125 | BGM-0898 | ಹರಿಪ್ರಿಯಾ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 126 | BGM-0755 | ಶ್ರೀ ಶಿವಯೋಗಿಶ್ವರ ಅರ್ಬನ್ ಕ್ರಡಿಟ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 127 | BGM-0689 | ಮಾರ್ಕಂಡೆಯ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 128 | BGM-0079 | ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 129 | BGM-0062 | ಶ್ರೀ ಭಾಗ್ಯಜ್ಯೋತಿ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 130 | BGM-0564 | ಶ್ರೀ ದುರದುಂಡೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ದುರದುಂಡಿ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 131 | BGM-0969 | ಆತ್ಮೀಯ ಅರ್ಬನ್ ಸೌಹಾರ್ದ ಸಹಕಾರಿ ನಿ.,ಗೋಕಾಕ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 132 | BGM-0895 | ಅನ್ನಪೂರ್ಣೆಶ್ವರಿ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಐನಾಪೂರ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 133 | BGM-1031 | ಐನಾಪೂರ ಗಣೇಶ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಐನಾಪೂರ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 134 | BGM-0114 | ಕಬ್ಬೂರ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಕಬ್ಬೂರ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 135 | BGM-0783 | ಬಸವಜ್ಯೋತಿ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಹತ್ತರವಾಟ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 136 | BGM-0508 | ಸಮೃದ್ಧಿ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಉಗಾರ ಬಿ.ಕೆ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 137 | BGM-0072 | ಶ್ರೀ ನರಸಿಂಹ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಚಿಕ್ಕೋಡಿ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 138 | BGM-0124 | ಶ್ರೀ ಶಮನೆವಾಡಿ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಶಮನೆವಾಡು | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 139 | BGM-0100 | ಶ್ರೀ ಶಿವಾಜಿ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಮಾಂಜರಿ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 140 | BGM-0104 | ಶ್ರೀ ಶಾಂತಿಸಾಗರ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಮಾಂಜರಿ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 141 | BGM-0874 | ಶ್ರೀ ಬನಶಂಕರಿ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಚಿಕ್ಕೋಡಿ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 142 | BGM-1042 | ಶ್ರೀ ಬಸವ ಪ್ರಸಾದ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 143 | BGM-0093 | ಶ್ರೀ ಜೈ ಹನುಮಾನ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಇಂಗಳಿ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 144 | BGM-0041 | ಶ್ರೀ ಆದಿನಾಥ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 145 | BGM-0473 | ಶ್ರೀ ಬಸವೇಶ್ವರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |

| | | | | | |
|---|---|---|---|---|---|
| 146 | BGM-0871 | ಸಂಗನಬಸವ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 147 | BGM-1069 | ಶಾರದಾದೇವಿ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 148 | BGM-0607 | ಶ್ರೀ ಜಗದ್ಗುರು ದುರುದುಂಡೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 149 | BGM-0044 | ಶ್ರೀ ಗಜಾನನ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 150 | BGM-0063 | ಕರ್ನಾಟಕ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 151 | BGM-0031 | ನಾಮದೇವ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 152 | BGM-0149 | ಮಲ್ಲಿಕಾರ್ಜುನ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 153 | BGM-0847 | ನಿಂಗುಂಡಿ ಬಸವೇಶ್ವರ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 154 | BGM-0411 | ಅಂಕುರ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 155 | BGM-0941 | ಶ್ರೀ ಕೃಪಾ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 156 | BGM-0939 | ಮಹಾಲಿಂಗೇಶ್ವರ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 157 | BGM-0007 | ವೀರರಾಣಿ ಕಿತ್ತೂರು ಚೆನ್ನಮ್ಮ ಅರ್ಬನ್ ಕ್ರಡಿಟ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 158 | BGM-0859 | ದಿ ಗೋಲ್ಡನ್ ಮನಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 159 | BGM-0856 | ಏಕದಂತ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 160 | BGM-0864 | ಓಂ ಸಾಯಿ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 161 | BGM-0818 | ವಿಠ್ಠಲದೇವರ ಕ್ರಡಿಟ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 162 | BGM-0209 | ಅಮ್ಮಣಗಿ ಅರ್ಬನ್ ಕ್ರಡಿಟ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 163 | BGM-0975 | ಅಂಬಿಕಾದೇವಿ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 164 | BGM-0275 | ಶ್ರೀ ನಂದಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 165 | BGM-0870 | ಶ್ರೀ ಅಷ್ಟವಿನಾಯಕ ಅರ್ಬನ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 166 | BGM-0388 | ಶ್ರೀ ಅರಿಹಂತ ಕ್ರಡಿಟ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 167 | BEL-003 | ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ಲಿ. | ಬಳ್ಳಾರಿ | 100000 | ಮುಖ್ಯಮಂತ್ರಿ ಪರಿಹಾರ ನಿಧಿ |
| 168 | BEL-051 | ಮಹಾ ನಂಧಿ ಮಾನಿನಿ ಮಹಿಳಾ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 5000 | ಮುಖ್ಯಮಂತ್ರಿ ಪರಿಹಾರ ನಿಧಿ |
| 169 | BEL-055 | ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 3000 | ಮುಖ್ಯಮಂತ್ರಿ ಪರಿಹಾರ ನಿಧಿ |
| 170 | BEL-175 | ಎಮ್ಮಿಗನೂರು ಪತ್ತಿನ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 10000 | ಮುಖ್ಯಮಂತ್ರಿ ಪರಿಹಾರ ನಿಧಿ |
| 171 | BEL-137 | ಶ್ರೀ ಮೇಘ ಸೌಹಾರ್ದ ಪತ್ತಿನ ಸಹಕಾರಿ ನಿ., | ಬಳ್ಳಾರಿ | 12000 | ಅಗತ್ಯ ಸಾಮಗ್ರಿಗಳಿಗಾಗಿ |
| 172 | BEL-62 | ಗೌಳಿಗರ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 45000 | ಅಗತ್ಯ ಸಾಮಗ್ರಿಗಳಿಗಾಗಿ |
| 173 | BEL-95 | ವಿಷ್ಣು ಸೌಹಾರ್ದ ಪತ್ತಿನ ಸಹಕಾರಿ ನಿ., | ಬಳ್ಳಾರಿ | 35000 | ಅಗತ್ಯ ಸಾಮಗ್ರಿಗಳಿಗಾಗಿ |
| 174 | BEL-72 | ಆರ್.ಡಿ.ಸೋನಿ ಪತ್ತಿನ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 19000 | ಅಗತ್ಯ ಸಾಮಗ್ರಿಗಳಿಗಾಗಿ |
| 175 | KWR-100 | ಕೊಂಕಣ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., | ಉತ್ತರ ಕನ್ನಡ | 30000 | ಆಶಾ ಕಾರ್ಯಕರ್ತೆಯರಿಗೆ |
| 176 | KWR-151 | ದೇವಬಾಗ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., | ಉತ್ತರ ಕನ್ನಡ | 15000 | ಆಶಾ ಕಾರ್ಯಕರ್ತೆಯರಿಗೆ |

| | | | | | |
|---|---|---|---|---|---|
| 177 | KWR-066 | ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ನಿ., | ಉತ್ತರ ಕನ್ನಡ | 30000 | ಆಶಾ ಕಾರ್ಯಕರ್ತೆಯರಿಗೆ |
| 178 | KWR-032 | ಸುಪ್ರಭಾತ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ., | ಉತ್ತರ ಕನ್ನಡ | 15000 | ಆಶಾ ಕಾರ್ಯಕರ್ತೆಯರಿಗೆ |
| 179 | KWR-051 | ಓಂಕಾರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., | ಉತ್ತರ ಕನ್ನಡ | 12000 | ಆಶಾ ಕಾರ್ಯಕರ್ತೆಯರಿಗೆ |
| 180 | BGM-1048 | ಮೂಡಲಗಿ ಶ್ರಿ ಸಾಯಿ ಸೌಹಾರ್ದ ಸಹಕಾರಿ ನಿ., ಮೂಡಲಗಿ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 181 | BGM-062 | ಶ್ರೀ ಭಾಗ್ಯಜ್ಯೋತಿ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಗಂದಿಗವಾಡ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 182 | BGM-162 | ಶ್ರೀ ವೀರರಾಣಿ ಬೆಳವಡಿ ಮಲ್ಲಮ್ಮ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 9000 | ಆಶಾ ಕಾರ್ಯಕರ್ತೆಯರಿಗೆ |
| 183 | KWR-023 | ದ್ವಾರಕಾ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., | ಉತ್ತರ ಕನ್ನಡ | 18000 | ಆಶಾ ಕಾರ್ಯಕರ್ತೆಯರಿಗೆ |
| 184 | KWR-098 | ಸ್ಕೋಡವೇಸ್ ಮಹಿಳಾ ಸೌಹಾರ್ದ ಸಹಕಾರಿ ನಿ., | ಉತ್ತರ ಕನ್ನಡ | 6000 | ಆಶಾ ಕಾರ್ಯಕರ್ತೆಯರಿಗೆ |
| 185 | BGM-028 | ಶ್ರೀ ಉಮಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 186 | KWR-02 | ಹವ್ಯಕ ಕ್ರೆಡಿಟ್ ಸ್ವಹಾರ್ದ ಸಹಕಾರಿ ನಿ., | ಉತ್ತರ ಕನ್ನಡ | 15000 | ಆಶಾ ಕಾರ್ಯಕರ್ತೆಯರಿಗೆ |
| 187 | KWR-85 | ವೀ–ಕೇರ ಕ್ರಡಿಟ್ ಸೌಹಾರ್ದ ಕೋ–ಆಪ್ ಲಿ., | ಉತ್ತರ ಕನ್ನಡ | 12000 | ಆಶಾ ಕಾರ್ಯಕರ್ತೆಯರಿಗೆ |
| 188 | KWR-005 | ಶಾಂತಿಕಾ ಸೌಹಾರ್ದ ಸಹಕಾರಿ ನಿ., | ಉತ್ತರ ಕನ್ನಡ | 15000 | ಆಶಾ ಕಾರ್ಯಕರ್ತೆಯರಿಗೆ |

ಕ್ರಮ ಸಂಖ್ಯೆ 1 ರಿಂದ 30 ರವರೆಗೆ ಸಂಯುಕ್ತ ಸಹಕಾರಿಗೆ ನೇರವಾಗಿ ಸಂಗ್ರಹವಾಗಿರುವ ಮೊತ್ತ, ಕ್ರಮ ಸಂಖ್ಯೆ 31, 32 ಹಾಗೂ 167 ರಿಂದ 170 ರವರೆಗೆ ಸೌಹಾರ್ದ ಸಹಕಾರಿಗಳು ನೇರವಾಗಿ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಕಳುಹಿಸಿರುವ ಮೊತ್ತ ಮತ್ತು ಕ್ರಮ ಸಂಖ್ಯೆ 33 ರಿಂದ 166 ಹಾಗೂ ಕ್ರಮ ಸಂಖ್ಯೆ 175 ರಿಂದ 188 ರ ವರೆಗೆ ಆಶಾ ಕಾರ್ಯಕರ್ತೆಯರಿಗೆ ನೀಡಿರುವ ಪ್ರೋತ್ಸಾಹ ಧನ.



**ಉತ್ತರ ಕನ್ನಡ :** ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿ ನಿ, ಶಿರಸಿ ಯಿಂದ ಆಶಾ ಕಾರ್ಯಕರ್ತೆಯರಿಗೆ ಕೋವಿಡ್ 19 ಪ್ರೋತ್ಸಾಹ ಧನ ವಿತರಣೆ ಕಾರ್ಯಕ್ರಮವನ್ನು ದಿನಾಂಕ 02.07.2020 ರಂದು ಬೆಳಿಗ್ಗೆ 11 ಘಂಟೆಗೆ ಸ್ವಧಾರ ಕೇಂದ್ರದ ಆವರಣದಲ್ಲಿ ನಡೆಸಲಾಯಿತು. ಸಹಕಾರಿಯ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎನ್ ರವಿ ಇವರು ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನ ಚೆಕ್ ವಿತರಿಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಶ್ರೀಮತಿ ಹೇಮಲತಾ, ನಿರ್ದೇಶಕರಾದ ಶ್ರೀಮತಿ ಅಂಜಲಿ ಹೆಗಡೆ, ಶ್ರೀಮತಿ ಭಾಗೀರಥಿ ನಾಯ್ಕ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಣಪತಿ ನಾಯ್ಕ, ಸ್ವಧಾರ ಕೇಂದ್ರದ ಧಾನೇಶ್ವರಿ ಹಿರೇಮಠ ಹಾಗೂ ವಿನುತಾ, ಸ್ಕೊಡ್‌ವೆಸ್ ಸಂಸ್ಥೆಯ ದೇವು ಪಟಗಾರ, ಸಹಕಾರಿಯ ಸಿಬ್ಬಂದಿಗಳಾದ ನಟರಾಜ್ ಶೆಟ್ಟಿ, ವಂದನಾ ಸೋನ್ಸ್, ಪ್ರಶಾಂತ್ ಹೆಗಡೆ ಹಾಗೂ ಇತರರೂ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಸಹಕಾರಿ ಯಿಂದ ಸ್ವಧಾರ ಕೇಂದ್ರಕ್ಕೆ ಟಿವಿ ಕೊಡುಗೆ ನೀಡಲಾಯಿತು.



**ಕೊಪ್ಪಳ:** ದಿನಾಂಕ 28–06–2020 ರಂದು ಗ್ರಾಮ ಪಂಚಾಯಿತಿ ಹತ್ತಿರ, ಓ.ಜಿ.ಸಿ ಮಳಿಗೆ, ಹಿರೇಬಗನಾಳ, ಕೊಪ್ಪಳದಲ್ಲಿ ಗಂಗಾ ಯಮುನಾ ಪತ್ತಿನ ಸೌಹಾರ್ದ ಸಹಕಾರಿ ನಿ; ಕೊಪ್ಪಳ ಸಹಕಾರಿಯ ವತಿಯಿಂದ ರಾಸಾಯನಿಕ ಗೊಬ್ಬರ, ಬಿತ್ತನೆ ಬೀಜಗಳು, ಕೀಟನಾಶಕ ಮಾರಾಟ ಕೇಂದ್ರವನ್ನು ಹಿರೇಬಗನಾಳ ಗ್ರಾಮದಲ್ಲಿ ಉದ್ಘಾಟಿಸಲಾಯಿತು. ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಗವಿಸಿದ್ಧಯ್ಯರವರು, ಮಾನ್ಯ ಉಪಾಧ್ಯಕ್ಷರಾದ ಶ್ರೀ ಮಿಥುನ್ ಮುದಗಲ್ ರವರು, ಆಡಳಿತ ಮಂಡಳಿಯ ನಿರ್ದೇಶಕರು, ಸದಸ್ಯರು, ಸಿಬ್ಬಂದಿ ವರ್ಗದವರು, ಊರಿನ ಗಣ್ಯ ವ್ಯಕ್ತಿಗಳು ಮತ್ತು ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ವಿಜಯಕುಮಾರ ರವರು ಉಪಸ್ಥಿತರಿದ್ದರು.

# ಬ್ಯಾಂಕಿಂಗ ರೆಗ್ಯುಲೇಶನ್ ಕಾಯ್ದೆ 1949 ತಿದ್ದುಪಡಿ 26.06.2020 ಸಂಯುಕ್ತ ಸಹಕಾರಿ ನೇತೃತ್ವದಲ್ಲಿ ನಡೆದ ಆನ್‌ಲೈನ್ ಚರ್ಚಾಗೋಷ್ಠಿ

ಕೇಂದ್ರ ಸರಕಾರ ಬ್ಯಾಂಕಿಂಗ ರೆಗ್ಯುಲೇಶನ್ ಕಾಯ್ದೆ 1949 ಇದಕ್ಕೆ ತಿದ್ದುಪಡಿ ಮಾಡಿ ದಿನಾಂಕ 26.06.2020 ರಂದು ಸುಗ್ರೀವಾಜ್ಞೆಯನ್ನು ಹೊರಡಿಸುವುದರ ಮೂಲಕ ರಿಸರ್ವ ಬ್ಯಾಂಕಿಗೆ ಹೆಚ್ಚಿನ ಅಧಿಕಾರಗಳನ್ನು ನೀಡಿದೆ. ಈ ತಿದ್ದುಪಡಿ ಜಾರಿಗೆ ಬಂದ ನಂತರ ಹಲವಾರು ಪಟ್ಟಣ ಸಹಕಾರ ಬ್ಯಾಂಕುಗಳು ಈ ತಿದ್ದುಪಡಿಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಒದಗಿಸುವ ಕಾರ್ಯಾಗಾರವನ್ನು ವ್ಯವಸ್ಥೆ ಮಾಡಬೇಕೆಂದು ಅಪೇಕ್ಷಿಸಿದ್ದರು. ಈ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯು ದಿನಾಂಕ 4 ಜುಲೈ 2020 ರಂದು ಆನ್‌ಲೈನ್ ಮೂಲಕ ಚರ್ಚಾಗೋಷ್ಠಿ ಏರ್ಪಡಿಸಲಾಗಿತ್ತು.

ಈ ಚರ್ಚಾಗೋಷ್ಠಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯದ ಹೆಚ್ಚುವರಿ ಅಡ್ವೋಕೇಟ್ ಜನರಲ್ ಶ್ರೀಮತಿ ವಿದ್ಯಾವತಿ ಎಮ್. ಕೆ. ಇವರು ಉಪಸ್ಥಿತರಿದ್ದರು. ಮುಖ್ಯ ಉಪನ್ಯಾಸಕಾರರಾಗಿ ಸುಕೋ ಬ್ಯಾಂಕಿನ ಸ್ಥಾಪಕ ಅಧ್ಯಕ್ಷರಾದ ಶ್ರೀ ಮನೋಹರ ಮಸ್ಕಿಯವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಎಸ್.ಆರ್.ಲಕ್ಷ್ಮಿಕಾಂತರೆಡ್ಡಿಯವರು, ಶ್ರೀ ಆರ್.ಎನ್. ದೇಶಪಾಂಡೆಯವರು, ಶ್ರೀ ತಿಮ್ಮಯ್ಯಶೆಟ್ಟಿಯವರು, ಶ್ರೀ ನಂಜನಗೌಡರವರು ಹಾಗೂ ರಾಜ್ಯದ ಸೌಹಾರ್ದ ಸಹಕಾರಿ ಬ್ಯಾಂಕುಗಳ 65 ಪ್ರತಿನಿಧಿಗಳು ಭಾಗವಹಿಸಿದ್ದರು.

ಪ್ರಾರಂಭದಲ್ಲಿ ಶ್ರೀಮತಿ ವಿಜಯಶ್ರೀಯವರಿಂದ ಪ್ರಾರ್ಥನೆಯಾದ ನಂತರ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ. ಜಿ.ಪಾಟೀಲ್ ಎಲ್ಲರಿಗೂ ಸ್ವಾಗತ ನೀಡಿ ಪ್ರಾಸ್ತಾವಿಕ ಭಾಷಣ ಮಾಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಶ್ರೀಮತಿ ವಿದ್ಯಾವತಿಯವರು ಮಾತನಾಡಿ ಈ ತಿದ್ದುಪಡಿಯ ಪ್ರಕಾರ ನಿಬಂಧಕರ ಅಧಿಕಾರ ಕಡಿಮೆ ಮಾಡಿ ರಿಸರ್ವ್ ಬ್ಯಾಂಕಿನವರಿಗೆ ಹೆಚ್ಚಿನ ಅಧಿಕಾರ ನೀಡಿದ್ದಾರೆ. ಅದರಲ್ಲೂ ವಿಶೇಷವಾಗಿ ಬ್ಯಾಂಕುಗಳ ವಿಲೀನಿಕರಣದ ಮೂಲಕ ಬ್ಯಾಂಕುಗಳ ಪುನರ್ರಚನೆ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಕಾರ್ಯ ವ್ಯಾಪ್ತಿಯಲ್ಲಿನ ಜನಸಾಮಾನ್ಯರಿಂದ ಶೇರು ಬಂಡವಾಳ ಶೇಖರಿಸಲು ಅವಕಾಶ, ಸಾಲ ಪತ್ರ ನೀಡಲು ಅವಕಾಶ ಇತ್ಯಾದಿಗಳು ಪಟ್ಟಣ ಸಹಕಾರ ಬ್ಯಾಂಕುಗಳ ಆರೋಗ್ಯಕರ ಬೆಳವಣಿಗೆಗೆ ಸಾಧ್ಯವಾಗುತ್ತವೆ ಎಂದರು.

ಮುಖ್ಯ ಉಪನ್ಯಾಸರಾಗಿ ಭಾಗವಹಿಸಿದ್ದ ಸುಕೋ ಬ್ಯಾಂಕಿನ ಸ್ಥಾಪಕ ಅಧ್ಯಕ್ಷ ಶ್ರೀ ಮನೋಹರ ಮಸ್ಕಿಯವರು ಮಾತನಾಡಿ ರಿಸರ್ವ್ ಬ್ಯಾಂಕಿನವರು ದ್ವಿನಿಯಂತ್ರಣ ಪದ್ಧತಿಯಿಂದ ನಿರೀಕ್ಷಿಸಿದ ಪ್ರಗತಿ ಹಾಗೂ ಕಾರ್ಯಗಳು ನಡೆಯುವುದಿಲ್ಲ. ಈ ಬಗ್ಗೆ ಕೇಂದ್ರ ಸರಕಾರ ಬ್ಯಾಂಕಿಂಗ ರೆಗ್ಯುಲೇಶನ್ ಕಾಯ್ದೆಗೆ ತಿದ್ದುಪಡಿ ತರುವುದು ಅವಶ್ಯಕ ಎಂದು ಪ್ರತಿಪಾದಿಸುತ್ತಿದ್ದರು. ಈ ವಿಷಯ ಕಳೆದ 15 ವರ್ಷಗಳಿಂದ ಚರ್ಚೆಯಲ್ಲಿತ್ತು. ಈಗ ಕೆಲವು ಪಟ್ಟಣ ಬ್ಯಾಂಕುಗಳ ಹಗರಣಗಳಿಂದಾಗಿ ಕೇಂದ್ರ ಸರಕಾರಕ್ಕೆ ಈ ತಿದ್ದುಪಡಿ ತರುವುದು ಅನಿವಾರ್ಯವಾಗಿತ್ತು ಹೀಗಾಗಿ ಈ ತಿದ್ದುಪಡಿಯನ್ನು ಸುಗ್ರೀವಾಜ್ಞೆಯ ಮೂಲಕ ಜಾರಿಗೆ ತಂದಿದ್ದಾರೆ ಎಂದರು.

ಈ ತಿದ್ದುಪಡಿಯಿಂದಾಗಿ ರಿಸರ್ವ್ ಬ್ಯಾಂಕಿನವರಿಗೆ ಹೆಚ್ಚಿನ ಅಧಿಕಾರ ನೀಡಲಾಗಿದೆ. ಬ್ಯಾಂಕುಗಳಲ್ಲಿ ಹಣಕಾಸಿನ ಶಿಸ್ತು, ಸಧೃಡ ವ್ಯವಸ್ಥಿತ ಆಡಳಿತ ಮುಂತಾದವುಗಳಿಗೆ ಅವಕಾಶವಾಗುತ್ತದೆ. ವಿಶೇಷವಾಗಿ ರಾಜ್ಯ ಸಹಕಾರ ಬ್ಯಾಂಕುಗಳನ್ನು ಹಾಗೂ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳನ್ನು ಈ ವ್ಯಾಪ್ತಿಗೆ ಸೇರಿಸಿದ್ದಾರೆ. ದ್ವಿನಿಯಂತ್ರಣ ಪದ್ಧತಿ ಮುಂದುವರೆಯುತ್ತದೆ. ಆದರೆ ರಿಸರ್ವ್ ಬ್ಯಾಂಕಿಗೆ ಹೆಚ್ಚಿನ ಅಧಿಕಾರ ನೀಡಲಾಗಿದೆ. ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿಯನ್ನು ಸದರಿ ಪಟ್ಟಣ ಸಹಕಾರ ಬ್ಯಾಂಕಿನವರ, ನಿಬಂಧಕರ ಸರಕಾರದ ಗಮನಕೆಂದು ಮಾಡಬೇಕಾಗುತ್ತದೆ. ಅವರುಗಳ ಅನುಮತಿ ಪಡೆಯುವ ಅಗತ್ಯವಿರುವುದಿಲ್ಲ. ಇದರಿಂದಾಗಿ ಸಹಕಾರಿ ಆಡಳಿತದಲ್ಲಿ ಸದಸ್ಯರ ಪ್ರಭುತ್ವತೆ ಕಡಿಮೆಯಾದಂತಾಗಿದೆ ಬ್ಯಾಂಕುಗಳಲ್ಲಿ ಶೇರು ಬಂಡವಾಳ ಸ್ವೀಕರಿಸಲು ಹೆಚ್ಚಿಸಲು ಬಂಡವಾಳ ಯೋಜನೆಯನ್ನು ಮಾಡಲು ಅವಕಾಶವಾಗಿದೆ. ಶೇರುಗಳನ್ನು ಡಿಬೆಂಚರುಗಳನ್ನಾಗಿ (ಸಾಲಪತ್ರವನ್ನಾಗಿ) ಪರಿವರ್ತಿಸಲು ಅವಕಾಶ ಬ್ಯಾಂಕುಗಳ ವಿಲೀನಕ್ಕೆ ಅವಕಾಶ ಹೀಗಾಗಿ ಬ್ಯಾಂಕುಗಳ ಅಭಿವೃದ್ಧಿ ಉತ್ತಮ ಅವಕಾಶ ಎಂದು ತಿಳಿಸಿದರು..

ಚರ್ಚೆಯಲ್ಲಿ ಅನೇಕ ಬ್ಯಾಂಕುಗಳ ಅಧ್ಯಕ್ಷರು ಹಾಗು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಭಾಗವಹಿಸಿ ಪ್ರಶ್ನೆಗಳನ್ನು ಕೇಳಿದರು. ಮುಖ್ಯ ಭಾಷಣಕಾರರಾದ ಶ್ರೀ ಮನೋಹರ ಮಸ್ಕಿಯವರು ಮುಖ್ಯ ಅತಿಥಿಗಳಾದ ಶ್ರೀಮತಿ ವಿದ್ಯಾವತಿಯವರು ಹಾಗೂ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲ್ ರವರು ಪ್ರತಿನಿಧಿಗಳ ಪ್ರಶ್ನೆಗಳಿಗೆ ಉತ್ತರ ನೀಡಿದರು.

ಚರ್ಚಾಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಮಾತನಾಡಿ ಇವತ್ತಿನ ಈ ಚರ್ಚಾಗೋಷ್ಠಿ ಸೌಹಾರ್ದ ಸಹಕಾರಿ ಪಟ್ಟಣ ಸಹಕಾರ ಬ್ಯಾಂಕುಗಳ ದೃಷ್ಟಿಯಿಂದ ಅತಿ ಅಗತ್ಯವಾಗಿತ್ತು ಬ್ಯಾಂಕಿಂಗ್ ರೆಗ್ಯುಲೇಶನ್ ಕಾಯ್ದೆಗೆ ತಿದ್ದುಪಡಿ ಮಾಡಿರುವ ಕೇಂದ್ರ ಸರಕಾರದ ಈ ನಡೆಯಿಂದಾಗಿ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸದಸ್ಯರಿಗೆ ಠೇವಣಿದಾರರಿಗೆ ಆಗುವ ಲಾಭಗಳ ಬಗ್ಗೆ ಬ್ಯಾಂಕುಗಳ ಆಡಳಿತ ಹಾಗೂ ಹಣಕಾಸು ವ್ಯವಸ್ಥೆಯನ್ನು ಸಧೃಡಗೊಳಿಸುವಲ್ಲಿ ಆಗಿರುವ ಬದಲಾವಣೆಗಳ ವಿವರ ನೀಡುವಲ್ಲಿ ಈ ಚರ್ಚಾಗೋಷ್ಠಿ ಸಫಲವಾಗಿದೆ. ಪ್ರತಿನಿಧಿಗಳು ಹಾಗೂ ಗಣ್ಯರು ನೀಡಿರುವ ಸಲಹೆಗಳನ್ನು ಸ್ವಾಗತಿಸುತ್ತೇನೆ ಮತ್ತು ಅಗತ್ಯವೆನಿಸಬಹುದಾದಲ್ಲಿ ಕ್ರಮವಿಡಲು ಕಾರ್ಯಯೋಜನೆಗಳನ್ನು ರೂಪಿಸಲಾಗುವುದು ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ.ಪಾಟೀಲ್ ರವರು ವಂದನಾರ್ಪಣೆ ಮಾಡುತ್ತ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ವ್ಯಾಪ್ತಿಗೆ 2 ಬ್ಯಾಂಕುಗಳು ಸೇರಿದ್ದು ಈಗ ಸಂಖ್ಯೆ 20ಕ್ಕೆ ತಲುಪಿದೆ ಎಂದರು.

# Banking regulation Act, 1949 - Amendments 2020
# More powers to RBI to supervise the Urban Co-operative Banks.

- Sudhakara Bhat, Banking Advisor.

An Ordinance was promulgated on June 26, 2020 to amend the Banking Regulation Act, 1949. The amendments which are relevant to UCBs are listed below along with existing provisions. Wait for detailed guidelines regarding the issue of equity and other shares.

| Section | Subject | Existing | Amended | Remarks |
|---|---|---|---|---|
| 45(4) | Amalgamation/ reconstruction of the of the Bank | For amalgamation /reconstruction of the bank imposing moratorium was essential. | Bank can be merged /reconstructed any time without imposing moratorium on with-drawal of deposit | There will not be any disruption of business of the bank. |
| (56) 12(1) | Issue of shares | Governed by Sec 16 to 18 of KCS Act. Accordingly, there are Regular, associate and nominal members. | BR Act gives powers to RBI to frame guidelines regarding issue of shares. UCBs may issue:<br>(i) equity shares or prefer-ence shares or special shares,<br>(ii) by way of public issue or private placement.<br>(iii) on face value or at premium.<br>(iii) to any member or to any other person residing in the area of operation of the bank. | Guidelines re-garding terms and conditions of the share issue will be issued by RBI.<br><br>This clause, es-pecially issue of shares at a premi-um, is beneficial to multi state FSWM Co- operative Banks. |
| 12((1) (ii) | Issue of unse-cured Bond and debentures | New provision | UCBs can issue unsecured debentures or bonds to any member or to any other person residing in the area of operation of the bank. | Original maturity of securities should not be less than 10 years. RBI will issue detailed guidelines. Benefi-cial to well man-aged multi state co-operative banks. |

| | | | | |
|---|---|---|---|---|
| 12(2) (i) | Restriction on surrender of shares by members | There is no restriction in KCS Act for surrender of shares by members. | No person shall be entitled to demand payment towards surrender of shares issued to him by UCB. | This provision is on par with provisions applicable to commercial banks and other financial institutions. |
| 12(2) (ii) | Restriction on reduction in share capital of the UCB | There is no restriction in KCS Act for repayment of share amount to regular/associate members. | A co-operative bank shall not withdraw or reduce its share capital, except to the extent and subject to such conditions as the Reserve Bank may specify in this behalf. | - do- |
| 36AAA | Supersession of Board of Directors | RBI had powers to supersede ONLY multi state co- operative banks. | 1. RBI has powers to supersede the Board of ALL UCBs.<br><br>2. For UCBs which are NOT multi state, RBI should consult concerned State government.<br><br>3. State Government should reply within the time specified by RBI.<br><br>4. Board may be superseded for a maximum period of 5 years.<br><br>5. RBI will appoint an Administrator of its choice and he is bound by the direction issued by RBI.<br><br>6. Upon supersession of Board, RBI may constitute a committee of experts to guide the Administrator. | - do- |

# ಸಾಮಾಜಿಕ ಬದ್ಧತೆ ಮತ್ತು ಪ್ರಾದೇಶಿಕತೆಯ ಪ್ರತಿರೂಪವಾದ ಸಹಕಾರ ವ್ಯವಸ್ಥೆ

– ಶ್ರೀ ಮಂಜುನಾಥ ಎಸ್.ಕೆ, ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು

ಇತಿಹಾಸ ಪುನರಾವರ್ತನೆ ಆಗದೇ ಹೋದಲ್ಲಿ ಜಾಗತೀಕರಣದ ವೈಪರಿತ್ಯಗಳು ಸಮಾಜದ ನೆಮ್ಮದಿ ಕೆಡಿಸಿ, ಸಾಮೂಹಿಕ ವಿನಾಶಕ್ಕೆ ಮುನ್ನುಡಿಯಾಗಬಹುದು ಎನ್ನುವುದು ಕೊರೋನಾದಂತಹ ಜಾಗತಿಕ ಸಾಂಕ್ರಾಮಿಕ ಸೋಂಕುಗಳು ಸಾಬೀತು ಪಡಿಸುತ್ತವೆ. ಮೊನ್ನೆ ಮೊನ್ನೆಯವರೆಗೆ ಕಾಲಿಗೆ ಚಕ್ರ ಸಿಕ್ಕಿಸಿಕೊಂಡು ವಿಶ್ವಪರ್ಯಟನೆಯ ದೀಕ್ಷೆತೊಟ್ಟವರಂತೆ ವರ್ತಿಸುತ್ತಿದ್ದ ಯರ್‍ರಾಬಿರ್‍ರಿ ಸುತ್ತಾಡಿಕೊಂಡ ಮನುಷ್ಯ ಇಂದು ಜೀವ ಭಯದಿಂದ ಬಿಲದ ಇಲಿಯಂತಾಗಿದ್ದಾನೆ. ಮಹಾಭಾರತದ ವಿಧುರ, ಯುಧಿಷ್ಠಿರನಲ್ಲಿ ಪ್ರಶ್ನಿಸುತ್ತಾನೆ–ಭೂಮಿಯಲ್ಲೆಲ್ಲ ಬೆಂಕಿ ವ್ಯಾಪಿಸಿದರೂ ಬದುಕುಳಿಯುವ ಜೀವಿ ಯಾವುದು? ಎಂದು. ಅದಕ್ಕೆ ಯುಧಿಷ್ಠಿರನ ಉತ್ತರ–ಬಿಲದಲ್ಲಿ ಜೀವಿಸುವ ಇಲಿ. ಹಾಗಾಗಿ ಜೀವನದಲ್ಲಿ ಖಾಸಗಿತನ ಮತ್ತು ಅದರ ವಿಸ್ತಾರ ರೂಪವಾದ ಪ್ರಾದೇಶಿಕತೆ, ಸ್ವ–ರಕ್ಷಣೆ ಮತ್ತು ಸ್ವಾವಲಂಬನೆಗೆ ಆದ್ಯತೆಯನ್ನು ಕಲ್ಪಿಸುತ್ತದೆ. ಸಾಮಾಜಿಕ ಬದ್ಧತೆ, ಆರ್ಥಿಕ ಸ್ಥಿರತೆ ಹಾಗೂ ಪ್ರಾದೇಶಿಕ ಸಮೃದ್ಧತೆಗೆ "ಸಹಕಾರಿ ಕ್ಷೇತ್ರ"ದಷ್ಟು ಸಹಕಾರ ನೀಡುವ ವ್ಯವಸ್ಥೆ ಇನ್ನೊಂದಿಲ್ಲ ಎನ್ನುವುದು ಸರ್ವವಿಧಿತ. ಪರಸ್ಪರ ಆರ್ಥಿಕ ಹಿತಾಸಕ್ತಿಗಳ ರಕ್ಷಣೆಗಾಗಿ ಸಮಾನತೆಯ ಆಧಾರದಲ್ಲಿ ಮಾನವೀಯ ಸ್ಪರ್ಶದೊಂದಿಗೆ ಒಗ್ಗೂಡಲ್ಪಟ್ಟ ಸಮಾನರ ವ್ಯವಸ್ಥೆಯೆಂದರೆ ಅದು ಸಹಕಾರಿ ವ್ಯವಸ್ಥೆ. ದೇಶೀಯ ಆರ್ಥಿಕ ಪ್ರಗತಿ, ಜಿ.ಡಿ.ಪಿ ಯ ಹೆಚ್ಚಳ ಮತ್ತು ಬಡ ಕೃಷಿ–ಕೂಲಿ ಕಾರ್ಮಿಕರ ಅಭಿವೃದ್ಧಿಯಲ್ಲಿ ಸಹಕಾರಿ ವ್ಯವಸ್ಥೆ ಎಂದೋ ಶಹಬಾಸ್‌ಗಿರಿ ಪಡೆದಿದೆ. ಈ ನಿಟ್ಟಿನಲ್ಲಿ ಕೊರೋನಾ ವೈರಸ್ (COVID-19) ಆರ್ಥಿಕವಾಗಿ ಬಲಿಷ್ಠ ರಾಷ್ಟ್ರಗಳ ಅರ್ಥವ್ಯವಸ್ಥೆಯನ್ನು ಬುಡಮೇಲು ಮಾಡುತ್ತಿರುವ ಕಾಲಘಟ್ಟದಲ್ಲಿ ಭಾರತದ ಅರ್ಥವ್ಯವಸ್ಥೆ ಪರವಾಗಿಲ್ಲ ಎಂದು ತೃಪ್ತಿ ಪಡುವಲ್ಲಿ ಸಹಕಾರಿ ಕ್ಷೇತ್ರದ ದೇಣಿಗೆಯನ್ನೂ ಅಲ್ಲಗಳೆಯುವಂತಿಲ್ಲ.

ಕರೋನಾ ವೈರಸ್ ಭಾರತದ ಪಾರಂಪರಿಕ ಜೀವನ ಪದ್ಧತಿ ಮತ್ತು ಪ್ರಾದೇಶಿಕತೆಯ ಪ್ರಾಮುಖ್ಯತೆಯನ್ನು ಪುಷ್ಟೀಕರಿಸಿದೆ. ಭಾರತದ ಆರೋಗ್ಯ ಕ್ಷೇತ್ರ, ಯೋಗ, ಆಯುರ್ವೇದ, ಆಹಾರ ಪದ್ದತಿ ಮತ್ತು ಆರ್ಥಿಕ ವ್ಯವಸ್ಥೆಯ ಅಡಿಪಾಯವಾದ ಸಹಕಾರಿ ಕ್ಷೇತ್ರ ವಿಶ್ವವ್ಯಾಪಿಯಾಗಿ ಪ್ರಶಂಸನೆಗೊಳಗೊಂಡಿದೆ. ಪ್ರಧಾನ ಮಂತ್ರಿಯ ಮನ್–ಕೀ–ಭಾತ್ ಪ್ರಾದೇಶಿಕ ಸಮತೋಲನದ ಅವಶ್ಯಕತೆಯನ್ನು ಎತ್ತಿಹಿಡಿದದ್ದು ಗಮನಾರ್ಹ ಸಂಗತಿ. ಇದು ವಾಸ್ತವಿಕವೂ ಹೌದು...., ಭಾರತದ ಜನಜೀವನ ಹಾಗೂ ನಮ್ಮ ಸಂಸ್ಕೃತಿಯ ಪ್ರತಿರೂಪವಾದ ನಾನು ಎಲ್ಲರಿಗಾಗಿ ಎಲ್ಲರೂ ಎಲ್ಲರಿಗಾಗಿ ಎನ್ನುವ ವಸುದೈವ ಕುಟುಂಬದ ಪರಿಕಲ್ಪನೆಯೊಂದಿಗೆ ನೂರಕ್ಕಿಂತಲೂ ಹೆಚ್ಚು ಸಂವತ್ಸರವನ್ನು ಕಳೆದ ಸಹಕಾರ ವ್ಯವಸ್ಥೆಯ ಇಂದಿನ ಪ್ರಸ್ತುತೆಯು ಹೌದು. ಜಗತ್ತಿನಲ್ಲಿ ಬಹುದೊಡ್ಡ ಕ್ರಾಂತಿಯನ್ನು ಮಾಡಿದ Globalization and Modernisation ಬಗ್ಗೆ ಮರುಚಿಂತನೆ ಮತ್ತು ಮರುವ್ಯಾಖ್ಯಾನ ಮಾಡಬೇಕಾಗಿರುವುದು ಇವತ್ತಿನ ದಿನಗಳಲ್ಲಿ ಅನಿವಾರ್ಯ. ಬೇರೆ ದೇಶದಲ್ಲಿ ಬೆಳೆದ/ ಉತ್ಪಾದಿಸಿದ ಬಹಳಷ್ಟು ವಸ್ತುಗಳು ನಮ್ಮ Lockdown ಅವಧಿಯಲ್ಲಿ ನಮ್ಮ ಅಗತ್ಯಕ್ಕೆ ಬರಲಿಲ್ಲ ಎನ್ನುವುದು ಅಕ್ಷರಶಃ ಸತ್ಯ. ನಮ್ಮ ಪ್ರದೇಶದ ರೈತರು ಬೆಳೆದ ಗೋಧಿ, ಅಕ್ಕಿ, ತರಕಾರಿ ಹಾಗೂ ಹಣ್ಣು ಹಂಪಲು Lockdown ಅವಧಿಯಲ್ಲಿ ನಮ್ಮವರ ಹಸಿವು ನೀಗಿಸಿದೆ ಅನ್ನುವುದು ವಾಸ್ತವ.

Lockdown ಸಮಯದಲ್ಲಿ ಪ್ರಾದೇಶಿಕವಾಗಿ ಮತ್ತು ಸಾಮಾಜಿಕ ಬದ್ಧತೆಯಿಂದ ಒಂದು ಸಹಕಾರಿ ವ್ಯವಸ್ಥೆ ಅದ್ಭುತವಾಗಿ ಸೇವೆ ನೀಡಿದೆ. ಕರ್ನಾಟಕ ರಾಜ್ಯದಲ್ಲಿ ಬಹುತೇಕ ಪಿ.ಡಿ.ಎಸ್ ವ್ಯವಸ್ಥೆ (ಪಡಿತರ ವ್ಯವಸ್ಥೆ) ಸಹಕಾರಿಯ ಮೂಲಕ ಆಗುತ್ತಿದೆ. ಸಹಕಾರಿ ಸಂಘದ ಸಿಬ್ಬಂದಿಗಳು ತಮ್ಮ ಆರೋಗ್ಯವನ್ನೂ ಲೆಕ್ಕಿಸದೆ ಸಮರ್ಪಕವಾಗಿ ಸರ್ಕಾರ ನೀಡಿದ ಆಹಾರ ಧಾನ್ಯಗಳನ್ನು, ಪಡಿತರ ವಸ್ತುಗಳನ್ನು ವ್ಯವಸ್ಥಿತವಾಗಿ ಹಂಚಿದೆ ಎನ್ನುವುದು ಹೆಮ್ಮೆಯ ವಿಷಯ. ಇಲ್ಲಿ ಯಾವ ಮಾಲ್‌ಗಳು ಅಥವಾ ಕಂಪನಿಗಳು ಜನರ ನೆರವಿಗೆ ಬರಲಿಲ್ಲ.

ಅಲ್ಲದೆ ಬಹುತೇಕ ಕಡೆ ರೈತರು ಬೆಳೆದ ತರಕಾರಿ ಹಾಗೂ ಆಹಾರ ಧಾನ್ಯಗಳ ಖರೀದಿ ಹಾಗೂ ಮಾರಾಟವನ್ನು ಬಹಳಷ್ಟು ಸಹಕಾರಿ ಸಂಸ್ಥೆಗಳು ವ್ಯವಸ್ಥಿತವಾಗಿ ಮಾಡಿವೆ. ಒಂದು ಸಹಕಾರಿ ಸಂಸ್ಥೆ ರೈತರಿಂದ ಖರೀದಿ ಮಾಡಿ ಇನ್ನೊಂದು ಸಹಕಾರಿ ಸಂಘಕ್ಕೆ ಮಾರಾಟ ಮಾಡಿ ಅಲ್ಲಿ ಅದನ್ನು ವ್ಯವಸ್ಥಿತವಾಗಿ ವಿತರಿಸಲು ವ್ಯವಸ್ಥೆಯನ್ನು ಮಾಡಿದ್ದು ಸಹ ಉಲ್ಲೇಖನೀಯ. ನಮ್ಮ ದಿನನಿತ್ಯದ ಹಾಲು ಹಾಗೂ ಹಾಲಿನ ಉತ್ಪನ್ನವನ್ನು ವಿತರಿಸುವ ಅಮೂಲ್ ಮಾದರಿಯ ಹಾಲು ಉತ್ಪಾದಕರ ಸಹಕಾರಿ ದೇಶಾದ್ಯಂತ ರೈತರಿಂದ ಹಾಲನ್ನು ಖರೀದಿಸಿ ಹೆಚ್ಚಿನ ವೆಚ್ಚ ವ್ಯತ್ಯಾಸವಿಲ್ಲದೆ ಅದನ್ನು ವ್ಯವಸ್ಥಿತವಾಗಿ ಬಳಕೆದಾರರಿಗೆ ನೀಡಿದ್ದು, ಬಹುಶಃ ಸಹಕಾರಿ ವ್ಯವಸ್ಥೆಯ ಪ್ರಾಮುಖ್ಯತೆಯನ್ನು ಜಗತ್ತಿಗೆ ತೋರಿಸಿಕೊಟ್ಟಿದೆ ಎನ್ನುವುದು ಹೆಮ್ಮೆಯ ವಿಷಯ. ಹಾಲು ಉತ್ಪಾದಕರ ಸಹಕಾರಿ ಸಂಘಗಳು ಹಳ್ಳಿಗಳಲ್ಲಿ ವ್ಯವಸ್ಥಿತ ಕೆಲಸ ಮಾಡುತ್ತಿವೆ. ಅಡಿಕೆ, ತೆಂಗು ಹಾಗೂ ಇನ್ನಿತರ ರೈತರ ಉತ್ಪನ್ನಗಳ ಬಗ್ಗೆ ಸಹಕಾರಿ ಸಂಘ ಮಾದರಿ ಕೆಲಸ ಮಾಡಿದೆ. ಹಾಗೆಯೇ ಹಣಕಾಸು ವ್ಯವಸ್ಥೆಯಲ್ಲಿಯೂ ಸಹ ಕ್ರೆಡಿಟ್ ಮಾದರಿಯ ಸಹಕಾರಿ ಸಂಘಗಳು ಪ್ರಾದೇಶಿಕ ಲಾಕ್‌ಡೌನ್ ಸಮಯದಲ್ಲಿ ಸದಸ್ಯರ ಮನೆ ಬಾಗಿಲಿಗೆ ಹಣ ಪಾವತಿ ಮಾಡಿದ್ದು, ಗಮನಾರ್ಹ ಸಂಗತಿ. ದೇಶದ ಯಾವ ಮೂಲೆಯಲ್ಲಿಯೂ ಹಣದ ಕೊರತೆ ನೀಗಿಸಿ ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ತಡೆಯುವಲ್ಲಿ ಸಹಕಾರಿ ವ್ಯವಸ್ಥೆ ಗಮನಾರ್ಹ ಸೇವೆ ನೀಡಿದೆ. ಸರ್ಕಾರದೊಂದಿಗೆ ಪ್ರತಿಯೊಂದು ವಿಷಯದಲ್ಲಿ ಸಹಕಾರಿ ಸಂಸ್ಥೆ ಕೆಲಸ ಮಾಡುತ್ತಿದೆ. ಸಹಕಾರಿ ವ್ಯವಸ್ಥೆಯು ಪ್ರಧಾನ ಮಂತ್ರಿ ಮತ್ತು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಕೋಟ್ಯಂತರ ರೂಪಾಯಿ ಪರಿಹಾರ ನೀಡಿರುವುದು ಹೆಮ್ಮೆಯ ವಿಷಯ.

ಮುಖ್ಯವಾಗಿ ಸಮಾನತೆ ಸಾರಲು ಸಹಕಾರಿ ವ್ಯವಸ್ಥೆ ಬಹುತೇಕ ಒಂದು ಗ್ರಾಮ, ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಕಾರ್ಯಾಚರಿಸುತ್ತಿದೆ. ಸದಸ್ಯತ್ವ ಮಾದರಿ ಸಂಘ ಇದು. ಹಾಗೆಯೇ ಪ್ರಜಾಪ್ರಭುತ್ವ ವ್ಯವಸ್ಥೆಯ ಪ್ರತಿರೂಪವಾದ ಚುನಾವಣಾ ವ್ಯವಸ್ಥೆಯ ಮೂಲಕ ಸ್ಥಳೀಯ ಆಡಳಿತ ಮಂಡಳಿಯ ಆಯ್ಕೆ ನಡೆಯುತ್ತದೆ. ಪ್ರಾದೇಶಿಕ ಸಮತೋಲನಕ್ಕೆ ಒತ್ತು ನೀಡಿ ಸಾಮಾಜಿಕ ಮತ್ತು


37ನೇ ಪುಟಕ್ಕೆ...

# ಯಶಸ್ಸಿಗಾಗಿ ಪೆನ್ಸಿಲ್‌ನಿಂದ ಕಲಿಯಬಹುದಾದ ಐದು ಪಾಠಗಳು

- Courtesy : ಡಾ. ನಂದೀಶ ಹಿರೇಮಠ – ನಿರೂಪಣೆ : ಶ್ರೀ ರಘುನಂದನ್ ಕೆ, ಉಪಪ್ರಧಾನ ವ್ಯವಸ್ಥಾಪಕರು, ಬೆಂಗಳೂರು.

ಪೆನ್ಸಿಲ್ ಸಿದ್ಧವಾದ ನಂತರ ಅದನ್ನು ಪ್ಯಾಕ್ ಮಾಡಿ ಮಾರುಕಟ್ಟೆಗೆ ಕಳುಹಿಸುವ ಮೊದಲು ಪೆನ್ಸಿಲ್ ಮೇಕರ್ ಪೆನ್ಸಿಲ್ ಜೊತೆ ಮಾತನಾಡುತ್ತಾ "ನಾನು ನಿಮ್ಮನ್ನು ಜಗತ್ತಿಗೆ ಕಳುಹಿಸುವ ಮೊದಲು ನೀವು ತಿಳಿದುಕೊಳ್ಳಬೇಕಾದ ಐದು ವಿಷಯಗಳನ್ನು ಹೇಳುತ್ತೇನೆ, ಯಾವಾಗಲೂ ಇವುಗಳನ್ನು ನೆನಪಿಡಿ, ಆಗಮಾತ್ರ ನೀವು ಅತ್ಯುತ್ತಮ ಯಶಸ್ವಿ ಪೆನ್ಸಿಲ್ ಆಗಬಲ್ಲಿರಿ" ಎಂದನಂತೆ. ಹಾಗೂ ಮುಂದುವರೆದು ಈ ಕೆಳಗಿನಂತೆ ಐದು ವಿಷಯಗಳನ್ನು ಹೇಳಿದನಂತೆ:

1. ಇನ್ನೊಬ್ಬರ ಕೈಯಲ್ಲಿ ನಿಮ್ಮನ್ನು ನೀವು ಹಿಡಿದಿಡಲು ಅನುಮತಿಸಿದರೆ ಮಾತ್ರ ಅನೇಕ ದೊಡ್ಡ ಕೆಲಸಗಳನ್ನು ಮಾಡಲು ಸಾಧ್ಯವಾಗುತ್ತದೆ.
2. ಪ್ರತೀ ಬಾರಿ ಶಾರ್ಫ್ (shorp) ಆಗುವಾಗಲೂ ನೀವು ನೋವನ್ನು ಅನುಭವಿಸಬೇಕಾಗುತ್ತದೆ, ಆದರೆ ಉಪಯೋಗಿಸಲು ಅಗತ್ಯವಾದ ಪೆನ್ಸಿಲ್ ಆಗಲು ಇದು ಅತ್ಯಗತ್ಯ.
3. ನೀವು ಮಾಡುವ ಯಾವುದೇ ತಪ್ಪುಗಳನ್ನು (ತುದಿಯಲ್ಲಿರುವ ರಬ್ಬರ್/ eraser ಮೂಲಕ) ಸರಿಪಡಿಸುವ ಸಾಮರ್ಥ್ಯವನ್ನು ನೀವು ಹೊಂದಿದ್ದೀರಿ.
4. ಕೆಲಸಕ್ಕೆ ಉಪಯೋಗಿಸಲ್ಪಡುವ ನಿಮ್ಮ ಪ್ರಮುಖ ಭಾಗವಾದ ಸೀಸ ಯಾವಾಗಲೂ ಹೊರಕವಚದ ಒಳಗಡೆಯೇ ಇರುತ್ತದೆ.
5. ಎಂತಹದೇ ಪರಿಸ್ಥಿತಿ ಬಂದರೂ ನೀವು ಬರೆಯುವುದನ್ನು ಮುಂದುವರೆಸಬೇಕು, ನಿಮ್ಮ ಬರಹದ ಗುರುತು ಸ್ಪಷ್ಟವಾಗಿ ಅಚ್ಚಳಿಯದಂತಿರಬೇಕು.




ಪೆನ್ಸಿಲ್ ಮೇಕರ್ ಹೇಳಿದ ಮೇಲಿನ ಎಲ್ಲ ವಿಷಯಗಳ ಉದ್ದೇಶವನ್ನು ಅರ್ಥೈಸಿಕೊಂಡ ಪೆನ್ಸಿಲ್, ತಾನು ಈ ವಿಷಯಗಳನ್ನು ನೆನಪಿರಿಸಿಕೊಂಡು ಪಾಲಿಸುವುದಾಗಿ ಭರವಸೆ ನೀಡಿತು ಹಾಗೂ ಯಶಸ್ವಿಯಾಯಿತು.

* * * * *

ಈಗ ಪೆನ್ಸಿಲ್ ಜಾಗದಲ್ಲಿ ಮನುಷ್ಯರಾದ ನಾವು ನಮ್ಮನ್ನು ಇರಿಸಿಕೊಂಡು ನೋಡೋಣ, ಈ ಮೇಲ್ಕಂಡ ಐದು ಪಾಠಗಳನ್ನು ನಾವು ಅರ್ಥೈಸಿಕೊಂಡು ಪಾಲಿಸಿದರೆ ಅತ್ಯುತ್ತಮ ವ್ಯಕ್ತಿಯಾಗುತ್ತೇವೆ. ಈ ಐದು ಪಾಠಗಳು ನಮಗೆ ಹೇಳುತ್ತಿರುವ ವಿಷಯಗಳೆಂದರೆ :

1. ನಮ್ಮ ಸೃಷ್ಟಿಯ ಅಥವಾ ಬದುಕಿನ ಉದ್ದೇಶವನ್ನು ಅರ್ಥ ಮಾಡಿಕೊಳ್ಳೋಣ, ನಮ್ಮನ್ನು ನಾವು ದೇವರ ಕೈಯಲ್ಲಿ (ಸರಿ ತಪ್ಪುಗಳ ಅರಿತಿರುವ ನಮ್ಮದೇ ಅಂತರಾತ್ಮನ ಕೈಯಲ್ಲಿ) ಹಿಡಿದಿಡಲು ಅನುಮತಿಸಿದರೆ ಸರಿಯಾಗಿರಲು ಸಾಧ್ಯವಾಗುತ್ತದೆ, ನಮ್ಮಲ್ಲಿರುವ ಸದ್ಗುಣಗಳ ಉಡುಗೊರೆಯನ್ನು ಇತರರಿಗೆ ಹಂಚುವ ಮೂಲಕ ಉಳಿದವರು ನಮ್ಮೊಂದಿಗೆ ಸೇರಲು ಅನುಮತಿಸಿದರೆ ಯಶಸ್ವಿಯಾಗಲು ಸಾಧ್ಯವಾಗುತ್ತದೆ.
2. ನಮಗೆ ಬರುವ ವಿವಿಧ ಸಮಸ್ಯೆ ನೋವುಗಳನ್ನು ಎದುರಿಸಿದಾಗ ಮಾತ್ರ ನಮ್ಮ ವ್ಯಕ್ತಿತ್ವ ರೂಪಗೊಂಡು ಬಲಿಷ್ಠವಾಗಲು ಸಾಧ್ಯವಾಗುತ್ತದೆ.
3. ನಮ್ಮ ತಪ್ಪುಗಳನ್ನು ಅರಿತು ಅದನ್ನು ಸರಿಪಡಿಸಿಕೊಂಡಾಗ ಮಾತ್ರ ನಮ್ಮ ಬೆಳವಣಿಗೆ ಸಾಧ್ಯವಾಗುತ್ತದೆ.
4. ನಾವು ನಮ್ಮೊಳಗೆ ಬೆಳೆಸಿಕೊಳ್ಳುವ ಜ್ಞಾನ, ಬುದ್ಧಿ, ಸಹನೆ, ತಿಳುವಳಿಕೆ ಮುಂತಾದ ಸಮಗ್ರವಾದ ಆಂತರಿಕ ಶಕ್ತಿಯಿಂದಾಗಿ ನಮ್ಮೆಲ್ಲ ಸಾಧನೆಗಳು ಸಾಧ್ಯವಾಗುತ್ತದೆ.
5. ಯಾವುದೇ ಪರಿಸ್ಥಿತಿಯಿರಲಿ, ಪ್ರಯತ್ನಗಳನ್ನು ಬಿಡದೆ ನಾವು ನಮ್ಮ ಗುರುತನ್ನು ಉಳಿಸುವಂತಹ ಸೇವೆ, ಕಾರ್ಯಗಳನ್ನು ಮಾಡಿದಾಗ ಮಾತ್ರ ಅಚ್ಚಳಿಯದಂತೆ ಬೆಳೆಯುತ್ತೇವೆ, ಉಳಿಯುತ್ತೇವೆ.

ನಮ್ಮ ಆಲೋಚನೆಯನ್ನು ಪ್ರಚೋದಿಸುವ ಈ ಪೆನ್ಸಿಲ್ ಪಾಠ ನಮಗೆಷ್ಟು ಅರ್ಥವಾಗಿದೆ ಎಂದು ಈಗ ಒಂದು ಕ್ಷಣ ಯೋಚಿಸಿ, ಇದನ್ನು ಅರ್ಥೈಸಿಕೊಂಡು ನಾವೆಲ್ಲರೂ ಒಂದು ವಿಶಿಷ್ಟ ಉದ್ದೇಶಕ್ಕಾಗಿ, ವಿಶೇಷ ಕಾರ್ಯಕ್ಕಾಗಿ ಸಿದ್ಧ ಮಾಡಲ್ಪಟ್ಟ ಪೆನ್ಸಿಲ್‌ಗಳೇ ಆಗಿದ್ದೇವೆಂದು ಅರಿಯುವ ಮೂಲಕ, ಪೆನ್ಸಿಲ್ ಪಾಠಗಳನ್ನು ನೆನಪಿಟ್ಟು ಪಾಲಿಸುವ ಮೂಲಕ ನಮ್ಮ ಜೀವನವನ್ನು ಸಾರ್ಥಕವಾಗಿಸಲು ಪ್ರಯತ್ನಿಸೋಣ.

**We Are Made to Do Great Things...!!**

.....36ನೇ ಪುಟದಿಂದ

ಆರ್ಥಿಕ ಅಭಿವೃದ್ಧಿಗೆ ಸಹಕಾರಿ ರಂಗ ಅದ್ಭುತ ಕೊಡುಗೆ ನೀಡುತ್ತಿದ್ದು, ಈ ವ್ಯವಸ್ಥೆಯು ಇನ್ನಷ್ಟು ಅಭಿವೃದ್ಧಿಯಾಗಿ ಮಧ್ಯವರ್ತಿ ಹಾವಳಿ ತಪ್ಪಿ, ಪ್ರಾದೇಶಿಕವಾಗಿ ಉತ್ಪನ್ನಗಳು ಹೆಚ್ಚಿ, ಮಾರುಕಟ್ಟೆಯ ವ್ಯವಸ್ಥೆ ಸದೃಢವಾಗಿ ದೇಶವ್ಯಾಪಿ ಸಹಕಾರಿ ಜಾಲ ವಿಸ್ತರಿಸುವ ಅವಶ್ಯಕತೆ ಇದೆ. ಯಾವ ವಸ್ತು ಮತ್ತು ಸೇವೆಗೆ Globalisation ನ ಅಗತ್ಯವಿದೆ ಎನ್ನುವುದನ್ನು ವರ್ಗೀಕರಿಸುವ ಚಿಂತನೆಗೆ ಕೊರೋನಾ ವೈರಸ್ ಎಚ್ಚರಿಸಿದೆ. ಆ ಕಾರಣ ಪ್ರಾದೇಶಿಕ ಬೇಡಿಕೆ ಮತ್ತು ಪೂರೈಕೆಯಲ್ಲಿ ಸಹಕಾರಿ ವ್ಯವಸ್ಥೆ ಹೆಚ್ಚು ಬದ್ಧತೆಯನ್ನು ತೋರುತ್ತದೆ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗಿದೆ.

ಸ್ಥಳೀಯ ಉತ್ಪಾದನೆ, ಬೇಡಿಕೆ ಮತ್ತು ಪೂರೈಕೆಯ ಮೂಲತತ್ವದ ಸಹಕಾರಿ ವ್ಯವಸ್ಥೆ ಕೃಷಿ, ಹೈನುಗಾರಿಕೆ, ಗುಡಿಕೈಗಾರಿಕೆ, ಸಣ್ಣಕೈಗಾರಿಕೆ, ಕರಕುಶಲ ಉತ್ಪಾದನೆಗೆ ಸಾಲಸೌಲಭ್ಯ ಒದಗಿಸುವಲ್ಲಿ ಮುಂಚೂಣಿಯಲ್ಲಿದ್ದು, ಹನಿಗೂಡಿ ಹಳ್ಳ ಎನ್ನುವುದನ್ನು ಸಾಬೀತು ಪಡಿಸಿದೆ. ಸ್ವಾವಲಂಬಿ ಬದುಕು ಎಂದಿಗೂ, ಎಂತಹ ಸಾಮಾಜಿಕ ಸ್ಥಿತ್ಯಂತರಕ್ಕೂ ಬೆದರುವುದಿಲ್ಲ. ಅತಿಯಾದ ಕೊಳ್ಳುಬಾಕ ಮನಸ್ಥಿತಿಯಿಂದಾಗಿ ಅಗತ್ಯಕ್ಕಿಂತ ಅನಗತ್ಯಗಳೇ ಮನೆತುಂಬುತ್ತಿವೆ. ಕಸ ತಿನ್ನುವುದಕ್ಕಿಂತ ತುಸು ತಿನ್ನುವುದು ಲೇಸು ಎನ್ನುವುದನ್ನು ಕೊರೋನಾ ದೃಢಪಡಿಸಿದೆ. ತೀರ ಬಿಕ್ಕಟ್ಟಿನ ಸ್ಥಿತಿಯಲ್ಲೂ ಆರ್ಥಿಕ ಸ್ಥಿತಿ ಕಾಯ್ದುಕೊಳ್ಳುವಲ್ಲಿ ಈ ದೇಶದ ಸಹಕಾರಿ ಕ್ಷೇತ್ರ ಕ್ರೀಯಾಶೀಲವಾಗಿದೆ. ಪ್ರಜಾಪ್ರಭುತ್ವ ಮಾದರಿಯ ಆಡಳಿತ, ಸರ್ಕಾರದ ಪ್ರೋತ್ಸಾಹ ಮತ್ತು ಸದಸ್ಯರ ಉತ್ತೇಜನ ದೊರೆತಲ್ಲಿ ಸಹಕಾರಂ ಗೆಲ್ಗೆ ಶತಃ ಸಿದ್ಧ.

# ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ-3)

# PARTICIPATION OF COOPERATIVES IN ACHIEVING SUSTAINABLE DEVELOPMENT GOALS - SDGs (Part-3)



– ಶ್ರೀ ಯಶವಂತ ಡೋಂಗ್ರೆ

**ಎಸ್‌ಡಿಜಿ 3 : ಆರೋಗ್ಯವಂತ ಜೀವನವನ್ನು ಖಚಿತಪಡಿಸುವುದು ಮತ್ತು ಎಲ್ಲ ವಯಸ್ಸಿನ ಎಲ್ಲ ಜನರ ಪುರೋಭಿವೃದ್ಧಿಯನ್ನು ಉತ್ತೇಜಿಸುವುದು (Ensure healthy lives and promote well-being for all at all ages)**

ಉತ್ತಮ ಆರೋಗ್ಯ ಮನುಷ್ಯನ ಅತ್ಯಮೂಲ್ಯ ಆಸ್ತಿಗಳಲ್ಲಿ ಒಂದೆನ್ನಬಹುದು. ಆರೋಗ್ಯವಂತ ಜನರು ಅವರ, ಅವರ ಕುಟುಂಬದ ಮತ್ತು ಸಮಾಜದ ವಿವಿಧ ಅಗತ್ಯಗಳಿಗೆ ಸ್ಪಂದಿಸುವುದು ಸಾಧ್ಯ. ಆದುದರಿಂದಲೇ ಜಾಗತಿಕ ಮಟ್ಟದಲ್ಲಿ ವಿವಿಧ ಬಗೆಯ ಸಮಸ್ಯೆಗಳನ್ನು ನಿರ್ಮೂಲನೆ ಮಾಡಲು ಮತ್ತು ಸಾರ್ವತ್ರಿಕ ಶಾಂತಿಯನ್ನು ಬಲಪಡಿಸಲು ಆರೋಗ್ಯವಂತ ಜನಸಮುದಾಯದ ಅಗತ್ಯವಿದೆ. ಬಡತನ ಮತ್ತು ಹಸಿವಿನ ನಿರ್ಮೂಲನೆಯ ಜೊತೆಗೆ ಉತ್ತಮ ಆರೋಗ್ಯವು ಲಿಂಗ ತಾರತಮ್ಯ ವಿಲ್ಲದೆ ಎಲ್ಲ ಪ್ರದೇಶದ, ಎಲ್ಲ ವಯಸ್ಸಿನ ಎಲ್ಲ ಜನರಿಗೆ ದೊರೆಯಬೇಕೆಂಬುದು ಎಸ್‌ಡಿಜಿ 3ರ ಆಶಯವಾಗಿದೆ. ಈ ಗುರಿಯು ಜನರ ದೈಹಿಕ ಮತ್ತು ಮಾನಸಿಕ ಆರೋಗ್ಯದ ರಕ್ಷಣೆಯ ಮೂಲಕ ಅವರ ಜೀವಿತಾವಧಿಯನ್ನು ವಿಸ್ತರಿಸುವ ಉದ್ದೇಶ ಹೊಂದಿದೆ. ಗುಣಮಟ್ಟದ ಆರೋಗ್ಯ ಸೇವೆಗಳ ಲಭ್ಯತೆ, ಜೀವ ರಕ್ಷಕ ಮತ್ತು ಆರೋಗ್ಯ ಕವಚ ಒದಗಿಸಬಲ್ಲ ಲಸಿಕೆಗಳು ಎಲ್ಲ ಜನರಿಗೂ ಒದಗುವಂತೆ ಮಾಡುವುದು, ಕೈಗೆಟಕುವ ದರದಲ್ಲಿ ಔಷಧಿಗಳು ದೊರೆಯುವಂತೆ ಮಾಡುವುದು, ಹೀಗೆ ಸಾರ್ವತ್ರಿಕ ಆರೋಗ್ಯ ರಕ್ಷಣೆಯನ್ನು ಸಾಧಿಸುವತ್ತ ಈ ಗುರಿಯು ಒತ್ತು ನೀಡುತ್ತದೆ.

2030ರ ವೇಳೆಗೆ ಜಗತ್ತಿನಾದ್ಯಂತ ಮತ್ತು ವಿಶೇಷವಾಗಿ ಬಡ ದೇಶಗಳಲ್ಲಿ ನವಜಾತ ಮಕ್ಕಳ ಮತ್ತು ಬಾಣಂತಿಯರ ಸಾವನ್ನು ನಿಯಂತ್ರಿಸಿ ಪ್ರತಿ ಒಂದು ಲಕ್ಷದಲ್ಲಿ 70ಕ್ಕಿಂತ ಹೆಚ್ಚು ಸಾವು ಸಂಭವಿಸದಂತೆ ತಡೆಯಬೇಕೆಂದು ಈ ಗುರಿಯು ನಿಗದಿಪಡಿಸಿದೆ. ಯಾವುದೇ ಆರ್ಥಿಕ, ಸಾಮಾಜಿಕ ಅಥವ ಧಾರ್ಮಿಕ ಅಂಶಗಳ ಆಧಾರದಲ್ಲಿ ತಾರತಮ್ಯವಿಲ್ಲದೆ ಪ್ರತಿಯೊಬ್ಬರಿಗು ಕುಟುಂಬ ಯೋಜನೆ, ಲೈಂಗಿಕ ಮತ್ತು ಸಂತಾನೋತ್ಪತ್ತಿ ಕುರಿತ ಮಾಹಿತಿ ಮತ್ತು ಜ್ಞಾನ ನೀಡಿಕೆ ಅಗತ್ಯವೆಂದೂ ಈ ಗುರಿಯು ವಿಧಿಸುತ್ತದೆ. ಸಾಂಕ್ರಾಮಿಕ ರೋಗಗಳ ವಿರುದ್ಧ ರಕ್ಷಣೆ ಮತ್ತು ಅಂತಹ ರೋಗಗಳು ಹರಡದಂತೆ ಮಾಡಲು ಸರಕಾರಗಳು ಮತ್ತು ವಿವಿಧ ಸಂಘಟನೆಗಳು ನಿರ್ವಹಿಸಬೇಕಾದ ಪಾತ್ರ, ಹಾಗೂ ಸಾಂಕ್ರಾಮಿಕವಲ್ಲದ ಆದರೆ ಜೀವಹಾನಿಗೆ ಕಾರಣವಾಗಬಲ್ಲ ಎಚ್‌ಐವಿ/ಏಡ್ಸ್, ಕ್ಯಾನ್ಸರ್, ಮಧುಮೇಹ ಮುಂತಾದ ಕಾಯಿಲೆಗಳನ್ನು ತಡೆಯುವ ಬಗೆಗಿನ ಕಾರ್ಯತಂತ್ರಗಳ ಬಗ್ಗೆಯೂ ಗುರಿಗಳನ್ನು ನಿಗದಿಮಾಡಲಾಗಿದೆ. ಹಾಗೆಯೇ ಆರೋಗ್ಯಕ್ಕೆ ಹಾನಿಕಾರಕವಾದ ಧೂಮಪಾನ, ಮದ್ಯಪಾನ ಮತ್ತು ಪ್ರಮುಖವಾಗಿ ಮಾದಕದ್ರವ್ಯಗಳ ಸೇವನೆಗಳನ್ನು ತಡೆಗಟ್ಟಲು ಕ್ರಮ ತೆಗೆದುಕೊಳ್ಳುವ ಬಗ್ಗೆಯೂ ಈ ಗುರಿಯಲ್ಲಿ ಗಮನಹರಿಸಲಾಗಿದೆ.

ಆರೋಗ್ಯ ಸಮಸ್ಯೆ ವಿವಿಧ ದೇಶಗಳ ಸುಸ್ಥಿರ ಅಭಿವೃದ್ಧಿಯಲ್ಲಿ ದೊಡ್ಡ ತೊಡಕಾಗಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಕಳೆದ ಒಂದೆರಡು ದಶಕಗಳಲ್ಲಿ ಜಗತ್ತಿನ ಸರಾಸರಿ ಆರೋಗ್ಯ ಸ್ಥಿತಿಯಲ್ಲಿ ಸಾಕಷ್ಟು ಸುಧಾರಣೆಯಾಗಿದ್ದರೂ ವಿವಿಧ ದೇಶಗಳ ನಡುವೆ ಮತ್ತು ಹಲವು ದೇಶಗಳಲ್ಲಿ ವಿವಿಧ ಪ್ರದೇಶಗಳ ನಡುವೆ ಆರೋಗ್ಯ ಸ್ಥಿತಿ ಮತ್ತು ಆರೋಗ್ಯ ಪರಿಕರಗಳ ಲಭ್ಯತೆಯ ವಿಷಯದಲ್ಲಿ ಸಾಕಷ್ಟು ಅಂತರವಿರುವುದು ಒಂದು ದೊಡ್ಡ ಸವಾಲಾಗಿದೆ. ಈ ಸವಾಲನ್ನು ಮೀರಿ ಸಾರ್ವತ್ರಿಕ ಆರೋಗ್ಯ ಕವಚವೊಂದನ್ನು ನಿರ್ಮಿಸಬೇಕಾದರೆ ವ್ಯಕ್ತಿಗಳು ಮತ್ತು ಸಂಸ್ಥೆಗಳು ಪರಸ್ಪರ ಸಹಕಾರದಿಂದ ಕಾರ್ಯ ನಿರ್ವಹಿಸುವುದು ಅಗತ್ಯ. "ಸಹಕಾರವೇ ಆರೋಗ್ಯ ರಕ್ಷಣೆಯ ಮೂಲ ಮಂತ್ರ" ಎಂದು ಜಾಗತಿಕ ಆರೋಗ್ಯ ಸಂಸ್ಥೆಯು ಅಭಿಪ್ರಾಯ ಪಟ್ಟಿರುವುದು ಈ ಹಿನ್ನೆಲೆಯಲ್ಲಿಯೇ.

**ಸಹಕಾರಿ ಸಂಘಟನೆಗಳ ಪಾತ್ರ :**

ಐಸಿಎ ಮತ್ತು ಯುರಿಕ್ ಸಂಸ್ಥೆಗಳ ಸಹಯೋಗದಲ್ಲಿ 2018ರಲ್ಲಿ ನಡೆದ ಅಧ್ಯಯನವೊಂದರ ಪ್ರಕಾರ ಕಳೆದ ಎರಡು ದಶಕಗಳಲ್ಲಿ ಜಗತ್ತಿನಾದ್ಯಂತ ಆರೋಗ್ಯ ಸಹಕಾರ ಸಂಘಗಳು ವೇಗವಾಗಿ ಬೆಳೆಯುತ್ತಿರುವುದು ಗಮನಕ್ಕೆ ಬಂದಿದೆ. ಇದು ಸರಕಾರೀ ಮತ್ತು ಖಾಸಗಿ ಆರೋಗ್ಯ ಕೇಂದ್ರಗಳಿಗೆ ಪೂರಕವಾಗಿ ಮತ್ತು ಹಲವೆಡೆ ಪರ್ಯಾಯವಾಗಿ ಜನರು ಸ್ವಸಹಾಯ ನೆಲೆಯಲ್ಲಿ ಆರೋಗ್ಯ ರಕ್ಷಣೆಯ ಬಗ್ಗೆ ವಹಿಸುತ್ತಿರುವ ಕಾಳಜಿ ಮತ್ತು ಆರೋಗ್ಯ ರಕ್ಷಣಾ ವ್ಯವಸ್ಥೆಗಳನ್ನು ಬಲಪಡಿಸಲು ಇರುವ ಅವಕಾಶಗಳನ್ನು ತೋರಿಸುತ್ತದೆ.

ಹಾಗೆಯೇ ಆರೋಗ್ಯ ಸೇವೆಗಳಿಗೆ ಇರುವ ಬೇಡಿಕೆ ಹೆಚ್ಚುತ್ತಿರುವುದರಿಂದ ಹಾಲಿ ಇರುವ ಆರೋಗ್ಯ ರಕ್ಷಣಾ ಸಂಸ್ಥೆಗಳು ಅಗತ್ಯ ಸೇವೆಗಳನ್ನು ಎಲ್ಲರಿಗೂ ಒದಗಿಸಲು ಸಾಧ್ಯವಿಲ್ಲ ಎನ್ನುವುದೂ ಅರಿವಿಗೆ ಬರುತ್ತದೆ. ಭಾರತದಂತಹ ದೇಶದಲ್ಲಿ ಒಂದೆಡೆ ಸರಕಾರೀ ಆಸ್ಪತ್ರೆಗಳ ಅವ್ಯವಸ್ಥೆ, ಇನ್ನೊಂದೆಡೆ ಖಾಸಗಿ ಆಸ್ಪತ್ರೆಗಳಲ್ಲಿನ ಅಧಿಕ ವೆಚ್ಚ ಇವುಗಳನ್ನು ಗಮನಿಸಿದಾಗ ಸಹಕಾರಿ ಮಾದರಿಯ ಆರೋಗ್ಯ ಸೇವೆಯನ್ನು ಆರಂಭಿಸಲು ದೊಡ್ಡ ಅವಕಾಶವಿರುವುದು ಸ್ಪಷ್ಟವಾಗುತ್ತದೆ.

2001ರ ನಂತರ ಅದರಲ್ಲೂ ವಿಶೇಷವಾಗಿ 2007–08ರ ಆರ್ಥಿಕ ಕುಸಿತದ ನಂತರ ಹಲವಾರು ದೇಶಗಳಲ್ಲಿ ವೈದ್ಯಕೀಯ ಸೇವೆಗೆ ಸಹಕಾರಿ ಮಾರ್ಗವನ್ನು ಅನುಸರಿಸುವುದು ಹೆಚ್ಚಾಗಿದ್ದು, ಇಂದು ಅನೇಕ ದೇಶಗಳಲ್ಲಿ ವೈದ್ಯಕೀಯ ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಇವು ಕೆಲವೆಡೆ ವೈದ್ಯರ ಸಹಕಾರಿ ಸಂಘದ ರೂಪದಲ್ಲಿದ್ದರೆ, ಇನ್ನು ಕೆಲವೆಡೆ ವೈದ್ಯಕೀಯ ಕೆಲಸಗಾರರ ಸಹಕಾರಿ ಸಂಘವಾಗಿ ಮತ್ತು ಹಲವೆಡೆ ವೈದ್ಯರು, ವೈದ್ಯಕೀಯ ಕಾರ್ಮಿಕರು ಮತ್ತು ಸಾರ್ವಜನಿಕರು ಒಟ್ಟಾಗಿ ಕಟ್ಟಿಕೊಂಡಿರುವ ಸಹಕಾರಿ ಸಂಘಗಳಾಗಿವೆ. ಉದಾಹರಣೆಗೆ ಬ್ರೇಜಿಲ್‌ನಲ್ಲಿ ವೈದ್ಯರ ಸಹಕಾರಿ ಮಾದರಿ ವ್ಯಾಪಕವಾಗಿದೆ. ಯುನಿಡೊಮೆಡ್ ಡೊ ಬ್ರೆಸಿಲ್ 1,14,000 ವೈದ್ಯ ಸದಸ್ಯರನ್ನು, ಸುಮಾರು ಒಂದು ಲಕ್ಷದಷ್ಟು ಕೆಲಸಗಾರರನ್ನು ಹೊಂದಿದ್ದು, 18 ಮಿಲಿಯನ್ ಜನರಿಗೆ ಆರೋಗ್ಯ ಸೇವೆಯನ್ನು ಒದಗಿಸುತ್ತಿದೆ. ಆಸ್ಟ್ರೇಲಿಯಾದ ರಾಷ್ಟ್ರೀಯ ಆರೋಗ್ಯ ಸಹಕಾರಿ ಸಂಸ್ಥೆಯು ವೈದ್ಯಕೀಯ ಕಾರ್ಮಿಕರ ಸಹಕಾರಿ ಸಂಘವಾಗಿದ್ದು, ಇದು ಶ್ರಮಿಕ ಸಮುದಾಯಕ್ಕೆ ಕೈಗೆಟಕುವ ದರಗಳಲ್ಲಿ ವೈದ್ಯಕೀಯ ಮತ್ತು ಆರೋಗ್ಯ ಸೇವೆಗಳನ್ನು ಒದಗಿಸುತ್ತಿದೆ. ಇದು ಕ್ಯಾನ್ಬೆರ ಪ್ರದೇಶದ ಅತಿದೊಡ್ಡ ವೈದ್ಯಕೀಯ ಸೇವೆಗಳ ಪೂರೈಕೆದಾರ ಸಂಸ್ಥೆಯಾಗಿದ್ದು ವರ್ಷಕ್ಕೆ ಸುಮಾರು 43,000 ರೋಗಿಗಳಿಗೆ ಸೇವೆ ಒದಗಿಸುತ್ತಿದೆ. ಲೆಸೊಥೋದಲ್ಲಿ ಗ್ರಾಮೀಣ ಆರೋಗ್ಯ ಕಾರ್ಮಿಕರ ಸಹಕಾರಿ ಸಂಘವು ಹಲವು ಉಳಿತಾಯ ಮತು ಸಾಲ ಯೋಜನೆಗಳ ಮೂಲಕ ಗ್ರಾಮೀಣ ಪ್ರದೇಶಗಳ ಕಡಿಮೆ ಆದಾಯ ವರ್ಗದ ಜನರಿಗೆ ಮೂಲಭೂತ ಆರೋಗ್ಯ ಸೇವೆಗಳನ್ನು ತಲುಪಿಸುವ ಕೆಲಸದಲ್ಲಿ ನಿರತನಾಗಿದೆ.

ಆರೋಗ್ಯ ಸೇವೆಗೆ ಸಂಬಂಧಿಸಿದಂತೆ ಇರುವ ಇನ್ನೊಂದು ಪ್ರಮುಖ ಸಹಕಾರಿ ಮಾದರಿ ಎಂದರೆ ಆಂಬುಲೆನ್ಸ್ ಸಹಕಾರಿ ಸಂಘಗಳು. ಈ ಪ್ರಕಾರದ ಸಹಕಾರಿ ಸಂಘದ ಉತ್ತಮ ಉದಾಹರಣೆ ಎಂದರೆ ಕೆನಡದ ಕ್ವಿಬೆಕ್ ಪ್ರದೇಶದಲ್ಲಿರುವ 'ಲಾ ಕೋಆಪರೇಟಿವ್ ಡೆಸ್ ಟೆಕ್ನಿಷಿಯನ್ಸ್ ಆಂಬುಲಾನ್ಸಿಯರ್ಸ್ ಡು ಕ್ವಿಬೆಕ್. 1980ರಲ್ಲಿ ಹಲವು ಖಾಸಗಿ ಸಂಸ್ಥೆಗಳು ಪುನರ್‌ಸಂಘಟಿಸಲ್ಪಟ್ಟಾಗ ಕಾರ್ಮಿಕರು ಸೇರಿ ರಚಿಸಿದ ಈ ಸಹಕಾರಿ ಸಂಘ ಇಂದು ಕೆನೆಡ ದೇಶದ ಅತ್ಯಂತ ಪ್ರತಿಷ್ಟಿತ ಆಂಬುಲೆನ್ಸ್ ಸೇವಾ ಸಂಸ್ಥೆಯಾಗಿದೆ. ಈ ಸಹಕಾರಿ ಸಂಘವು ಕಾರ್ಮಿಕ ಸಹಕಾರಿ ಸಂಘವಾಗಿರುವುದರಿಂದ ಸದಸ್ಯರೇ ಕೆಲಸಗಾರರಾಗಿ ನಡೆಸಿಕೊಂಡು ಬರುತ್ತಿರುವ ಉತ್ತಮ ಸಹಕಾರಿ ಮಾದರಿಯಾಗಿದೆ.

ಔಷಧೀಯ ಸಹಕಾರಿ ಸಂಘಗಳು (ಫಾರ್ಮಸಿಟಿಕಲ್ ಕೋಆಪರೇಟಿವ್ಸ್), ಆರೋಗ್ಯ ಸೇವೆಗೆ ಸಂಬಂಧಿಸಿದಂತೆ ಯೂರೋಪಿನ ಬೆಲ್ಜಿಯಂ, ಸ್ಪೇನ್ ಮತ್ತು ಇಟಲಿ ದೇಶಗಳಲ್ಲಿ ಕಂಡುಬರುವ ಇನ್ನೊಂದು ಬಗೆಯ ಸಹಕಾರಿ ಸಂಘಗಳು. ಮೂಲಭೂತವಾಗಿ ಇವು ಔಷಧಿ ಉತ್ಪಾದನಾ ಮತ್ತು ವಿತರಣಾ ಚಟುವಟಿ–ಕೆಗಳಲ್ಲಿ ನಿರತವಾಗಿವೆ. 'ಆಫೀಸ್ ಡೆಸ್ ಫಾರ್ಮಸೀಸ್ ಕೋಆಪರೇಟಿವ್ ಡೆ ಬೆಲ್ಜಿಕ್', 616 ಔಷಧಿ ಉತ್ಪಾದಕ ಸಂಸ್ಥೆಗಳ ಫೆಡರಲ್ ಸಹಕಾರಿಯಾಗಿದ್ದು ಬೆಲ್ಜಿಯಂನ ಔಷಧಿ ಮಾರುಕಟ್ಟೆಯ ಶೇಕಡ 12ರಷ್ಟು ವ್ಯವಹಾರ ಹೊಂದಿದೆ. ಈ ಸಹಕಾರಿಯು ವಾರ್ಷಿಕ ಸುಮಾರು 2.2 ಮಿಲಿಯನ್ ಜನರಿಗೆ ಔಷಧಿಗಳನ್ನು ಪೂರೈಸುತ್ತಿದ್ದು, ಸುಮಾರು 600 ಮಿಲಿಯನ್ ಯೂರೋಗಳಷ್ಟು ವಹಿವಾಟು ನಡೆಸುತ್ತಿದೆ.

ಆರೋಗ್ಯ ಸೇವೆಗಳಿಗೆ ಸಂಬಂಧಿಸಿದಂತೆ ಸಹಕಾರಿ ಮಾರ್ಗದ ಇನ್ನೊಂದು ಪ್ರಮುಖ ಪ್ರಕಾರವೆಂದರೆ ಆರೋಗ್ಯ ಸೇವೆಗಳ ಗ್ರಾಹಕ ಸಹಕಾರಿ ಸಂಘಗಳು. ಸಾಧಾರಣವಾಗಿ, ಸುಲಭವಾಗಿ ಆರೋಗ್ಯಸೇವೆ ಲಭ್ಯವಾಗದ ಪ್ರದೇಶಗಳಲ್ಲಿ (ಉದಾಹರಣೆಗೆ ಗ್ರಾಮೀಣ ಪ್ರದೇಶ) ವಾಸಿಸುವ ಜನ, ಹಿರಿಯ ನಾಗರೀಕರು, ದೀರ್ಘಾವಧಿ ವೈದ್ಯಕೀಯ ಸೇವೆ ಬೇಕಾಗುವ ಕಾಯಿಲೆಗಳಿಗೆ ತುತ್ತಾದವರು ಮುಂತಾದವರು ಸದಸ್ಯರಾಗಿ ಗ್ರಾಹಕ ಸಹಕಾರಿ ಸಂಘಗಳ ಮಾದರಿಯಲ್ಲಿ ನಡೆಯುತ್ತಿರುವ ಈ ಸಹಕಾರಿ ಸಂಸ್ಥೆಗಳು ಮುಖ್ಯವಾಗಿ ಕೆನಡ ಮತ್ತು ಜಪಾನ್ ದೇಶಗಳಲ್ಲಿ ಕಂಡುಬರುತ್ತವೆ.

ಕೆನಡದಲ್ಲಿ ಗ್ರಾಹಕ ಸಹಕಾರಿ ಸಂಘಗಳು ಬಹು ಹಿಂದಿನಿಂದಲೂ (1947ರಿಂದ) ವಿವಿಧ ವೈದ್ಯಕೀಯ ಸೇವೆಗಳನ್ನು ಸದಸ್ಯ ಗ್ರಾಹಕರಿಗೆ ಒದಗಿಸುತ್ತಾ ಬಂದಿವೆ. ಇತ್ತೀಚಿನ ವರ್ಷಗಳಲ್ಲಿ ಆರೋಗ್ಯ ಸೇವೆಗಳನ್ನು ಒದಗಿಸುವಲ್ಲಿ ಹೊಸ ಆವಿಷ್ಕಾರಗಳನ್ನು ಮಾಡಿರುವ ದೇಶವೆಂದರೆ ಜಪಾನ್. ಜಪಾನಿನ 111 ವೈದ್ಯಕೀಯ ಸಹಕಾರಿ ಸಂಘಗಳು ಸೇರಿ ಆರೋಗ್ಯ ಸಹಕಾರಿ ಒಕ್ಕೂಟವನ್ನು ಸ್ಥಾಪಿಸಿಕೊಂಡಿದ್ದು ಸುಮಾರು 3 ಮಿಲಿಯನ್ ಸದಸ್ಯರಿಗೆ ಆರೋಗ್ಯ ಸೇವೆ ಒದಗಿಸುತ್ತಿವೆ. ಒಕ್ಕೂಟದಡಿಯಲ್ಲಿ ಹಾಲಿ 75 ಆಸ್ಪತ್ರೆಗಳು, 337 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 70 ದಂತ ವೈದ್ಯಕೀಯ ಕೇಂದ್ರಗಳು ಮತ್ತು 28 ವಿಶೇಷ ಶುಶ್ರೂಷಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಈ ಆರೋಗ್ಯ ಸಹಕಾರಿ ಸಂಘಗಳು ಮುಖ್ಯವಾಗಿ ಹಿರಿಯ ನಾಗರೀಕರು ಮತ್ತು ಗ್ರಾಮೀಣ ಪ್ರದೇಶದ ಜನರಿಗೆ ಆರೋಗ್ಯ ಸೇವೆಗಳನ್ನು ಒದಗಿಸುತ್ತಿವೆ.

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 40
Licensed to post without Prepayment License No. PMG BG/WPP-384/2020-2022.

ಆರೋಗ್ಯ ಸಹಕಾರ ಸಂಘಗಳ ಮುಖ್ಯ ಲಕ್ಷಣವೆಂದರೆ ವೈದ್ಯರು, ದಾದಿಯರು, ಇತರ ವೈದ್ಯಕೀಯ ವೃತ್ತಿಪರರು, ರೋಗಿಗಳು ಹೀಗೆ ಎಲ್ಲರ ಭಾಗವಹಿಸುವಕೆ ಮತ್ತು ಸದಸ್ಯತ್ವ ಇರುವುದು. ಈ ವೈದ್ಯಕೀಯ ಸಂಸ್ಥೆಗಳು ಸರಕಾರ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಸಮುದಾಯದೊಂದಿಗೆ ನಿಕಟ ಸಂಪರ್ಕ ಹೊಂದಿ ಕೆಲಸ ನಿರ್ವಹಿಸುತ್ತವೆ. ಸಧಾರಣವಾಗಿ ಆರೋಗ್ಯ ಸೇವೆಯಿಂದ ಹೊರಗುಳಿಯುವ ಎಚೈವಿ/ಏಡ್ಸ್ ರೋಗಿಗಳು, ಲೈಂಗಿಕ ರೋಗಿಗಳು ಅದರಲ್ಲೂ ವಿಶೇಷವಾಗಿ ಲೈಂಗಿಕ ಕಾರ್ಯಕರ್ತರು, ನಿರಾಶ್ರಿತರು ಮತ್ತು ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿರುವ ನಗರ ಮತ್ತು ಗ್ರಾಮೀಣ ಪ್ರದೇಶದ ಬಡಜನರು ಮುಂತಾದವರಿಗೆ ಆರೋಗ್ಯ ಸೇವೆಯನ್ನು ತಲುಪಿಸುವ ಅತ್ಯಂತ ಯಶಸ್ವಿ ಪ್ರಕಾರವಾಗಿ ಆರೋಗ್ಯ ಸಹಕಾರಿ ಸಂಘಗಳು ಪ್ರಪಂಚದ ವಿವಿಧ ಭಾಗಗಳಲ್ಲಿ ಕೆಲಸಮಾಡುತ್ತಾ ಬಂದಿವೆ. ಆದುದರಿಂದಲೇ ಎಸ್ಡಿಜಿ 3ರ ಗುರಿಗಳನ್ನು ತಲುಪಬೇಕಾದರೆ ಸಹಕಾರಿ ಮಾದರಿ ಆರೋಗ್ಯಸೇವೆಯು ಬಹು ಅಗತ್ಯವಾಗಿದೆ.

ಭಾರತದಲ್ಲಿ ವೈದ್ಯಕೀಯ ಸೇವೆಯ ಅಗತ್ಯ ಮತ್ತು ಬೇಡಿಕೆ ಬಹಳವಿದ್ದು, ಆರೋಗ್ಯ ಸವಲತ್ತುಗಳ (ಹೆಲ್ತ್ ಇನ್ಫ್ರಾಸ್ಟ್ರಕ್ಚರ್) ಲಭ್ಯತೆ ಕಡಿಮೆ ಇದೆ. ಆದಾಗ್ಯೂ ಸಹಕಾರಿ ಕ್ಷೇತ್ರದ ಭಾಗವಹಿಸುವಿಕೆ ಅಷ್ಟಾಗಿ ಕಂಡು ಬರುವುದಿಲ್ಲ. ಇತ್ತೀಚಿನ ವರ್ಷಗಳಲ್ಲಿ ಕೇರಳ ರಾಜ್ಯದಲ್ಲಿ ಹಲವು ವೈದ್ಯಕೀಯ ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಕರ್ನಾಟಕದಲ್ಲೂ ಕೆಲವು ಸಹಕಾರಿ ಆರೋಗ್ಯ ಸಂಸ್ಥೆಗಳಿವೆ, ಆದರೆ ಅವಕಾಶಗಳು ಮತ್ತು ಅಗತ್ಯವನ್ನು ಗಮನಿಸಿದಾಗ ಈ ಕ್ಷೇತ್ರ ಇನ್ನೂ ಬೆಳೆಯಬೇಕಾಗಿದೆ. ಈ ಹಿನ್ನೆಲೆಯಲ್ಲಿ ಗಮನಿಸಿದರೆ ನಮ್ಮ ಸಹಕಾರಿ ಕ್ಷೇತ್ರವು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬಹುದಾಗಿದೆ.

1. ಎಲ್ಲ ಸಹಕಾರಿ ಯೂನಿಯನ್/ಮಹಾಮಂಡಳಗಳು ಆರೋಗ್ಯ ಸಹಕಾರಿ ಸಂಘಗಳ ಸ್ಥಾಪನೆಗೆ ಕ್ರಮ ಕೈಗೊಳ್ಳಬೇಕು.
2. ರಾಜ್ಯ ಸರಕಾರಗಳು ಆರೋಗ್ಯ ಸಹಕಾರ ಸಂಘಗಳಿಗೆ ವಿಶೇಷ ಸಹಾಯ ಯೋಜನೆಗಳನ್ನು ಚಾಲ್ತಿಗೆ ತರಬೇಕು
3. ಹಲವು ಸಹಕಾರಿ ಸಂಘಗಳು ಒಟ್ಟಾಗಿ ಹೊಸ ಆರೋಗ್ಯ ಸಹಕಾರಿ ಸಂಘಗಳನ್ನು ಸ್ಥಾಪಿಸುವ ಕುರಿತು ಯೋಜನೆ ರೂಪಿಸಬಹುದು.
4. ವಿವಿಧ ಬಗೆಯ ಸಹಕಾರಿ ಸಂಘಗಳು ವೈದ್ಯಕೀಯ ಸೇವೆಗಳನ್ನು ತಮ್ಮ ವ್ಯವಹಾರ ಚಟುವಟಿಕೆಗಳಲ್ಲಿ ಸೇರಿಸಿಕೊಳ್ಳಬೇಕು. ಉದಾಹರಣೆಗೆ ಔಷಧಿ ಮಾರಾಟ, ಆರೋಗ್ಯ ಉಪಕರಣಗಳ ಮಾರಾಟ, ವೈದ್ಯಕೀಯ ತಪಾಸಣೆಗೆ ಪ್ರಯೋಗಾಲಯ ಸ್ಥಾಪನೆ ಇತ್ಯಾದಿ ಸೇವೆಗಳನ್ನು ಆರಂಭಿಸಬಹುದು
5. ಮೇಲಿನ ಸೇವೆಗಳನ್ನು ಗ್ರಾಹಕರ ಮನೆಯ ಬಳಿಯಲ್ಲಿಯೇ ಸೇವಾ ಸೌಲಭ್ಯ ದೊರೆಯುವಂತೆ ಮೊಬೈಲ್ ವ್ಯಾನ್‌ಗಳ ಮೂಲಕವೂ ಮಾಡಿದರೆ ಇನ್ನೂ ಉತ್ತಮ.
6. ದೊಡ್ಡ ಸಹಕಾರಿ ಸಂಸ್ಥೆಗಳು ಆಸ್ಪತ್ರೆಗಳನ್ನು ಆರಂಭಿಸುವುದು ಮತ್ತು/ಅಥವ ವೈದ್ಯರ ಸಮಾಲೋಚನಾ ಸೇವೆಗಳನ್ನು ಸದಸ್ಯ ಕುಟುಂಬದ ಸದಸ್ಯರಿಗೆ ಒದಗಿಸಬಹುದು.
7. ನಗರ ಪ್ರದೇಶಗಳಲ್ಲಿರುವ ಸಹಕಾರಿ ಸಂಸ್ಥೆಗಳು ಫಿಟ್ನೆಸ್ ಸೆಂಟರ್‌ಗಳನ್ನು ಆರಂಭಿಸಬಹುದು
8. ಸಹಕಾರಿ ಸಂಘಗಳು ಸದಸ್ಯ ಕುಟುಂಬದವರಿಗೆ, ವಿಶೇಷವಾಗಿ ಗ್ರಾಮೀಣ ಜನರಿಗೆ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಬಹುದು ಮತ್ತು ಶುದ್ಧ ನೀರಿನ ಘಟಕಗಳನ್ನು ಸ್ಥಾಪಿಸಬಹುದು
9. ಸಹಕಾರಿ ಸಂಘಗಳು ಸದಸ್ಯರ ಆರೋಗ್ಯ ನಿಧಿಯೊಂದನ್ನು ಸ್ಥಾಪಿಸಿ, ವೈದ್ಯಕೀಯ ನೆರವು ಅಗತ್ಯವಿರುವ ಸದಸ್ಯರಿಗೆ ನೆರವು ನೀಡಬಹುದು.
10. ಸಹಕಾರಿ ಮಾದರಿಯಲ್ಲಿ ಆರೋಗ್ಯ ವಿಮೆ ಯೋಜನೆಯನ್ನು ಆರಂಭಿಸಬಹುದು.
11. ಶುಚಿತ್ವ ಆರೋಗ್ಯದ ಇನ್ನೊಂದು ಮುಖ. ಹಲವು ಆರೋಗ್ಯ ಸಮಸ್ಯೆಗಳ ಮೂಲವೆ ನೈರ್ಮಲ್ಯದ ಕೊರತೆ. ಆದುದರಿಂದ ಸಹಕಾರಿ ಸಂಘಗಳು ಶುಚಿತ್ವ ಮತ್ತು ನೈರ್ಮಲ್ಯ ಕುರಿತಂತೆ ಜಾಗೃತಿ, ಶಿಕ್ಷಣ ನೀಡುವ ಕೆಲಸ ಮಾಡಬಹುದು.

ಒಟ್ಟಾರೆಯಾಗಿ ಸಮುದಾಯದ ಆರೋಗ್ಯಕ್ಕೆ ಪೂರಕವಾದ ಯಾವುದೇ ಚಟುವಟಿಕೆಯನ್ನು ವ್ಯವಹಾರದ ಭಾಗವಾಗಿ ಅಥವ ಸಾಮಾಜಿಕ ಜವಾಬ್ದಾರಿಯ ರೂಪದಲ್ಲಿ ಮಾಡುವುದರ ಮೂಲಕ ಸಹಕಾರಿ ಸಂಸ್ಥೆಗಳು ಎಸ್ಡಿಜಿ 3ರ ಗುರಿ ತಲುಪಲು ಸಹಕರಿಸಬಹುದಾಗಿದೆ.

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080-23378375-80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು-560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1-ಕೆ-ಬ್ಲಾಕ್, ರಾಜಾಜಿನಗರ, ಬೆಂಗಳೂರು-560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು-570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪಾಂತೀಯ ಕಛೇರಿ: ನಂ 1-4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ-585102 ದೂ: 08472-270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010